# ಅಧ್ಯಾಯ 5

# ಕೈಗಾರಿಕೆಗಳು

ಕೈಗಾರಿಕೋದ್ಯಮಕ್ಕಾಗಿ, ಕೊಡಗು ಜಿಲ್ಲೆಯಲ್ಲಿ ಹೇರಳವಾಗಿ ದೊರಕುವ ಅರಣ್ಯ ಸಂಪತ್ತು (ಶೇ. 30ರಷ್ಟು) ಮತ್ತು ಕೃಷಿ ಕಚ್ಚಾ ವಸ್ತುಗಳನ್ನು ಸಂಪೂರ್ಣವಾಗಿ ಉಪಯೋಗಿಸಲು ಅವಕಾಶವಿದೆ. ಲೆಫ್ಟಿನೆಂಟ್ ಕಾನರ್ ಎಂಬುವವರು ತಮ್ಮ "ಮೆಮೊಯರ್ಸ್ ಆಫ್ ಕೊಡಗು ಸರ್ವೇ"ನಲ್ಲಿ ಹೀಗೆ ಹೇಳಿದ್ದಾರೆ. "ಕೊಡಗಿನ ಅರಣ್ಯದ ಬಗ್ಗೆ ಹೇಳುವುದಾದರೆ, ಅವು ವ್ಯಾಪ್ತಿಯಲ್ಲಿ, ಸಾಂದ್ರತೆಯಲ್ಲಿ, ವೈನಾಡುಪ್ರದೇಶದಲ್ಲಿದ್ದ ಅರಣ್ಯಕ್ಕಿಂತಲೂ ಪೂರ್ವದಾಗಿದ್ದು ಇಲ್ಲಿನ ವನಸಿರಿಯು ಪ್ರತೀಯೊಂದು ಸಸ್ಯವೂ ಬೇರೆ ಯಾವ ಪ್ರದೇಶದಲ್ಲೂ ಇರದ ಹೆಚ್ಚಿನ ವೈವಿಧ್ಯತೆಯ ಸ್ವರೂಪವನ್ನು ಹೊಂದಿದೆ. ಪುಷ್ಪ ವೈವಿಧ್ಯವೂ ಬಯಲು ಪ್ರದೇಶದಲ್ಲಿ ಇಲ್ಲದಿರುವ ವಿಭಿನ್ನತೆಯನ್ನು ಹೊಂದಿದೆ. ಹಾಗೂ ಕೆಲವು ಅರಣ್ಯ ಸಸ್ಯಗಳು ಸುವಾಸನೆಯನ್ನು ಹೊಂದಿದ್ದು ಕಾಂತಿಯನ್ನು ಹೊಂದಿವೆ. ಗಂಬೂಜ್, ರಸಬೆರ್ರಿ, ಬ್ಲಾಕ್‌ಬೆರ್ರಿ ಮರಗಳು ಬೆಟ್ಟ ಪ್ರದೇಶದಲ್ಲಿ ಹೇರಳವಾಗಿವೆ".

ಈ ಜಿಲ್ಲೆಯ ಪ್ರಮುಖ ಆರ್ಥಿಕ ಬೆಳೆಗಳು ಕಾಫಿ, ಏಲಕ್ಕಿ ಮತ್ತು ಮೆಣಸು ಆಗಿರುವುದರಿಂದ ಇವುಗಳಿಗೆ ಸಂಬಂಧಪಟ್ಟ ಕೃಷಿ ಆಧಾರಿತ ಕೈಗಾರಿಕೆಯನ್ನು ವೃದ್ಧಿಸಲು ಸಾಧ್ಯವಿದೆ. ಕಾವೇರಿ ಮತ್ತು ಅದರ ಉಪನದಿಗಳಾದ ಹೇಮಾವತಿ, ಹಾರಂಗಿ, ಲಕ್ಷ್ಮಣತೀರ್ಥ, ಸುವರ್ಣಾವತಿ ಮತ್ತು ಕಕ್ಕಬ್ಬೆಗಳು, ಉತ್ತಮ ಜಲಸಂಪನ್ಮೂಲವಾಗಿದ್ದು, ಕೈಗಾರಿಕೆ ಹಾಗೂ ನೀರಾವರಿಗೆ ಸಹಾಯವಾಗಿವೆ. ಮ್ಯಾಗ್ನಸೈಟ್, ಮಾಲಿಬ್ಡಿನಮ್ ಮತ್ತು ಬೆಣಚುಕಲ್ಲು ತಕ್ಕಮಟ್ಟಿಗೆ ಇಲ್ಲಿ ದೊರೆಯುವುದರಿಂದ ಔದ್ಯಮೀಕರಣಕ್ಕೆ ಇದನ್ನು ಬಳಸಬಹುದು. ಇಲ್ಲಿನ ವನಸಿರಿಯು ಟಸ್ಸಾರ್ ರೇಷ್ಮೆಗೆ ಸೂಕ್ತವೆಂದು ಭಾವಿಸಲಾಗಿದೆ.

ಪ್ರಾಚೀನ ಕಾಲದಲ್ಲೂ, ಇತ್ತೀಚಿನ ಶತಮಾನಗಳಲ್ಲೂ, ಈ ಜಿಲ್ಲೆಯಲ್ಲಿ ಔದ್ಯಮೀಕರಣಕ್ಕೆ ಹೆಚ್ಚಿನ ಪ್ರಾಧಾನ್ಯತೆ ನೀಡಿದಂತಿಲ್ಲ. ಕೆಲವೇ ಸಣ್ಣ ಕೈಗಾರಿಕೆಗಳು ಈ ಜಿಲ್ಲೆಯಲ್ಲಿರುವುದಕ್ಕೆ ಇಲ್ಲಿ ಬಂಡವಾಳವನ್ನು ಹೆಚ್ಚು ಯಾರೂ ತೊಡಗಿಸದಿರುವುದೇ ಕಾರಣವಿರಬೇಕು. ಸ್ಥಳೀಯ ಕೌಶಲ್ಯವೇ ಹೆಚ್ಚು ಪ್ರಾಧಾನ್ಯ ಹೊಂದಿ ಇದ್ದುದರಿಂದ, ಇತರೆ ಕೈಗಾರಿಕೆಗಳು ಪ್ರಗತಿಯಾಗಲಿಲ್ಲ. ಕೈಗಾರಿಕೆಯಲ್ಲಿ ಮರಗೆಲಸವೇ ಹೆಚ್ಚು ಪ್ರಚಲಿತವಾಗಿತ್ತು. ಜವಳಿ ಕೈಗಾರಿಕೆಯು ಈ ಜಿಲ್ಲೆಯಲ್ಲಿ ವ್ಯಾಪಕವಾಗಿ ಇರಲಿಲ್ಲ. ವೀರರಾಜಪೇಟೆಯನ್ನು ಸ್ಥಾಪಿಸಿದಾಗ ದೇವಾಂಗ ಜಾತಿಯ ನೇಕಾರರನ್ನು ಇಲ್ಲಿ ನೆಲೆಸುವಂತೆ ಮಾಡಿದ್ದು ಉಲ್ಲೇಖನೀಯ. 1856ರಲ್ಲಿ ಡಾ|| ಮೋಗ್ಲಿಂಗ್, ಮತ್ತು 1868ರಲ್ಲಿ ಲೆಫ್ಟಿನೆಂಟ್ ಮೆಕೆನ್‌ಜೀ ಅವರು ಗಮನಿಸಿದ ಕೆಲವು ಅವಶೇಷಗಳ ಮೂಲಕ ಇತಿಹಾಸ ಪೂರ್ವ ಕಾಲದಲ್ಲಿ ಈ ಜಿಲ್ಲೆಯ ಪ್ರದೇಶದಲ್ಲಿ ಕುಂಬಾರಿಕೆ ಒಂದು ಉತ್ತಮ ಕೈಗಾರಿಕೆಯಾಗಿತ್ತು ಎಂದು ತಿಳಿಯುತ್ತದೆ. ಈ ಕಾಲದಲ್ಲಿ ಕಬ್ಬಿಣದ ವಸ್ತುಗಳನ್ನು ತಯಾರಿಸುತ್ತಿದ್ದುದ್ದೂ ಸ್ಪಷ್ಟವಾಗಿದೆ.

ಶಿರಂಗಾಲದಲ್ಲಿ ಕೊಡವರು ಬಳಸುವ ಕಸೂತಿಯ ಚೇಲೆ ಅಥವಾ ನಡುಕಟ್ಟನ್ನು ತಯಾರಿಸುತ್ತಿದ್ದರು. ಬಡಜನರು ಬಳಸುವ ಒರಟು ಬಟ್ಟೆಯ ನೇಯ್ಗೆ ಕೊಡಲಿಪೇಟೆಯಲ್ಲಿ

ನಡೆಯುತ್ತಿತ್ತು. ನವಿರು ಬಟ್ಟೆಯೂ ಅಲ್ಲಿ ತಯಾರಾಗುತ್ತಿತ್ತು. *ಮಲೋನಿ ಎಂಬವರು ತಿಳಿಸಿದಂತೆ 1912ರಲ್ಲಿ* ಕೊಡಗಿನಲ್ಲಿ ಕಬ್ಬಿಣದ ಕೆಲಸ ಮಾಡುವ 196 ಗಂಡಸರಿದ್ದು ಅವರು ಕೊಡವರ ಪಾರಂಪರಿಕ ಬಳಕೆಯ ಕತ್ತಿಗಳನ್ನು ತಯಾರಿಸುತ್ತಿದ್ದರೆಂದು ಹೇಳಿದ್ದಾರೆ. ಒಡೆಯರ ಕಾಲದ ಇಂಥ ನಾಜೂಕಿನ ಕೆಲಸಗಾರಿಕೆಯ ಕೆಲವು ಕತ್ತಿಗಳನ್ನು ತಾವು ಕಂಡುದಾಗಿ ಅವರು ಹೇಳುತ್ತಾ ಈ ಕೈಗಾರಿಕೆ ಹಿಂದಿನಂತೆ ಪ್ರೋತ್ಸಾಹ ಪಡೆಯುತ್ತಿಲ್ಲ ಎಂದಿದ್ದಾರೆ.

ಈ ಪ್ರದೇಶದಲ್ಲಿ ಉಪಯೋಗಿಸುತ್ತಿದ್ದ ಬಹುಪಾಲು ಸಿದ್ಧ ವಸ್ತುಗಳು ಜಿಲ್ಲೆಯ ಹೊರಗಿನಿಂದ ಬರುತ್ತಿತ್ತು. ಗ್ರಾಮೀಣ ಬಡಗಿಯಾಗಲೀ, ಕಮ್ಮಾರನಾಗಲೀ ಕುಶಲ ಅಥವಾ ನಾಜೂಕಿನ ಕೆಲಸಗಳನ್ನು ಮಾಡಲು ತರಬೇತಿ ಪಡೆದವರಲ್ಲ. ಸುಸಂಘಟಿತ ಕೈಗಾರಿಕಾ ವ್ಯವಸ್ಥೆ ಜಾರಿಯಲ್ಲಿರಲಿಲ್ಲ. 1931ರ ಸುಮಾರಿಗೆ ದಕ್ಷಿಣ ಕೊಡಗಿನ, ಮಡಿಕೇರಿಯಲ್ಲಿ ಒಂದು ಚಹಾ ಕಾರ್ಖಾನೆಯೂ ಮತ್ತು ಒಂದು ಬತ್ತದ ಗಿರಣಿ ಆರಂಭವಾಯಿತು. ಉತ್ತರ ಕೊಡಗಿನಲ್ಲಿಯೂ ಒಂದು ಬತ್ತದ ಗಿರಣಿ ಸ್ಥಾಪಿತವಾಯಿತು. ಕೃಷಿಯಲ್ಲಿ ಈ ಜಿಲ್ಲೆಯು, ಪ್ರಗತಿಪರವಾಗಿದ್ದರೂ ಕೈಗಾರಿಕೆಯಲ್ಲಿ ತತ್ಸಮಾನವಾಗಿ ಅಭಿವೃದ್ಧಿ ಹೊಂದಿರಲಿಲ್ಲ. ದ್ವಿತೀಯ ಮಹಾ ಸಮರದ ನಂತರದ ದಿನಗಳಲ್ಲಿ, ಕುಂಬಾರಿಕೆ. ಚಾಪೆ ನೇಯುವಿಕೆ, *ಬುಟ್ಟಿ ತಯಾರಿಕೆ, ಚಿತ್ತದ ಕೆಲಸ ಮತ್ತು ಕಮ್ಮಾರಿಕೆ ಮೊದ*ಲಾದ ಕೈಗಾರಿಕೆಗಳು ಪ್ರಾರಂಭವಾದವು. ಆದರೆ ಇವೆಲ್ಲವೂ, ಅವ್ಯವಸ್ಥಿತವಾಗಿದ್ದು, ಕಾಲವ್ಯಯ ವಿಧಾನಗಳನ್ನನುಸರಿಸಿಕೊಂಡವಾಗಿದ್ದು, ಮಾರುಕಟ್ಟೆಯಲ್ಲಿ ನಿಗದಿತ ಪ್ರತಿಫಲ ದೊರಕಿಸಿಕೊಡುವ ಉದ್ಯೋಗಗಳಾಗಿರಲಿಲ್ಲ. ಬಹುಶಃ ಈ ಹೆಜ್ಜೆಯಲ್ಲಿ ಗಮನಿಸಿದ ಕಾರಣ, ಇಂದಿಗೂ ಬೃಹತ್ ಕೈಗಾರಿಕೆಗಳು ಈ ಜಿಲ್ಲೆಯಲ್ಲಿ ಇಲ್ಲವಾಗಿವೆ. ಆಗಿನ ಸರ್ಕಾರವು ಮುರ್ಕಳದಲ್ಲಿ ಒಂದು ಮರಗೆಲಸದ ಕಾರ್ಖಾನೆಯನ್ನೂ, ಮಡಿಕೇರಿಯಲ್ಲಿ ಕೇಂದ್ರ ಕೈಗಾರಿಕಾ ಕಾರ್ಯಾಗಾರವನ್ನೂ ಸ್ಥಾಪಿಸಿತು. ಇವುಗಳನ್ನು ಬೃಹತ್ ಕೈಗಾರಿಕೆಗಳ ಪಟ್ಟಿಯಲ್ಲಿ ಸೇರಿಸಲಾಗುವುದಿಲ್ಲ. ಹಾಗೆಯೇ ಮಧ್ಯಮ ಕೈಗಾರಿಕೆಗಳು ಹೆಚ್ಚಿನ ಸಂಖ್ಯೆಯಲ್ಲಿರಲಿಲ್ಲ. ಇತ್ತೀಚಿನ ಬೆಳವಣಿಗೆಯಲ್ಲಿ ಈ ಜಿಲ್ಲೆಯೂ ಕೈಗಾರಿಕಾ ಕ್ಷೇತ್ರದಲ್ಲಿ ಪ್ರಗತಿಯನ್ನು ಸಾಧಿಸುವ ದಿಸೆಯಲ್ಲಿ ಹೆಜ್ಜೆ ಇಡುತ್ತಿದೆ. 31-3-90ರ ಹೊತ್ತಿಗೆ ಈ ಜಿಲ್ಲೆಯಲ್ಲಿ 967ಕೈಗಾರಿಕಾ ಘಟಕಗಳಿದ್ದವು (ಆಧಾರ ಜಿಲ್ಲಾ ಕೈಗಾರಿಕಾ ಕೇಂದ್ರ – ಮಡಿಕೇರಿ). ಈ ಕೆಳಗಿನ ಪಟ್ಟಿಯಲ್ಲಿ ಈ ಜಿಲ್ಲೆಯಲ್ಲಿನ ಸಣ್ಣ ಪ್ರಮಾಣದ ಕೈಗಾರಿಕೆಗಳು, ಭೌಗೋಲಿಕ ಕೇಂದ್ರೀಕರಣವನ್ನು ಕೊಟ್ಟಿದೆ.

| ಕ್ರ. ಸಂ. | ಬ್ಲಾಕ್ : ಸ್ಥಳದ ಹೆಸರು | ಸಾಮಾನ್ಯ ಇಂಜಿನೀರಿಂಗ್ | ರಸಾಯನಿಕ ಮತ್ತು ಪ್ಲಾಸ್ಟಿಕ್ | ಕೃಷಿ ಆಧಾರಿತ ಮತ್ತು ಆಹಾರ | ಟೆಕ್ಸ್‌ಟೈಲ್ಸ್ | ವಿದ್ಯುತ್ ಮತ್ತು ಇಲೆಕ್ಟ್ರಾನಿಕ್ಸ್ | ಅರಣ್ಯ ಆಧಾರಿತ | ಇತರೆ |
|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 |
| ಎ. | ಮಡಿಕೇರಿ ಬ್ಲಾಕ್ | | | | | | | |
| 1. | ಮಡಿಕೇರಿ | 58 | 28 | 71 | 31 | 17 | 22 | 36 |
| 2. | ಪೆರಾಜೆ | 1 | — | — | — | — | — | — |
| 3. | ಭಾಗಮಂಡಲ | — | 1 | 4 | — | 1 | 2 | 1 |
| 4. | ಕರಡ | — | — | 1 | — | — | — | — |
| 5. | ಗಾಳಿಬೀಡು | 1 | — | 3 | — | — | 1 | 1 |
| 6. | ಕೊಯನಾಡು | — | — | 2 | — | — | — | 1 |
| 7. | ಚೇರಂಬಾಣೆ | 3 | — | 7 | — | — | — | 2 |
| 8. | ಮೂರ್ನಾಡು | 5 | 1 | 7 | 2 | — | — | — |
| 9. | ಹೊದ್ದೂರು | — | — | 1 | — | — | — | 1 |
| 10. | ಮುಕ್ಕಂದೂರು | — | 1 | — | — | — | 1 | — |
| 11. | ಮರಗೋಡು | — | — | — | — | — | — | 1 |
| 12. | ಬೆಟ್ಟಗೇರಿ | — | — | 2 | 1 | — | 1 | — |

| 1 | 2 | 3 | 4 | 5 | 6 | 7 | 8 | 9 |
|---|---|---|---|---|---|---|---|---|
| 13. | ಕರಿಕೆ | — | — | 2 | — | — | — | 1 |
| 14. | ಚೆಟ್ಟಿಮನಿ | — | — | 2 | — | — | — | — |
| 15. | ನಾಪೋಕ್ಲು | 2 | — | 4 | 4 | — | — | — |
| 16. | ಮೂದಾಪುರ | — | — | — | — | 1 | — | — |
| | ಮೊತ್ತ 'ಎ' | 70 | 31 | 106 | 38 | 19 | 28 | 44 |
| ಬಿ. | ವೀರರಾಜಪೇಟೆ ಬ್ಲಾಕ್ | | | | | | | |
| 1. | ವೀರರಾಜಪೇಟೆ | 31 | 24 | 38 | 12 | 6 | 16 | 15 |
| 2. | ಗೋಣಿಕೊಪ್ಪಲು | 21 | 6 | 15 | 2 | — | 3 | 6 |
| 3. | ಪೊನ್ನಂಪೇಟೆ | 8 | 2 | 4 | 2 | — | 3 | 4 |
| 4. | ಕಿರಗೂರು | — | — | 2 | — | — | — | — |
| 5. | ಕುಟ್ಟ | 1 | — | — | — | — | — | — |
| 6. | ಸಿದ್ದಾಪುರ | 9 | 2 | 4 | 1 | 1 | 7 | 6 |
| 7. | ಪೊಲ್ಲಿಬೆಟ್ಟ | — | 1 | 3 | — | 1 | — | 3 |
| 8. | ಹುದಿಕೇರಿ | 1 | — | 3 | — | — | — | — |
| 9. | ಅಮ್ಮತ್ತಿ | 2 | 1 | 4 | — | 1 | 2 | 3 |
| 10. | ಮಾಯಮುಡಿ | — | 1 | — | — | — | — | — |
| 11. | ಬಾಳೆಲೆ | — | — | 1 | — | — | — | 1 |
| 12. | ದೇವರಪುರ | — | — | — | — | — | 1 | — |
| 13. | ತಿತಿಮತಿ | — | — | — | 1 | — | — | — |
| 14. | ಚಿಕ್ಕಸೊಡ್ಲೂರು | 1 | — | — | — | — | — | — |
| 15. | ಕೋತೂರು | 1 | — | — | — | — | — | — |
| 16. | ಶ್ರೀಮಂಗಲ | 1 | — | 2 | 1 | 1 | — | 1 |
| 17. | ಬಿಟ್ಟಂಗಾಲ | 1 | — | — | — | — | — | — |
| | ಮೊತ್ತ | 77 | 37 | 76 | 19 | 10 | 32 | 39 |
| ಸಿ. | ಸೋಮವಾರಪೇಟೆ ಬ್ಲಾಕ್ | | | | | | | |
| 1. | ಸೋಮವಾರಪೇಟೆ | 34 | 18 | 34 | 5 | 6 | 24 | 6 |
| 2. | ನಗರೂರು | — | — | — | — | 1 | — | — |
| 3. | ಶನಿವಾರಸಂತೆ | 4 | 4 | 8 | 2 | 1 | 1 | 3 |
| 4. | ಕುಶಾಲನಗರ | 36 | 6 | 24 | 5 | 5 | 10 | 6 |
| 5. | ಗೌಡಳ್ಳಿ | — | — | 1 | — | — | — | — |
| 6. | ಕೊಡ್ಲಿಪೇಟೆ | 4 | 2 | 6 | 2 | 2 | 4 | 2 |
| 7. | ಹೆಬ್ಬಾಳ | 12 | — | 5 | — | — | 4 | — |
| 8. | ಸುಂಟಿಕೊಪ್ಪ | 7 | 2 | 11 | 3 | 1 | 1 | 4 |
| 9. | ಚೆಟ್ಟಳ್ಳಿ | 1 | — | — | — | — | — | — |

| 1 | 2 | 3 | 4 | 5 | 6 | 7 | 8 | 9 |
|---|---|---|---|---|---|---|---|---|
| 10. | ಶಿರಂಗಾಲ | 4 | — | 3 | 1 | — | 3 | — |
| 11. | ಕೂಡಿಗೆ | 4 | — | 3 | — | — | — | 2 |
| 12. | ಐಗೂರು | 1 | — | — | — | — | — | — |
| 13. | ಟಿ. ಶೆಟ್ಟಿಗೇರಿ | — | — | 1 | — | — | — | — |
| | ಮೊತ್ತ | 107 | 32 | 97 | 18 | 16 | 47 | 23 |
| ಒಟ್ಟು ಮೊತ್ತ (ಎ+ಬಿ+ಸಿ) | | 255 | 100 | 279 | 75 | 45 | 107 | 106 |

ಈ ಜಿಲ್ಲೆಯು ಕೈಗಾರಿಕೆಯಲ್ಲಿ ಹೆಚ್ಚು ಅಭಿವೃದ್ಧಿಯಾಗದಿರಲು ಈ ಕೆಳಕಂಡ ಕಾರಣಗಳನ್ನು ಹೇಳಬಹುದು. ಮೊದಲನೆಯದಾಗಿ ಕೈಗಾರಿಕಾ ಸ್ಥಾವರಗಳನ್ನು ಪ್ರಾರಂಭ ಮಾಡಬೇಕೆಂಬ ಮನೋಭಾವ ಉಂಟಾಗಲು ಆರ್ಥಿಕ ಆವಶ್ಯಕತೆ ಇರಬೇಕು. ಈ ಜಿಲ್ಲೆಯಲ್ಲಿ ಆ ಆವಶ್ಯಕತೆಗೆ ಇಂಬುಇರಲಿಲ್ಲ. ಕಾಫಿ,ಏಲಕ್ಕಿ ಮೆಣಸು, ಬತ್ತ ಮೊದಲಾದವುಗಳ ಬೆಳೆ ಹೇರಳವಾಗಿದ್ದುದರಿಂದ ಈ ಜಿಲ್ಲೆಯಲ್ಲಿನ ಜನ ಸಮುದಾಯವು ಸಾಧಾರಣವಾಗಿ ಸಂತೃಪ್ತವಾಗಿದ್ದು ಇತರೆ ಕೆಲಸ ಕಾರ್ಯಗಳಲ್ಲಿ ಆಸಕ್ತಿ ತಳೆದಿರಲಿಲ್ಲ ಹಾಗೂ ತಮ್ಮ ಎಲ್ಲಾ ಸಮಯ ಹಾಗೂ ಕೆಲಸ ಕಾರ್ಯಗಳನ್ನು ಕೃಷಿ ಅಭಿವೃದ್ಧಿಗಾಗಿ ವ್ಯಯಿಸುತ್ತಿದುದರಿಂದ, ಕೈಗಾರಿಕೆಯ ಕಡೆಗೆ ಒಲವು ಇರಲಿಲ್ಲವೆಂದು ತೋರುತ್ತದೆ. ಲೆಫ್ಟಿನೆಂಟ್ ಕಾನರ್ ತಿಳಿಸುವಂತೆ "ಈ ಜಿಲ್ಲೆಯ ಯಾವ ಪಟ್ಟಣವೂ ತಯಾರಿಕೆಯ ಸ್ಥಾವರವಾಗಿರದೇ, ಇಲ್ಲಿಯ ಜನಾಂಗವು ಯಾವುದೇ ಚಟುವಟಿಕೆ ತೋರುವ ಹವ್ಯಾಸವನ್ನು ಹೊಂದಿಕೊಂಡಿಲ್ಲ. ಜನ ಸಮುದಾಯದ ಯಾವುದೇ ಘಟಕವು ಕೈಗಾರಿಕೆಯಲ್ಲಿ ಪ್ರಗತಿ ಹೊಂದಿರಲಿಲ್ಲ. ತಾವು ಬೆಳೆದ ಪದಾರ್ಥಗಳನ್ನು ಕೊಟ್ಟು ತಮಗೆ ಬೇಕಾದ ಕೆಲವು ಸಿದ್ಧ ವಸ್ತುಗಳನ್ನು ಪಡೆಯುತ್ತಿದ್ದರು. ಈ ಜಿಲ್ಲೆಯ ಜನ ಹೆಚ್ಚು 'ಭೂಮಿಯ ನೆಂಟು' ಹೊಂದಿದ್ದರು. ಕೃಷಿಯು ಅವರ ಪ್ರಾಥಮಿಕ ಕಸುಬಾಗಿದ್ದು ಬೇರೆ ಯಾವುದೇ ವೃತ್ತಿಯು ಅವರನ್ನು ಆಕರ್ಷಿಸಲಿಲ್ಲ. ಜಮ್ಮಾ ವಿಧಾನದ ಭೂಸ್ವಾಧೀನ ಪದ್ಧತಿಯಿಂದ, ಯಾರಿಗೂ ತಮ್ಮ ಜಮೀನನ್ನು ಪರಭಾರೆ ಮಾಡಲು ಅನುಮತಿ ಇರಲಿಲ್ಲ. ಆದ್ದರಿಂದ ಕೊಡಗಿನ ಪ್ರತಿಯೊಬ್ಬ ವ್ಯಕ್ತಿಗೂ, ಇತರ ವಿಭಿನ್ನ ಕೈಗಾರಿಕೆಗಳಿಗಿಂತ, ಕೃಷಿಯಲ್ಲಿ ಹೆಚ್ಚು ಆಸಕ್ತಿ ಇತ್ತು".

ಇವುಗಳಿಗೆ ಪೂರಕವಾಗಿ, ವಿದ್ಯುಚ್ಛಕ್ತಿಯ ಕೊರತೆ, ಸಾರಿಗೆ ಸೌಲಭ್ಯ ಇಲ್ಲದಿರುವಿಕೆ, ಮತ್ತು ಕೆಲಸದಾಳುಗಳ ಕೊರತೆಯು ಕೈಗಾರಿಕೆಯಲ್ಲಿ ಪ್ರಗತಿಯನ್ನು ಸಾಧಿಸದೇ ಇರಲು ಕಾರಣ. ಇಡೀ ಕೊಡಗು ಜಿಲ್ಲೆಗೆ ರೈಲು ಸಂಪರ್ಕ ಸಾಧನವಿಲ್ಲ. ಆದರೆ ಮುಖ್ಯ ರಸ್ತೆಗಳ ಮೂಲಕ ದಕ್ಷಿಣ ಕನ್ನಡಕ್ಕೆ ಒಂದು, ಕೇರಳಕ್ಕೆ 2, ಮತ್ತು ಹಳೇ ಮೈಸೂರು ಪ್ರದೇಶಕ್ಕೆ 4 ಹೆದ್ದಾರಿ ಮಾರ್ಗಗಳಿದ್ದವು. ಆದ್ದರಿಂದ ಜಿಲ್ಲೆಯಿಂದ ಆಯಾತ ನಿರ್ಯಾತವನ್ನು ರಸ್ತೆಯ ಮೂಲಕವೇ ಮಾಡಬೇಕಾಗಿತ್ತು. ಈ ವಿಧಾನವು ದುಬಾರಿಯಾಗಿದ್ದುದರಿಂದ ಇಲ್ಲಿ ವಸ್ತುಗಳನ್ನು ತಯಾರು ಮಾಡಬೇಕಾದರೆ, ಕಚ್ಚಾವಸ್ತುಗಳನ್ನು ತರಲು ಹಾಗೂ ತಯಾರಿಸಿದ ವಸ್ತುಗಳನ್ನು ಕಳುಹಿಸಲು ವಾಹನಗಳಿಗೆ ಹಣ ಕೊಡಬೇಕಾಗಿ ಬರುತ್ತಿತ್ತು. ಇದರಿಂದ ಇಲ್ಲಿನ ವಸ್ತುಗಳು ಇತರ ಮಾರುಕಟ್ಟೆಗಳ ಬೆಲೆಗಳೊಡನೆ ಸ್ಪರ್ಧಿಸಲು ಸಾಧ್ಯವಾಗುತ್ತಿರಲಿಲ್ಲವೆಂಬ ಅಂಶವನ್ನು ಗಮನಿಸಬೇಕಾದುದು ಅತ್ಯವಶ್ಯಕ.

ಇಲ್ಲಿಯ ಜನಜೀವನ ವ್ಯವಸ್ಥೆಯೂ ಇಲ್ಲಿಯ ಕೈಗಾರಿಕಾ ಪ್ರಗತಿ ಕುಂಠಿತವಾಗಲು ಕಾರಣವೆಂದು ಹೇಳಬಹುದು. ಏಕೆಂದರೆ ಜಮ್ಮಾ ಪದ್ಧತಿಯ "ಸಂಸಾರ"ವಿದ್ದುದರಿಂದ, ಕುಟುಂಬದಲ್ಲಿನ ಯಾವುದೇ ಸದಸ್ಯನಿಗೆ/ಳಿಗೆ, ಕೆಲಸ ಮಾಡಲಿ, ಮಾಡದಿರಲಿ ಹೊಟ್ಟೆ ತುಂಬುತ್ತಿತ್ತು. ಆದುದರಿಂದ ಬೇರೆ ಯಾವುದೇ ವೃತ್ತಿಯನ್ನು ಅನುಸರಿಸುವುದರ ಬಗ್ಗೆ ಹೆಚ್ಚಿನ ಆಸಕ್ತಿ ಇರಲಿಲ್ಲ. ಕಾಫಿ, ಟೀ ತೋಟಗಳು ಅಭಿವೃದ್ಧಿಯಾದಂತೆ, ತೋಟದಲ್ಲಿ ಕೆಲಸ ಮಾಡಲು ಸ್ಥಳೀಯರಿಗಿಂತಲೂ ಕೇರಳದ ಕೆಲಸಗಾರರೇ ಹೆಚ್ಚಾಗಿದ್ದಾರೆ. ಈ ವಿವರಣೆ ನೀಡಿದಾಗ ಇಲ್ಲಿಯ ಕೆಲಸಗಾರರೆಲ್ಲರಿಗೂ ಉದ್ಯೋಗ ದೊರೆತಿದೆ ಎಂದು ಅರ್ಥೈಸಬಾರದು. ಇಲ್ಲಿಯ ಜನರು ಉದ್ಯೋಗ ವಿಹೀನರು ಎಂಬುದಕ್ಕಿಂತ 'ಸರಿಸಮಾನ ಉದ್ಯೋಗ' ಅವರಿಗೆ ಇಲ್ಲದಿರುವುದೇ ಮುಖ್ಯ ಸಂಗತಿ.

ಇವೂ ಅಲ್ಲದೆ, ಇಲ್ಲಿನ ಸಮಾಜ ರಚನೆಯು, ಇಲ್ಲಿಯ ಜನರನ್ನು ಸಂಪ್ರದಾಯ ಹಾಗೂ ಸಾಮಾಜಿಕ ಒಲವು ಇವು

ಗಳಿಗೆ, ಬದ್ಧರನ್ನಾಗಿ ಮಾಡಿವೆ. ಒಬ್ಬ ಕಮ್ಮಾರನ ಮಗನಿಗೆ ತನ್ನ ಕುಲಕಸಬನ್ನು ಬಿಟ್ಟು ಬೇರೆ ಕಸಬನ್ನು ಮಾಡುವ ಮನೋಧರ್ಮ ಇರಲಿಲ್ಲ. ಇತ್ತೀಚಿನ ದಿನಗಳಲ್ಲಿ ಈ ಪ್ರವೃತ್ತಿ ಕಡಿಮೆಯಾಗುತ್ತಿದ್ದರೂ ಕೆಲವು ಕಸಬುಗಳಲ್ಲಿ ಇಲ್ಲಿಯ ಜನರಿಗೆ ಒಲವು ಇಲ್ಲ. ಉದಾಹರಣೆಗೆ, ಹೇರಳವಾಗಿ ವನಸಿರಿ ಇದ್ದರೂ, ಬಡಗಿಯಾಗಿ ಕೆಲಸ ಮಾಡಲು ಸ್ಥಳೀಯರಿಗೆ ಒಲವು ಇರಲಿಲ್ಲ. ಪಾರಂಪರಿಕವಾಗಿ ಬುಟ್ಟಿ ಹೆಣೆಯುವ ಎಣ್ಣೆ ತೆಗೆಯುವ, ನೇಯುವ, ಮಡಿಕೆ ಮಾಡುವ, ಹೀಗೆ ಕೆಲವೇ ಕೈಕೆಲಸಗಾರರು ಹಾಗೂ ಲೋಹಕರ್ಮಿಗಳು ಇಲ್ಲಿ ಮಿತಸಂಖ್ಯೆಯಲ್ಲಿ ಕೈಗಾರಿಕಾ ಚಟುವಟಿಕೆಗಳಲ್ಲಿ ಮಗ್ನರಾಗಿದ್ದರು.

ಹೀಗೆ ಸಾಮಾಜಿಕ, ಆರ್ಥಿಕ ಕಾರಣಗಳೂ ಸಾಂಪ್ರದಾಯಿಕತೆಯೂ ಈ ಜಿಲ್ಲೆಯ ಕೈಗಾರಿಕೆಯ ಪ್ರಗತಿಗೆ ಸ್ವಲ್ಪಮಟ್ಟಿಗೆ ಅಡ್ಡಿಯಾಗಿದ್ದವು. ಕ್ರಮೇಣ ಇವು ಕಡಿಮೆಯಾಗಿ, ಇತ್ತೀಚಿನ ದಿನಗಳಲ್ಲಿ ಔದ್ಯೋಗೀಕರಣವು ಹೆಚ್ಚುತ್ತಿದ್ದು ಹೊಸಕೈಗಾರಿಕೆಗಳು ಪ್ರಾರಂಭವಾಗುತ್ತಿವೆ.

## ವಿದ್ಯುತ್ ಸರಬರಾಜು

ಈ ಜಿಲ್ಲೆಯಲ್ಲಿ ಮೊಟ್ಟಮೊದಲಿಗೆ ವಿದ್ಯುತ್ ಸರಬರಾಜು 1940ರಲ್ಲಿ ಆಯಿತು. "ದಿ ಕೂರ್ಗ್ ಎಲೆಕ್ಟ್ರಿಕ್ ಕಂಪನಿ ಲಿಮಿಟೆಡ್, ಮಡಿಕೇರಿ" ಎಂಬ ಸಂಸ್ಥೆಯು "ದಿ ಮೆಕೆಲಿಕ್ ಇಂಜಿನಿಯರಿಂಗ್ ಕಂ, ಮದ್ರಾಸ್" ಎಂಬ ಸಂಸ್ಥೆಯ ಉಸ್ತುವಾರಿಯಲ್ಲಿ ಪ್ರಾರಂಭವಾಯಿತು. ಈ ಕಂಪನಿಯು ಮಡಿಕೇರಿಯಲ್ಲಿ ಒಂದು ಡೀಸಲ್ ಸ್ಥಾವರವನ್ನು ಮಡಿಕೇರಿ ಪಟ್ಟಣಕ್ಕೆ ವಿದ್ಯುತ್ ಸರಬರಾಜು ಮಾಡಲೋಸುಗ ಸ್ಥಾಪಿಸಿತು. ಆದರೆ ಈ ಸರಬರಾಜು ವ್ಯವಸ್ಥಿತವಾಗಿಲ್ಲದೇ, ವಿದ್ಯುತ್ ಸರಬರಾಜು ಸಮಾಧಾನಕರವಾಗಿರಲಿಲ್ಲ. ಈ ವಿದ್ಯುತ್‌ಜನಕ 1949ರಲ್ಲಿ ಸಂಪೂರ್ಣವಾಗಿ ನಿರುಪಯುಕ್ತವಾಗಿ, ಅನೇಕ ತಿಂಗಳುಗಳು ವಿದ್ಯುತ್ ಸರಬರಾಜು ಆಗಲಿಲ್ಲ. ದುರಸ್ತಿ ಮಾಡಿದರೂ ಸತತವಾಗಿ ವಿದ್ಯುತ್ ಸರಬರಾಜು ಮಾಡಲು ಈ ಸ್ಥಾವರಕ್ಕೆ ಸಾಧ್ಯವಾಗಲಿಲ್ಲ. ಈ ಕಂಪೆನಿಯ ಆರ್ಥಿಕ ಪರಿಸ್ಥಿತಿಯು, ಗಂಭೀರವಾಗಿದ್ದರಿಂದ, ಬೇರೆ ವಿದ್ಯುತ್‌ಜನಕಗಳನ್ನು ಅಳವಡಿಸಲು ಸಾಧ್ಯವಾಗಲಿಲ್ಲ. ಅನೇಕ ತಿಂಗಳುಗಳು ಬೀದಿ ದೀಪಗಳು ಇರಲಿಲ್ಲ. ಆಗಿನ ಕೊಡಗು ಸರ್ಕಾರವು, ಮೈಸೂರು ಸರ್ಕಾರದಿಂದ ವಿದ್ಯುತ್ತನ್ನು ಪಡೆಯಲು ಮಾತುಕತೆ ನಡೆಸಿತು. ಆದರೆ ಮೈಸೂರು ಸರ್ಕಾರದ ಕೆಲವು ಷರತ್ತುಗಳು ಕೊಡಗಿನ ಸರ್ಕಾರಕ್ಕೆ ಒಪ್ಪಿಗೆಯಾಗಲಿಲ್ಲ. ಇದರಿಂದ ಕೊಡಗು ಸರ್ಕಾರವು ಭಾರತ ಸರ್ಕಾರದ ಅಂಗೀಕಾರದೊಡನೆ ಕೂರ್ಗ್ ಎಲೆಕ್ಟ್ರಿಕ್ ಕಂಪೆನಿಯನ್ನು ತನ್ನ ಅಧೀನಕ್ಕೆ ತೆಗೆದುಕೊಂಡು ನಂತರ ಅದನ್ನು 75,000 ರೂ.ಗಳಿಗೆ ಖರೀದಿ ಮಾಡಿತು. ವಿದ್ಯುತ್‌ಜನಕಾಗಾರವನ್ನು ಪುನಶ್ಚೇತನಗೊಳಿಸಲಾಯಿತು. 60 ಕಿ.ವ್ಯಾ. ಮತ್ತು 120 ಕಿ.ವ್ಯಾ.ನ ಎರಡು ವಿದ್ಯುತ್‌ಜನಕಗಳನ್ನು ರೂ. 1,32,829 ವೆಚ್ಚದಲ್ಲಿ ತರಿಸಲಾಯಿತು. ಅಗತ್ಯವಿದ್ದಲ್ಲಿ ವಿದ್ಯುತ್ ತಂತಿಗಳನ್ನು ದುರಸ್ತಿಗೊಳಿಸಲಾಯಿತು. ಇವುಗಳ ಒಟ್ಟು ವೆಚ್ಚ ರೂ. 3,33,456 ಆಗಿದ್ದಿತು.

ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ ಗ್ರಾಮೀಣ ವಿದ್ಯುದೀಕರಣ ಯೋಜನೆಯಂತೆ, ಭಾರತ ಸರ್ಕಾರವು ಕೊಡಗು ಸರ್ಕಾರಕ್ಕೆ ರೂ. 7.41 ಲಕ್ಷ ಸಾಲವನ್ನಾಗಿ ಗ್ರಾಮೀಣ ಪ್ರದೇಶಗಳಿಗೆ, ವಿದ್ಯುತ್ ಸರಬರಾಜು ಮಾಡಲು ಹಾಗೂ ಉದ್ಯೋಗಾವಕಾಶಗಳನ್ನು ಹೆಚ್ಚಿಸಲು ಕೊಡಮಾಡಿತು. ಈ ಯೋಜನೆಯಂತೆ ವೀರರಾಜಪೇಟೆ, ಹಾಗೂ ಸೋಮವಾರಪೇಟೆ ಪಟ್ಟಣಗಳನ್ನು ಆರಿಸಿ, ಇಲ್ಲಿ ಉಷ್ಣದಿಂದ ವಿದ್ಯುತ್ ತಯಾರಿಸುವ ಯಂತ್ರಗಳನ್ನು ಸ್ಥಾಪಿಸಲಾಯಿತು. ವೀರರಾಜಪೇಟೆಯಲ್ಲಿ 60 ಕಿ.ವ್ಯಾ.ನ ಎರಡು, ಮತ್ತು 120 ಕಿ.ವ್ಯಾ.ನ ಒಂದು ಘಟಕಗಳಿದ್ದವು.

ದಿನಾಂಕ 24-3-1956 ರಿಂದ ಇಲ್ಲಿಗೆ ವಿದ್ಯುತ್ ಸರಬರಾಜು ಪ್ರಾರಂಭವಾಯಿತು. ಸೋಮವಾರಪೇಟೆಯಲ್ಲಿ 60 ಕಿ. ವ್ಯಾ.ನ ಒಂದು ಯಂತ್ರವಿದ್ದು ದಿನಾಂಕ 9-2-1956 ರಿಂದ ವಿದ್ಯುತ್ ಸರಬರಾಜು ಪ್ರಾರಂಭವಾಯಿತು.

ಎರಡನೇಯ ಪಂಚವಾರ್ಷಿಕ ಯೋಜನೆಯಲ್ಲಿ ಕುಶಾಲನಗರದಿಂದ ಶಿರಂಗಾಲವರೆಗಿನ ಪ್ರದೇಶ ಹಾಗೂ ಕೂಡಿಗೆ ಕೃಷಿ ಹಾಗೂ ಹೈನುಗಾರಿಕಾ ಕೇಂದ್ರಗಳನ್ನು ವಿದ್ಯುದೀಕರಣಗೊಳಿಸಲು ಆರಿಸಲಾಯಿತು. ಈ ಸ್ಥಳಗಳಲ್ಲಿ ಬೆಳೆಗಳಿಗೆ ನೀರಾವರಿ ಸೌಕರ್ಯ ಅವಶ್ಯಕವಾಗಿತ್ತು. ಹೀಗಾಗಿ ಕುಶಾಲನಗರ, ಕೂಡಿಗೆ ಸ್ಥಳಗಳನ್ನು ವಿದ್ಯುದೀಕರಣ ಮಾಡಲಾಯಿತು. ಕೃಷ್ಣರಾಜನಗರದಿಂದ ಕುಶಾಲನಗರಕ್ಕೆ 66 ಕಿ. ವ್ಯಾ. ತಂತಿ ಸಾಲನ್ನು ಹಾಕಲಾಯಿತು. ಹಾಸನದ ಕಡೆಯಿಂದ, ಕೊಡ್ಲಿಪೇಟೆ ಮತ್ತು ಶನಿವಾರಸಂತೆ ಸ್ಥಳಗಳಿಗೆ ವಿದ್ಯುತ್ ಸರಬರಾಜು ಮಾಡಲಾಯಿತು. ಶರಾವತಿ ವಿದ್ಯುದಾಗಾರದಿಂದ, ಕುಶಾಲನಗರ, ಕೂಡಿಗೆ, ಕೊಡ್ಲಿಪೇಟೆ, ಮತ್ತು ಶನಿವಾರಸಂತೆ ಈ ನಾಲ್ಕು ಸ್ಥಳಗಳಿಗೆ, ಜಲವಿದ್ಯುತ್ತನ್ನು

ಒದಗಿಸಲಾಗಿತ್ತು. ಈ ಕಾರ್ಯಗಳಿಗೆ ದ್ವಿತೀಯ ಪಂಚ ವಾರ್ಷಿಕ ಯೋಜನೆಯಲ್ಲಿ ಸುಮಾರು ರೂ. 12.50 ಲಕ್ಷ ವೆಚ್ಚವಾಗಿತ್ತು. ಇದೇ ಯೋಜನೆಯ ಅಡಿಯಲ್ಲಿ ಗೋಣಿ ಕೊಪ್ಪಲಿನಲ್ಲಿ 66 ಕಿ.ವ್ಯಾ.ನ ಒಂದು ಘಟಕವನ್ನು ಸ್ಥಾಪಿಸ ಲಾಯಿತು.

ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ, ಬರಪೊಳೆ ಜಲವಿದ್ಯುತ್ ಕೇಂದ್ರವನ್ನು ಸ್ಥಾಪಿಸಲು ಯೋಜಿಸಿ ಇದಕ್ಕಾಗಿ ರೂ. 20 ಲಕ್ಷ ಕಾದಿರಿಸಲಾಗಿತ್ತು. ಆದರೆ ಆರ್ಥಿಕ ಅಡಚಣೆ ಗಳಿಂದ ಇದು ಕಾರ್ಯಾಚರಣೆಗೆ ಬರಲಿಲ್ಲ.

ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಕಛೇರಿಯು 1956 ರಲ್ಲಿ ಒಬ್ಬ ಫೋರ್‌ಮನ್ ನೇತೃತ್ವದಲ್ಲಿ ಪ್ರಾರಂಭವಾಯಿತು. 1958ರಲ್ಲಿ ಉಪವಿಭಾಗವು ಒಬ್ಬ ಸಹಾಯಕ ಕಾರ್ಯ ನಿರ್ವಹಣಾಧಿಕಾರಿಯ ಮೇಲ್ವಿಚಾರಣೆಯಲ್ಲಿಪ್ರಾರಂಭವಾಯಿತು ಪ್ರತ್ಯೇಕ ವಿಭಾಗವು 1978ರಲ್ಲಿ ಪ್ರಾರಂಭವಾಗಿ ಒಬ್ಬ ಕಾರ್ಯನಿರ್ವಾಹಕ ಇಂಜಿನಿಯರನ್ನು ನೇಮಿಸಲಾಯಿತು ಹಾಗೂ ಒಂದು 'ಒ' ಮತ್ತು 'ಎಂ' ಉಪವಿಭಾಗವನ್ನು ಮಡಿಕೇರಿಯಲ್ಲಿ ಪ್ರಾರಂಭಿಸಲಾಯಿತು.

1990ರಲ್ಲಿ ಈ ವಿಭಾಗದಲ್ಲಿ 473 ಮಂದಿ ಕೆಲಸಗಾರ ರಿದ್ದು ಅವರಲ್ಲಿ ಅಧಿಕಾರಿಗಳ ಸಂಖ್ಯೆ ವಿವರ: ಕಾರ್ಯ ನಿರ್ವಾಹಕ ಇಂಜಿನಿಯರ್ 1, ಲೆಕ್ಕಾಧಿಕಾರಿ 1, ಸಹಾಯಕ ಕಾರ್ಯನಿರ್ವಾಹಕ ಇಂಜನಿಯರ್–3, ಸಹಾಯಕ ಇಂಜನಿ ಯರ್-14, ಸಹಾಯಕ ಇಂಜಿನಿಯರ್ (ಸಿವಿಲ್) 1, ಜೂನಿ ಯರ್ ಇಂಜಿನಿಯರ್ 20 ಮತ್ತು ಸಹಾಯಕ ಲೆಕ್ಕಾಧಿಕಾರಿ3 ಮತ್ತು ಉಳಿದ ಕೆಲಸಗಾರರು. ಈ ಕಛೇರಿಯು ಮೈಸೂರಿ ನಲ್ಲಿರುವ ಅಧೀಕ್ಷಕ ಇಂಜಿನಿಯರವರ ನಿಯಂತ್ರಣದಲ್ಲಿದೆ.

31-3-1990ರ ವರೆಗಿನ, ತಾಲೂಕುವಾರು, ವಿದ್ಯುತ್ ಸರಬರಾಜು ಲೈನ್‌ಗಳ ವಿವರ ಈ ರೀತಿ ಇದೆ.

| | | ಕಿ.ಮೀ.ನಲ್ಲಿ |
|---|---|---|
| ಮಡಿಕೇರಿ ತಾಲೂಕು | 11 ಕೆವಿ ಲೈನ್ | 546.59 |
| | ಲೋ ಟೆನ್‌ಶನ್ ಲೈನ್ | 998.44 |
| | ಮೊತ್ತ | 1,545.03 |
| ಸೋಮವಾರಪೇಟೆ ತಾಲೂಕು | 11 ಕೆವಿ ಲೈನ್ | 618.12 |
| | ಲೋ ಟೆನ್‌ಶನ್ ಲೈನ್ | 807.61 |
| | ಮೊತ್ತ | 1,425.73 |
| ವೀರರಾಜಪೇಟೆ ತಾಲೂಕು | 11 ಕೆವಿ ಲೈನ್ | 633.61 |
| | ಲೋ ಟೆನ್‌ಶನ್ ಲೈನ್ | 910.15 |
| | ಮೊತ್ತ | 1,543.76 |
| ಜಿಲ್ಲೆಯ ಮೊತ್ತ ಒಟ್ಟು | 11 ಕೆವಿ ಲೈನ್ | 1,798.32 |
| | ಲೋ ಟೆನ್‌ಶನ್ ಲೈನ್ | 2,716.20 |
| | ಮೊತ್ತ | 4,514.52 |

31-3-1990ರಲ್ಲಿದ್ದಂತೆ ಕೊಡಗು ಜಿಲ್ಲೆಯಲ್ಲಿ ಟ್ರಾನ್ಸ್‌ಮಿಶನ್ ತಂತಿಸಾಲುಗಳ ವಿವರ.

| ವೋಲ್ಟೇಜ್ ಕೆ.ವಿ | ಇಂದ | ಗೆ | ನಿಲ್ದಾಣ | ಸಾಮರ್ಥ್ಯ ಎಂ.ವಿ.ಎ. |
|---|---|---|---|---|
| 66 | ಹುಣಸೂರು | ಪೊನ್ನಂಪೇಟೆ | ಪೊನ್ನಂಪೇಟೆ | 1×8 |
| 33 | ಕುಶಾಲನಗರ | ಸುಂಟಿಕೊಪ್ಪ | ಸುಂಟಿಕೊಪ್ಪ | 1×5 |
| 33 | ಸುಂಟಿಕೊಪ್ಪ | ಮಡಿಕೇರಿ | ಮಡಿಕೇರಿ | 2×5 |
| 33 | ಕುಶಾಲನಗರ | ಸೋಮವಾರಪೇಟೆ | ಸೋಮವಾರಪೇಟೆ | 1×5 |
| 33 | ಪೊನ್ನಂಪೇಟೆ | ಶ್ರೀಮಂಗಲ | ಶ್ರೀಮಂಗಲ | 2×1 |
| 33 | ಪೊನ್ನಂಪೇಟೆ | ವೀರರಾಜಪೇಟೆ | ವೀರರಾಜಪೇಟೆ | 1×5 |
| 33 | ವೀರರಾಜಪೇಟೆ | ಸಿದ್ದಾಪುರ | ಸಿದ್ದಾಪುರ | 1×5 |
| 33 | ಸಿದ್ದಾಪುರ | ಸುಂಟಿಕೊಪ್ಪ | — | — |

ಆಧಾರ : ಕ. ವಿ. ಮಂಡಳಿ, ಕೊಡಗು ಜಿಲ್ಲೆ

### ತಲಕಾವೇರಿಯ ಗಾಳಿಯಂತ್ರ

ಕೊಡಗಿನ ತಲಕಾವೇರಿಯಲ್ಲಿ ಸಮುದ್ರ ಮಟ್ಟದಿಂದ ಸುಮಾರು 1500 ಮೀಟರ್ ಎತ್ತರವಿರುವ ಬ್ರಹ್ಮಗಿರಿ ಬೆಟ್ಟದ ಅಂಚಿನಲ್ಲಿ ಗಾಳಿಯ ಬೀಸಿನ ಬಲದಿಂದ ವಿದ್ಯುತ್ ಉತ್ಪಾದಿಸುವ ಉದ್ದೇಶದಿಂದ ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ನಿಗಮ ಇತರೆ ರಾಜ್ಯ ಸಂಸ್ಥೆಗಳೊಂದಿಗೆ, ಸುಮಾರು ಒಂದು ಕೋಟಿ ರೂ. ಅಂದಾಜಿನ ಯೋಜನೆಯನ್ನು 1988 ರಲ್ಲಿ ರೂಪಿಸಿತು. ಈ ಯೋಜನೆಗೆ ಕೇಂದ್ರ ಸರ್ಕಾರದಿಂದ ಸುಮಾರು 65ಲಕ್ಷ ರೂ. ನೆರವು ದೊರೆತಿದೆ. ಇದಕ್ಕೆ ಬೇಕಾದ ಯಂತ್ರ ಸಾಮಗ್ರಿಯನ್ನು ಡೆನ್‌ಮಾರ್ಕಿನ ಎನ್‌ಕೇನ್ ಸಂಸ್ಥೆಯಿಂದ ಆಮದು ಮಾಡಿಕೊಳ್ಳುವುದರ ಮೂಲಕ ಅವುಗಳನ್ನು ಸ್ಥಾಪಿಸುವ ಮತ್ತು ಕಾರ್ಯಾರಂಭ ಮಾಡುವ ಹೊಣೆಯನ್ನು ದೆಹಲಿಯ ಜಿ. ಕೆ. ಸಿಂಥೆಟಿಕ್ಸ್ ಸಂಸ್ಥೆಗೆ ವಹಿಸಲಾಗಿತ್ತು. ಈ ಸ್ಥಳವನ್ನು ಗಾಳಿಯಂತ್ರ ಮೂಲಕ ವಿದ್ಯುತ್ ಉತ್ಪಾದಿಸಲು ಸೂಕ್ತ ಸ್ಥಳವೆಂದು ನ್ಯಾಷನಲ್ ಏರೋನಾಟಿಕಲ್ ಲಾಬೋರೇಟರಿ ಸೂಚಿಸಿತ್ತು. ಈ ಗಾಳಿಯಂತ್ರ ಪ್ರಾರಂಭವಾದಾಗಿನಿಂದ 1991ರ ವರೆಗೆ ಸುಮಾರು 20,800 ಯೂನಿಟ್‌ನಷ್ಟು ವಿದ್ಯುತ್ ಉತ್ಪಾದಿಸಿದೆ. ಈ ಗಾಳಿಯಂತ್ರಗಳು ಸಮರ್ಪಕವಾಗಿ ಕೆಲಸ ಮಾಡಲು ಗಾಳಿಯ ರಭಸದೊಂದಿಗೆ, ಸತತ ವಿದ್ಯುತ್ ಪೂರೈಕೆಯೂ ಇರಬೇಕು. ಕೊಡಗಿನಲ್ಲಿ ವಿರಾಮವಿಲ್ಲದೆ ಸತತವಾಗಿ ವಿದ್ಯುತ್ ಸರಬರಾಜು ಕಷ್ಟವಾದ್ದರಿಂದ ಗಾಳಿಯಂತ್ರಗಳು ಸಮರ್ಪಕವಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗದಿರಬಹುದು ಎಂದು ಕಾರಣವನ್ನು ಕೊಡಲಾಗಿದೆ. ಈಗ ಅವು ಸ್ಥಗಿತವಾಗಿವೆ.

## ಕೈಗಾರೀಕರಣ

ಒಂದು ಜಿಲ್ಲೆಯ ಕೈಗಾರೀಕರಣಕ್ಕೆ ಪ್ರಭಾವೀ ಉದ್ಯಮಶೀಲತೆ ಅತ್ಯವಶ್ಯ. ಈ ಜಿಲ್ಲೆಯಲ್ಲಿ ಕೈಗಾರಿಕಾ ಇಲಾಖೆಯ ವತಿಯಿಂದ, ಯುವ ಜನಾಂಗಕ್ಕೆ ಉದ್ಯಮಗಳಲ್ಲಿ ತೊಡಗುವಂತೆ ಪ್ರಭಾವ ಬೀರಲು, ವಸ್ತು ಪ್ರದರ್ಶನ, ಕಮ್ಮಟಗಳನ್ನು ನಡೆಸಲಾಗುತ್ತಿದೆ. 1984-85ರಲ್ಲಿ ಉದ್ಯಮಶೀಲತೆ ಅಭಿವೃದ್ಧಿ ಕಾರ್ಯಕ್ರಮಗಳನ್ನು 45 ದಿನಗಳವರೆಗೆ ಮಾಡಲಾಯಿತು. ಇದರಿಂದ ಸುಮಾರು 50 ಜನರು, ಬೇರೆ ಬೇರೆ ಉದ್ಯಮಗಳನ್ನು ಆರಂಭಿಸಿದ್ದಾರೆ. ಹಾಗೆಯೇ 1986-87 ರಲ್ಲಿಯೂ, ಸುಮಾರು 30 ಜನರು ಬೇರೆ ಬೇರೆ ಉದ್ಯಮಗಳನ್ನು ಪ್ರಾರಂಭಿಸಿದ್ದಾರೆ. ಉದ್ಯಮಗಳಿಗೆ ಆರ್ಥಿಕ ಸಹಾಯ ಮಾಡಲು ಈ ಜಿಲ್ಲೆಯಲ್ಲಿ ಸುಮಾರು 100 ವಾಣಿಜ್ಯ ಬ್ಯಾಂಕುಗಳ ಶಾಖೆಗಳು, 14 ಸಹಕಾರಿ ಬ್ಯಾಂಕ್‌ಗಳೂ, 3 ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕ್‌ಗಳೂ, ಗ್ರಾಮೀಣ ಬ್ಯಾಂಕ್‌ನ 18 ವಿಭಾಗಗಳು, ಮತ್ತು ಕರ್ನಾಟಕ ರಾಜ್ಯ ಆರ್ಥಿಕ ಸಂಸ್ಥೆಯ ಕಛೇರಿ ಇವೆ. ಕೈಗಾರಿಕೆಗಳಲ್ಲಿ ತರಬೇತಿ ನೀಡಲು ಜಿಲ್ಲೆಯಲ್ಲಿ ಒಂದು ಪಾಲಿಟೆಕ್ನಿಕ್ ಒಂದು ಕೈಗಾರಿಕಾ ತರಬೇತಿ ಕೇಂದ್ರಗಳು ಕ್ರಮವಾಗಿ ಕುಶಾಲನಗರ ಮತ್ತು

31-3-1990 ರಲ್ಲಿದ್ದಂತೆ ಕೊಡಗು ಜಿಲ್ಲೆಯಲ್ಲಿನ ಗ್ರಾಮಗಳ ಹಾಗು ವಿದ್ಯುತ್ ಒದಗಿಸಿರುವ ಘಟಕಗಳ ಸಂಖ್ಯೆ
(ಆವರಣದಲ್ಲಿ ಕೊಟ್ಟಿರುವ ಸಂಖ್ಯೆ 1991 ಮಾರ್ಚ್‌ನಲ್ಲಿದ್ದಂತೆ)

| ಕ್ರ. ಸಂ. | ತಾಲೂಕು | 1981ರ ಜನಗಣತಿಯಂತೆ ಗ್ರಾಮಗಳು | ವಿದ್ಯುತ್ ಒದಗಿಸಿರುವ ಗ್ರಾಮಗಳು | ಮನೆಗಳು ಭಾಗ್ಯ-ಜ್ಯೋತಿ | ಸರ್ವ ವಿದ್ಯುತ್ | ವಾಣಿಜ್ಯ | ಪಂಪ್ ಸೆಟ್ | ಕೈಗಾರಿಕೆ | ಕುಡಿಯುವ ನೀರಿಗಾಗಿ | ಬೀದಿ ದೀಪ | ಎಚ್.ಟಿ. | ಮೊತ್ತ |
|---|---|---|---|---|---|---|---|---|---|---|---|---|
| 1. | ಮಡಿಕೇರಿ | 98 | 73 | 6,764 (7,063) | 2,475 (2,630) | 1,749 (1,829) | 393 (447) | 421 (427) | 48 (55) | 1,301 (1,210) | — | 13,151 (1,3661) |
| 2. | ಸೋಮವಾರಪೇಟೆ | 316 | 240 | 11,876 (12,518) | 2,137 (2,285) | 2,667 (2,789) | 1,081 (1,171) | 418 (439) | 51 (58) | 2,370 (2,150) | 5 | 20,605 (21,415) |
| 3. | ವೀರರಾಜಪೇಟೆ | 127 | 113 | 7,859 (8,318) | 3,425 (3,686) | 2,568 (2,654) | 1,080 (1,206) | 737 (766) | 37 (42) | 589 (567) | 2 | 16,297 (17,241) |
| | ಮೊತ್ತ | 541 | 426 | 26,499 (27,899) | 8,037 (8,601) | 6,984 (7,272) | 2,554 (2,824) | 1,576 (1,632) | 136 (155) | 4,260 (3,927) | 7 | 50,053 (52,317) |

31-3-1991ರ ಹೊತ್ತಿಗೆ ಜಿಲ್ಲೆಯ ಎಲ್ಲ ಗ್ರಾಮಗಳಿಗೂ ವಿದ್ಯುತ್ತನ್ನು ಪೂರೈಸಿದಂತಾಗಿದೆ, ಎಂದು ಕರ್ನಾಟಕ ವಿದ್ಯುತ್ ಮಂಡಳಿ ತಿಳಿಸಿದೆ.

ಮಡಿಕೇರಿಯಲ್ಲಿವೆ. ಸರ್ಕಾರಿ ಸ್ವಾಮ್ಯದ ಕರ್ನಾಟಕ ಎಲೆಕ್ಟ್ರಾನಿಕ್ ಡೆವಲಪ್‌ಮೆಂಟ್ ಕಾರ್ಪೊರೇಶನ್ ಮಡಿಕೇರಿಯಲ್ಲಿ ಒಂದು ತರಬೇತಿ ಹಾಗೂ ಉತ್ಪಾದನಾ ಕೇಂದ್ರವನ್ನು ಸುಜ್ಯೋತಿ ಮಹಿಳಾ ಸಹಕಾರ ಸಂಘದ ಆಶ್ರಯದಲ್ಲಿ ಆರಂಭಿಸಿದೆ. 1988-89ರ ಸಾಲಿನಿಂದ 1993-94ರ ವರೆಗೆ, ಈ ಜಿಲ್ಲೆಯಲ್ಲಿ ಪ್ರಾರಂಭ ಮಾಡಬೇಕೆಂದು ಉದ್ದೇಶಿಸಿರುವ ಕೆಲವು ವಿವಿಧ ರೀತಿಯ ಕೈಗಾರಿಕೆಗಳ ವಿವರ :

| ವರ್ಷ | ಘಟಕಗಳ ಸಂಖ್ಯೆ | | | ಉದ್ದೇಶಿತ ಉದ್ಯೋಗಗಳ ಸಂಖ್ಯೆ | | | ವಾರ್ಷಿಕ ಅಂದಾಜು ಉತ್ಪಾದನಾ ಮೌಲ್ಯ-ಲಕ್ಷ ರೂ.ಗಳಲ್ಲಿ | | |
|---|---|---|---|---|---|---|---|---|---|
| | ಎ | ಬಿ | ಸಿ | ಎ | ಬಿ | ಸಿ | ಎ | ಬಿ | ಸಿ |
| 1988-89 | 20 | 40 | 60 | 48 | 150 | 220 | 12 | 60 | 60 |
| 1989-90 | 30 | 40 | 60 | 60 | 150 | 220 | 18 | 60 | 60 |
| 1990-91 | 40 | 50 | 65 | 80 | 160 | 280 | 20 | 65 | 80 |
| 1991-92 | 40 | 25 | 65 | 80 | 160 | 280 | 20 | 65 | 80 |
| 1992-93 | 50 | 60 | 75 | 100 | 170 | 280 | 25 | 70 | 90 |
| 1993-94 | 50 | 60 | 75 | 100 | 170 | 280 | 25 | 70 | 90 |

ಎ—ಅರಣ್ಯ ಉತ್ಪಾದನಾ ಘಟಕಗಳು; ಬಿ—ಕೃಷಿ ಆಧಾರಿತ ಘಟಕಗಳು; ಸಿ—ಇಂಜಿನಿಯರಿಂಗ್ ಉದ್ಯಮಗಳು.

**ಕೈಗಾರಿಕಾ ವಸಾಹತುಗಳು**

ಈ ಜಿಲ್ಲೆಯ ಮಡಿಕೇರಿಯಲ್ಲಿ ಒಂದು ಕೈಗಾರಿಕಾ ಎಸ್ಟೇಟ್ ಇದ್ದು 18 ಕೈಗಾರಿಕಾ ಶೆಡ್ಡುಗಳಿವೆ. ಇವುಗಳಲ್ಲಿ 8 ಮಳಿಗೆಗಳು 'ಸಿ' ವರ್ಗಕ್ಕೂ 4 ಮಳಿಗೆಗಳು 'ಡಿ' ವರ್ಗಕ್ಕೂ ಸೇರಿವೆ. ಈ ಮಳಿಗೆಗಳಲ್ಲಿ ಸಾಮಾನ್ಯ ಇಂಜಿನಿಯರಿಂಗ್, ಉಕ್ಕು ತಯಾರಿಕೆ, ಗೇಟು, ಗೃಹೋಪಯೋಗಿ ವಸ್ತುಗಳು, ರೋಲಿಂಗ್ ಷಟರುಗಳು, ಆಟೋ ರಿಪೇರಿ ಮಾಡುವ, ಕೊಡೆ ಮಾಡುವ, ಮೊದಲಾದ ಕೈಗಾರಿಕೆಗಳಿವೆ. ಎರಡು ಶೆಡ್ಡುಗಳನ್ನು ಸರ್ಕಾರಿ ಮುದ್ರಣಾಲಯಕ್ಕೆ ಕೊಡಲಾಗಿದೆ. ಕುಶಾಲನಗರದಲ್ಲಿ 8 'ಸಿ' ವರ್ಗದ ಮತ್ತು 4 'ಡಿ' ವರ್ಗದ ಮಳಿಗೆಗಳಿವೆ. ಈ ಇಂಡಸ್ಟ್ರಿಯಲ್ ಎಸ್ಟೇಟ್‌ನಲ್ಲಿ ಕಚ್ಚಾ ಮಾಲಿಗಾಗಿ ಒಂದು ಉಗ್ರಾಣವಿದೆ. ಕುಶಾಲನಗರದಲ್ಲಿ, ಕರ್ನಾಟಕ ಚರ್ಮ ಅಭಿವೃದ್ಧಿ ನಿಗಮವು ಒಂದು ಉಗ್ರಾಣವನ್ನು ಪ್ರಾರಂಭಿಸಿದೆ. ಚರ್ಮಕಾರರಿಗೆ, ಕಚ್ಚಾಮಾಲನ್ನು ಇಲ್ಲಿಂದ ಸರಬರಾಜು ಮಾಡಲಾಗುತ್ತಿದೆ. ಕುಡ್ಲೂರು ಮತ್ತು ಸೋಮವಾರಪೇಟೆಯಲ್ಲಿ, 250 ಎಕರೆ ಕೈಗಾರಿಕಾ ಪ್ರದೇಶವಿದೆ. ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮದ ವತಿಯಿಂದ 1990-91ರ ಹೊತ್ತಿಗೆ ಜಿಲ್ಲೆಯಲ್ಲಿ ಒಟ್ಟು 27 ಕೈಗಾರಿಕಾ ಮಳಿಗೆಗಳಿದ್ದು ಅವುಗಳಲ್ಲಿ 22 ಹಂಚಿಕೆಯಾಗಿವೆ. (ಮಡಿಕೇರಿ 18, ಕುಶಾಲನಗರ 4).

1990-91ನೇ ಸಾಲಿನಲ್ಲಿ 138 ಉದ್ಯಮಶೀಲರಿಗೆ ಹೊಸದಾಗಿ ಕೈಗಾರಿಕೆಗಳನ್ನು ಸ್ಥಾಪಿಸಲು ತಾತ್ಕಾಲಿಕ ನೋಂದಣಿ ಪತ್ರ ನೀಡಲಾಗಿತ್ತು. ಹಾಗೂ ಉತ್ಪಾದನೆ ಪ್ರಾರಂಭಿಸಿದ 152 ಘಟಕಗಳಿಗೆ ಖಾಯಂ ನೋಂದಣಿ ಪತ್ರಗಳನ್ನು ನೀಡಲಾಗಿದ್ದು ಅವುಗಳ ಒಟ್ಟು ಬಂಡವಾಳ ಹೂಡಿಕೆ ರೂ. 37.43 ಲಕ್ಷಗಳಾಗಿದ್ದು, 391 ಜನರಿಗೆ ಉದ್ಯೋಗಾವಕಾಶವನ್ನು ಕಲ್ಪಿಸಲಾಗಿತ್ತು. ಇವುಗಳಲ್ಲಿ ನಗರ ಪ್ರದೇಶಗಳಲ್ಲಿ ನೋಂದಣಿಯಾದ ಘಟಕ-132, ಮಹಿಳೆಯರಿಂದ ಸ್ಥಾಪಿತವಾದದ್ದು 45, ಅಲ್ಪ ಸಂಖ್ಯಾತರಿಂದ-22, ಪ.ಜಾತಿ ಮತ್ತು ಪ.ವರ್ಗದವರಿಂದ 52. ತಾಲೂಕುವಾರು ವಿವರ ಹೀಗಿದೆ. ಮಡಿಕೇರಿ-34, ಸೋಮವಾರಪೇಟೆ-66, ವೀರರಾಜಪೇಟೆ-52. 1990-91ನೇ ಸಾಲಿನಲ್ಲಿ ಜಿಲ್ಲೆಯಲ್ಲಿ 9 ರೋಗಗ್ರಸ್ತ ಘಟಕಗಳಿಗೆ (ಮಡಿಕೇರಿ-4, ಸೋಮವಾರಪೇಟೆ-3, ವೀರರಾಜಪೇಟೆ-2). ರಾಜ್ಯ ಹಣಕಾಸು ಸಂಸ್ಥೆ ಹಾಗೂ ಬ್ಯಾಂಕ್‌ಗಳ ಸಹಾಯದಿಂದ, 6 ಲಕ್ಷ ರೂ.ಗಳ ಅಧಿಕ ಬಂಡವಾಳ ಒದಗಿಸಿ, ಪುನರುಜ್ಜೀವನಗೊಳಿಸಲಾಗಿದೆ.

ಜಿಲ್ಲೆಯ ಗ್ರಾಮಾಂತರ ಪ್ರದೇಶದಲ್ಲಿನ ಸಣ್ಣ ಮತ್ತು ಅತಿ ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಲು ಕುಶಲಕರ್ಮಿಗಳಿಗೆ, ಕೃಷಿಯೇತರ ಚಟುವಟಿಕೆಗಳಿಗಾಗಿ ನಬಾರ್ಡ್ ಯೋಜನೆಯಡಿ

ಯಲ್ಲಿ 10 ಜನರಿಗೆ ರೂ. 2 ಲಕ್ಷ ಸಾಲವನ್ನು ಮಂಜೂರು ಮಾಡಲಾಗಿದೆ.

1990-91ರ ಹೊತ್ತಿಗೆ ಜಿಲ್ಲೆಯು, ಮಡಿಕೇರಿ ತಾಲೂಕಿನಲ್ಲಿ ರೂ. 15.10 ಲಕ್ಷ ಬಂಡವಾಳ ಹೂಡಿಕೆಯ 34 ಘಟಕಗಳಿದ್ದು 95 ಮಂದಿ ಕೆಲಸಗಾರರೂ, ವೀರರಾಜಪೇಟೆ ತಾಲೂಕಿನಲ್ಲಿ, 6.73 ಲಕ್ಷ ರೂ. ಬಂಡವಾಳ ಹೂಡಿಕೆಯ, 52 ಘಟಕಗಳಲ್ಲಿ 133 ಮಂದಿ ಉದ್ಯೋಗಿಗಳೂ, ಸೋಮವಾರಪೇಟೆ ತಾಲೂಕಿನಲ್ಲಿ ರೂ. 15.6 ಲಕ್ಷ ಬಂಡವಾಳ ಹೂಡಿಕೆಯ 66 ಘಟಕಗಳಲ್ಲಿ, 163 ಮಂದಿ ಉದ್ಯೋಗಿಗಳಿದ್ದರು. ಇವುಗಳಲ್ಲಿ 16ಕೃಷಿ ಆಧಾರಿತ,54 ಅರಣ್ಯ ಉತ್ಪಾದನಾ ಆಧಾರಿತ, 17 ಬಟ್ಟೆ ತಯಾರಿಕೆ, 1 ರಾಸಾಯನಿಕ ವಸ್ತು ಆಧಾರಿತ, 8 ಇಂಜಿನೀರಿಂಗ್ ಆಧಾರಿತ, ಮತ್ತು 56 ಇತರ ಘಟಕಗಳಾಗಿದ್ದವು. ಹಣಕಾಸು ಸಂಸ್ಥೆಯು, ಮಡಿಕೇರಿ, ಸೋಮವಾರಪೇಟೆ, ವೀರರಾಜಪೇಟೆ, ಕುಶಾಲನಗರ ಮತ್ತು ಗೋಣಿಕೊಪ್ಪಲುಗಳಲ್ಲಿ ಹೆಚ್ಚು ಕೇಂದ್ರೀಕೃತವಾಗಿವೆ. ಮಡಿಕೇರಿಯಲ್ಲಿ 46 ಕೃಷಿ ಆಧಾರಿತ ಮತ್ತು ಆಹಾರದ ಘಟಕಗಳು ಸೋಮವಾರಪೇಟೆಯಲ್ಲಿ 18 ಸಾಮಾನ್ಯ ಇಂಜಿನಿಯರಿಂಗ್, ಮತ್ತು 24 ಕೃಷಿ ಆಧಾರಿತ ಘಟಕಗಳು, ವೀರರಾಜಪೇಟೆಯಲ್ಲಿ 24 ಕೃಷಿ ಆಧಾರಿತ ಘಟಕಗಳಿಗೆ ಸಹಾಯ ಒದಗಿಸಿದೆ. ಸಾರಿಗೆಯು ವರ್ಗೀಕರಣದಲ್ಲಿ ಮಡಿಕೇರಿ, ಸೋಮವಾರಪೇಟೆ ಮತ್ತು ವೀರರಾಜಪೇಟೆಯಲ್ಲಿ ಕ್ರಮವಾಗಿ 29, 22 ಮತ್ತು 22 ಘಟಕಗಳಿಗೆ ಸಹಾಯ ಒದಗಿಸಿದೆ.

1989ನೇ ಸಾಲಿನಲ್ಲಿ ಕೊಡಗು ಜಿಲ್ಲೆಗೆ ಆರ್ಥಿಕ ನೆರವು ರೂ. 189.29 ಲಕ್ಷವಾಗಿದ್ದು ಇದು ಮೈಸೂರು ವಲಯದ ಶೇ. 8.13ರಷ್ಟು ಮತ್ತು ರಾಜ್ಯಕ್ಕೆ ಒದಗಿಸಿದ ಧನ ಸಹಾಯದ ಶೇ. 1.5 ಆಗುತ್ತದೆ.

**ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮ**

ಈ ನಿಗಮವು (ಕೆ.ಎಸ್.ಎಸ್.ಐ.ಡಿ.ಸಿ.) ಕೈಗಾರಿಕಾ ಶೆಡ್‌ಗಳನ್ನು ನಿರ್ಮಿಸಿ ಕೊಡುವುದಲ್ಲದೆ ಕಚ್ಚಾ ಮಾಲುಗಳನ್ನು ಸಣ್ಣ ಕೈಗಾರಿಕೆಗಳಿಗೆ ನೀಡುತ್ತದೆ. ನಿರ್ಮಿಸಿದ ವಸ್ತುಗಳನ್ನು ಮಾರಾಟ ಮಾಡಲು ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾ ಮಾರಾಟ ನಿಗಮವು ಸಹಾಯ ಮಾಡುತ್ತದೆ. ಕುಶಾಲನಗರ ಹಾಗೂ ಮಡಿಕೇರಿಯಲ್ಲಿ, ಕೈಗಾರಿಕಾ ಶೆಡ್ಡುಗಳನ್ನು ಈ ನಿಗಮ ನಿರ್ಮಾಣ ಮಾಡಿವೆ. ಇಲ್ಲಿ ಕೆಲವು ಶೆಡ್‌ಗಳು ಖಾಲಿ ಇದ್ದು, ಕೈಗಾರಿಕೆಗಳು ಪ್ರಾರಂಭವಾಗಿಲ್ಲ.

**ಕರ್ನಾಟಕ ರಾಜ್ಯ ಹಣಕಾಸು ನಿಗಮ**

1959ರಲ್ಲಿ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ, ದೀರ್ಘಾವಧಿ ಸಾಲವನ್ನು ಕೊಡುವ ಉದ್ದೇಶದಿಂದ ಈ ನಿಗಮವನ್ನು ಮಡಿಕೇರಿಯಲ್ಲಿ ಸ್ಥಾಪಿಸಲಾಯಿತು. ದೇಶದ ಹಣಕಾಸು ನಿಗಮಗಳಲ್ಲಿ ಉನ್ನತ ಸ್ಥಾನವನ್ನು ರಾಜ್ಯ ಹಣಕಾಸು ನಿಗಮ ಗಳಿಸಿದೆ. ಮಡಿಕೇರಿ ಶಾಖೆಯು 1985ರಲ್ಲಿ ಪ್ರಾರಂಭವಾಯಿತು. ಇದು ಮೈಸೂರು ಪ್ರಾದೇಶಿಕ ಕಛೇರಿಯ ಆಡಳಿತದಲ್ಲಿದೆ. ಪ್ರಾರಂಭವಾದಾಗಿನಿಂದ 1990ರ ವರೆಗೆ, 293 ಘಟಕಗಳಿಗೆ ಸಾಲವನ್ನು ಕೊಡಲಾಗಿದೆ. ಈ ಘಟಕಗಳಲ್ಲಿ, ಸಾಮಾನ್ಯ ಇಂಜಿನಿಯರಿಂಗ್, ಕೃಷಿ ಆಧಾರಿತ, ಅರಣ್ಯ ಬೆಳೆ ಆಧಾರಿತ, ಬಟ್ಟೆ, ರಾಸಾಯನಿಕ ಹಾಗೂ ಪ್ಲಾಸ್ಟಿಕ್, ಸಾರಿಗೆ, ವಿದ್ಯುಚ್ಛಕ್ತಿ ಸಲಕರಣೆ, ಮತ್ತು ಎಲೆಕ್ಟ್ರಾನಿಕ್ಸ್ ಮತ್ತು ಹೋಟೆಲ್‌ಉದ್ಯಮಗಳು ಮುಖ್ಯವಾದುವು. 1986ರಿಂದ 1990ರ ವರೆಗೆ ಈ ಘಟಕದಿಂದ ಧನಸಹಾಯ ಪಡೆದ ಘಟಕಗಳ ವಿವರವನ್ನು ಈ ಪಟ್ಟಿಯಲ್ಲಿ ಕೊಡಲಾಗಿದೆ.

| ವಿಧಗಳು | 1986 | 1987 | 1988 | 1989 | 1990 | ಮೊತ್ತ |
|---|---|---|---|---|---|---|
| 1 | 2 | 3 | 4 | 5 | 6 | 7 |
| ಸಾಮಾನ್ಯ ಇಂಜಿನಿಯರಿಂಗ್ | 9 (17) | 10 (17) | 7 (10) | 8 (11) | 2 (7) | 36 (13) |
| ಕೃಷಿ ಆಧಾರಿತ ಮತ್ತು ಆಹಾರ | 17 (32) | 24 (41) | 18 (25) | 23 (32) | 12 (42) | 94 (33) |
| ಅರಣ್ಯ ಉತ್ಪನ್ನ ಆಧಾರಿತ | 1 (2) | 2 (3) | — | — | 1 (3) | 4 (1) |
| ಬಟ್ಟೆ | 5 (9) | 7 (12) | 5 (7) | 10 (14) | 1 (3) | 28 (10) |

| 1 | 2 | 3 | 4 | 5 | 6 | 7 |
|---|---|---|---|---|---|---|
| ರಾಸಾಯನಿಕ ಪ್ಲಾಸ್ಟಿಕ್‌ಗಳು | 5 (9) | — | 4 (5) | 4 (6) | — | 13 (7) |
| ಸಾರಿಗೆ | 11 (21) | 8 (14) | 32 (44) | 14 (20) | 8 (28) | 73 |
| ವಿದ್ಯುಚ್ಛಕ್ತಿ ಆಧಾರಿತ ಹಾಗೂ ಎಲೆಕ್ಟ್ರಾನಿಕ್ಸ್ | 1 (2) | 3 (5) | 3 (4) | 2 (3) | — | 9 (3) |
| ಹೋಟೆಲ್ ಉದ್ಯಮ | — | — | — | 2 (3) | 3 (10) | 5 (2) |
| ಇತರೆ | 4 (8) | 5 (8) | 4 (5) | 8 (11) | 2 (7) | 23 (8) |
| | 53 (100) | 59 (100) | 73 (100) | 71 (100) | 29 (100) | 285 (100) |

ಆವರಣದಲ್ಲಿನ ಸಂಖ್ಯೆಗಳು ವರ್ಷದ ಧನಸಹಾಯದ ಶೇಕಡಾ

1985 ರಿಂದ 1990ರ ವರೆಗೆ ಕೆ.ಎಸ್.ಎಫ್.ಸಿ.ಯ ಮೂಲಕ ವಿತರಣೆ ಮಾಡಿದ ಸಾಲದ ಪ್ರಮಾಣ ಹೀಗಿದೆ : 1985–0.39; 1986–23.47; 1987–24.65; 1988–61.12; 1989–79.66; 1990–44.45 (ರೂ. ಲಕ್ಷಗಳಲ್ಲಿ).

1986 ರಿಂದ 90ರ ವರೆಗೆ, ಹಣಕಾಸು ನಿಗಮವು ಜಿಲ್ಲೆಯಲ್ಲಿ ವಿತರಣೆ ಮಾಡಿರುವ ಸಾಲದ ವಿವರ ಹೀಗಿದೆ.

| ವರ್ಷ (ಫಲಾನುಭವಿಗಳು) | 1000ರೂ. ರಿಂದ 50,000ರೂ. | 50,000 ರಿಂದ 1ಲಕ್ಷ | 1ಲಕ್ಷ ದಿಂದ 2ಲಕ್ಷ | 2ಲಕ್ಷ ದಿಂದ 5ಲಕ್ಷ | 5ಲಕ್ಷ ದಿಂದ 10ಲಕ್ಷ | 10ಲಕ್ಷಕ್ಕೆ ಮೇಲ್ಪಟ್ಟು |
|---|---|---|---|---|---|---|
| 1986 | 3 | 30 | 20 | — | — | — |
| 1987 | 1 | 44 | 14 | — | — | — |
| 1988 | 1 | 37 | 11 | 21 | 2 | 1 |
| 1989 | 7 | 33 | 8 | 12 | 10 | 1 |
| 1990 | 2 | 13 | 2 | 3 | 8 | 1 |
| ಮೊತ್ತ | 14 | 157 | 55 | 36 | 20 | 3 |

1970ರಲ್ಲಿದ್ದಂತೆ ಕೊಡಗು ಜಿಲ್ಲೆಯಲ್ಲಿದ್ದ ಕೆಲವು ಸಣ್ಣ ಪ್ರಮಾಣದ ಕೈಗಾರಿಕೆಗಳ ಪಟ್ಟಿ

| ಕ್ರ. ಸಂ. | ಸ್ಥಾಪನೆಗೊಂಡ ವರ್ಷ | ಕೈಗಾರಿಕೆಯ ಹೆಸರು ವಿಳಾಸ | ತಯಾರಿಸಲ್ಪಡುವ ವಸ್ತುಗಳು | ಕೆಲಸಗಾರರ ಸಂಖ್ಯೆ |
|---|---|---|---|---|
| 1 | 2 | 3 | 4 | 5 |
| 1. | 1920 | ಸಿಟಿಸಿ ಸ್ಟೋರ್ಸ್ ಮತ್ತು ಪ್ರಿಂಟಿಂಗ್ ವರ್ಕ್ಸ್, ವೀರರಾಜಪೇಟೆ. | ನೋಟು ಪುಸ್ತಕ | 6 |
| 2. | 1921 | ಕೊಡಗು ಪ್ರೆಸ್, ಮಡಿಕೇರಿ | ಮುದ್ರಣ | 6 |
| 3. | 1928 | ಪ್ರಕಾಶ ಪ್ರೆಸ್, ಮಡಿಕೇರಿ | ಮುದ್ರಣ | 2 |
| 4. | 1932 | ಚಾತುಕುಟ್ಟಿನಾಯಕ, ವೀರರಾಜಪೇಟೆ. | ತಾಮ್ರ, ಹಿತ್ತಾಳೆ ಪಾತ್ರೆ | 3 |
| 5. | 1935 | ಕೆ. ಟಿ. ಮಾಚಯ್ಯ ಮಡಿಕೇರಿ. | ತಾಮ್ರ, ಹಿತ್ತಾಳೆ ಪಾತ್ರೆ | 2 |
| 6. | 1938 | ಅಂಬಿಕ ಪ್ರಿಂಟಿಂಗ್ ಪ್ರೆಸ್, ಮಡಿಕೇರಿ. | ಮುದ್ರಣ, ನೋಟು ಪುಸ್ತಕ | 7 |
| 7. | 1940 | ಫರ್ನಾಂಡಿಸ್ ಕಾಪರಸ್ಮಿತ್. | ತಾಮ್ರ, ಹಿತ್ತಾಳೆ ಪಾತ್ರೆ | 2 |
| 8. | 1944 | ರಾಮಣ್ಣ ಮೋಟರ್ ವರ್ಕ್ಸ್, ಮಡಿಕೇರಿ. | ವಾಹನ ದುರಸ್ತಿ | 3 |
| 9. | 1946 | ಲೂಯಿಸ್ ಇಂಡಸ್ಟ್ರೀಸ್, ಮಡಿಕೇರಿ. | ಇಂಜನೀಯರಿಂಗ್ ರಿಪೇರಿ, ಸ್ಪೇರ್‌ಗಳ ತಯಾರಿಕೆ | 4 |
| 10. | 1946 | ಪಿ. ವಿ. ಪೈ ಮತ್ತು ಕಂಪೆನಿ, ಮಡಿಕೇರಿ. | ವಾಹನ ದುರಸ್ತಿ | 6 |
| 11. | 1946 | ಎನ್. ಕೆ. ಗೋವಿಂದನ್, ಹುದಿಕೇರಿ. | ತಾಮ್ರ, ಹಿತ್ತಾಳೆ ಪಾತ್ರೆ | 2 |
| 12. | 1947 | ರಹಮಾನಿಯಾ ಸೋಡಾ ಫ್ಯಾಕ್ಟರಿ ಮತ್ತು ಬೇಕರಿ, ವೀರರಾಜಪೇಟೆ. | ಬೇಕರಿ ಉತ್ಪನ್ನ | 6 |
| 13. | 1948 | ನಾಯುಡು ಬೇಕರಿ, ಮಡಿಕೇರಿ. | ಬೇಕರಿ ಉತ್ಪನ್ನ | 3 |
| 14. | 1949 | ಕೆ. ಪಿ. ನಾರಾಯಣ, ಕಾಪರ್‌ಸ್ಮಿತ್, ಗೋಣಿಕೊಪ್ಪಲು. | ತಾಮ್ರ, ಹಿತ್ತಾಳೆ ಪಾತ್ರೆ | 4 |
| 15. | 1950 | ಪಾಲಿಮೆಟಲ್ ವರ್ಕ್ಸ್, ಗೋಣಿಕೊಪ್ಪಲು. | ತಾಮ್ರ, ಹಿತ್ತಾಳೆ ಪಾತ್ರೆ | 3 |
| 16. | 1950 | ಗಣೇಶ ಶೀಟ್ ಮೆಟಲ್ ವರ್ಕ್ಸ್, ಮಡಿಕೇರಿ. | ತಗಡಿನ ಕೆಲಸ | 2 |
| 17. | 1950 | ಗೋಪಾಲ್ ಇಂಡಸ್ಟ್ರೀಸ್, ಗೋಣಿಕೊಪ್ಪಲು. | ಒಕ್ಕಲು ತನದ ಸಲಕರಣೆ | 5 |
| 18. | 1950 | ಭಗವಾನ್ ಪ್ರೆಸ್, ವೀರರಾಜಪೇಟೆ. | ಮುದ್ರಣ | 2 |
| 19. | 1951 | ಪಾಪ್ಯುಲರ್ ಕಾಪರ್ ವರ್ಕ್ಸ್, ಪೊನ್ನಂಪೇಟೆ. | ತಾಮ್ರ, ಹಿತ್ತಾಳೆ ಪಾತ್ರೆ | 3 |
| 20. | 1951 | ಆಡಮ್ ಅಂಡ್ ಸನ್ಸ್, ಮಡಿಕೇರಿ. | ಕಾಫಿ ಸ್ಪ್ರೇಯರ್ಸ್ ಮತ್ತು ಸ್ಪೇರ್‌ಪಾರ್ಟ್ಸ್ | 12 |
| 21. | 1951 | ಅಮ್ಮನ್ ಮೋಟಾರ್ ವರ್ಕ್ಸ್, ಮಡಿಕೇರಿ. | ವಾಹನ ದುರಸ್ತಿ | 5 |
| 22. | 1951 | ರಾಮ ಕಾರ್ಪೆಂಟರಿ, ಕುಶಾಲನಗರ. | ಮರದ ಬಂಡಿ ಹಾಗೂ ಕಟ್ಟಡ ಸಾಮಗ್ರಿ | 4 |
| 23. | 1952 | ಕುಂಜಪ್ಪಾ ಆಚಾರಿ, ವೀರರಾಜಪೇಟೆ. | ಕಬ್ಬಿಣದ ಪೆಟ್ಟಿಗೆ ಹಾಗೂ ಮೂರ್ತಿಗಳು | 2 |

| 1 | 2 | 3 | 4 | 5 |
|---|---|---|---|---|
| 24. | 1952 | ಶ್ರೀ ಗಿಡ್ಡ ಶೆಟ್ಟಿ, ಸಂತೆಪಾಳಿ, ಕುಶಾಲನಗರ. | ಮರದ ಬಂಡಿ, ಕಟ್ಟಡ ಸಾಮಗ್ರಿ | 3 |
| 25. | 1953 | ಸಿ. ವಿ. ಬ್ರದರ್ಸ್, ಮಡಿಕೇರಿ. | ಕಾಫಿ ಸ್ಪ್ರೇಯರ ದುರಸ್ತಿ | 50 |
| 26. | 1953 | ನ್ಯಾಶನಲ್ ಇಂಜಿನೀಯರಿಂಗ್ ವರ್ಕ್ಸ್, ಗೋಣಿಕೊಪ್ಪಲು | ಇಂಜನೀಯರಿಂಗ್ ವರ್ಕ್ಸ್, ದುರಸ್ತಿ | 10 |
| 27. | 1953 | ಗಣೇಶ ಪ್ರಿಂಟಿಂಗ್ ಪ್ರೆಸ್. | ಮುದ್ರಣ | 7 |
| 28. | 1955 | ಲಕ್ಷ್ಮೀವಿಲಾಸ ಪ್ರಿಂಟಿಂಗ್ ಪ್ರೆಸ್, ಗೋಣಿಕೊಪ್ಪಲು. | ಮುದ್ರಣ | 3 |
| 29. | 1955 | ರಘುಪತಿ ಪ್ರಿಂಟಿಂಗ್ ಪ್ರೆಸ್, ಮಡಿಕೇರಿ. | ಮುದ್ರಣ | 6 |
| 30. | 1955 | ರಾಮಾ ಪ್ರಿಂಟಿಗ್ ಪ್ರೆಸ್, ಕುಶಾಲನಗರ. | ಮುದ್ರಣ | 3 |
| 31. | 1956 | ನಿತ್ಯಾನಂದ ಆಟೋಮೊಬೈಲ್ ವರ್ಕ್ಸ್, ಮಡಿಕೇರಿ. | ವಾಹನ ದುರಸ್ತಿ, ಉಕ್ಕು ಎರಕ | 10 |
| 32. | 1956 | ಇಂಡಿಯನ್ ಟಾಯರ್ಸ್, ಮಡಿಕೇರಿ. | ಟಯರ್ ರೀಟ್ರೆಡಿಂಗ್ | 10 |
| 33. | 1957 | ಮೋನಪ್ಪಾ ಮೋಟಾರ್ ವರ್ಕ್ಸ್ | ವಾಹನ ದುರಸ್ತಿ | 5 |
| 34. | 1957 | ಆರ್. ಫ್ರಿಮನ್ ಸನ್ಸ್ ಇಂಜಿನಿಯರಿಂಗ್ ವರ್ಕ್ಸ್, ಸೋಮವಾರಪೇಟೆ. | ಇಂಜಿನೀಯರಿಂಗ್ ಸಾಧನಗಳ ರಿಪೇರಿ, ಕಾಫಿ ಸ್ಪ್ರೆಯರ್‌ಗಳ ರಿಪೇರಿ | 6 |
| 35. | 1957 | ಸುಲೋಚನಾ ಸ್ಟೀಲ್ ವರ್ಕ್ಸ್, ಅಮ್ಮತ್ತಿ. | ಒಕ್ಕಲುತನ, ಎಸ್ಟೇಟ್ ಸಾಮಗ್ರಿಗಳು | 4 |
| 36. | 1957 | ಜೋಸೆಫ್ ಫರ್ನಿಚರ್ಸ್, ಮಡಿಕೇರಿ. | ಪೀಠೋಪಕರಣ, ಕಟ್ಟಡ ಸಾಮಗ್ರಿ | 4 |
| 37. | 1959 | ಜೋಸೆಫ್ ಉಡ್ ಇಂಡಸ್ಟ್ರೀಸ್, ಮಡಿಕೇರಿ. | ಪ್ಯಾಕಿಂಗ್ ಸಾಮಗ್ರಿ | 3 |
| 38. | 1960 | ಸಂತೋಷ್ ಫರ್ನಿಚರ್ ಮಾರ್ಟ್, ವೀರರಾಜಪೇಟೆ | ಮರದ ಪ್ಯಾಕಿಂಗ್ ಸಾಮಗ್ರಿ | 5 |
| 39. | 1960 | ಶ್ರೀರಾಮ ಪ್ರೆಸ್, ಗೋಣಿಕೊಪ್ಪಲು | ಮುದ್ರಣ | 3 |
| 40. | 1960 | ಸೇಂಟ್ ಮೈಕೆಲ್ ಫವರ್ ಪ್ರೆಸ್, ವೀರರಾಜಪೇಟೆ | ಮುದ್ರಣ, ನೋಟು ಪುಸ್ತಕ | 2 |
| 41. | 1960 | ವಾಣಿ ಪ್ರಿಂಟರ್ಸ್, ವೀರರಾಜಪೇಟೆ | ಮುದ್ರಣ ಹಾಗೂ ನೋಟು ಪುಸ್ತಕ | 6 |
| 42. | 1960 | ಸಿರಾಜುದ್ದೀನ್ ಅಗರಬತ್ತಿ ವರ್ಕ್ಸ್ | ಅಗರಬತ್ತಿ | 3 |
| 43. | 1961 | ಕೂರ್ಗ್ ಪ್ಲಾಸ್ಟಿಕ್ ಇಂಡಸ್ಟ್ರೀಸ್, ಮಡಿಕೇರಿ | ಪ್ಲಾಸ್ಟಿಕ್ ಚೀಲ | 5 |
| 44. | 1961 | ಗೀತಾ ಕಾಸ್ಮೆಟಿಕ್ ಇಂಡಸ್ಟ್ರೀಸ್, ವೀರರಾಜಪೇಟೆ | ಅಲಂಕಾರ ಪ್ರಸಾದನ | 5 |
| 45. | 1961 | ಅನುರಾಧಾ ಪ್ರಿಂಟಿಂಗ್ ಪ್ರೆಸ್, ಮಡಿಕೇರಿ | ಮುದ್ರಣ, ನೋಟು ಪುಸ್ತಕ | 9 |
| 46. | 1961 | ರಂಗನಾಥ ಮೆಟಲ್ ವರ್ಕ್ಸ್, ಮಡಿಕೇರಿ | ತಾಮ್ರ, ಹಿತ್ತಾಳೆ ಪಾತ್ರೆ | 3 |
| 47. | 1961 | ಶಕ್ತಿ ಪವರ್ ಪ್ರೆಸ್, ಮಡಿಕೇರಿ | ಮುದ್ರಣ | 8 |
| 48. | 1961 | ಶ್ರೀದೇವಿ ಮುದ್ರಣಾಲಯ | ಮುದ್ರಣ | 4 |

| 1 | 2 | 3 | 4 | 5 |
|---|---|---|---|---|
| 49. | 1961 | ವಿ.ಎಸ್. ಗುಂಡಪ್ಪಶೆಟ್ಟಿ, ಮಡಿಕೇರಿ | ಮರದ ಪ್ಯಾಕಿಂಗ್ ಪೆಟ್ಟಿಗೆ | 2 |
| 50. | 1961 | ಪಾಸ್ಕಲ್ ಇಂಡಸ್ಟ್ರೀಸ್ ಕಾರ್ಪೊರೇಶನ್, ಮಡಿಕೇರಿ | ಪ್ಲಾಸ್ಟಿಕ್ ಚೀಲ | 5 |
| 50(ಎ) | 1961 | ರಘೂನ್ನಿರಾಣಿ ಕ್ರಾಫ್ಟ್ಸ್, ವೀರರಾಜಪೇಟೆ | ಪೀಠೋಪಕರಣ | 6 |
| 51. | 1962 | ವಿ.ವಿ. ಕುಂಞಕಣ್ಣನ್, ಮೂರ್ನಾಡು | ಒಕ್ಕಲುತನ ಸಾಮಗ್ರಿ | 3 |
| 52. | 1962 | ಮರಕೇರಾ ಸ್ಟೀಲ್ ಇಂಡಸ್ಟ್ರೀಸ್, ಮಡಿಕೇರಿ | ಸ್ಟೈನ್‌ಲೆಸ್ ಸ್ಟೀಲ್ ಪಾತ್ರೆ | 4 |
| 53. | 1962 | ಜೋಸೆಫ್ ಟೈಯರ್ ವರ್ಕ್ಸ್, ಮಡಿಕೇರಿ | ಟೈಯರ್ ರೀಟ್ರೇಡಿಂಗ್ | 4 |
| 54. | 1962 | ಮುರುಗಾ ಪ್ರೆಸ್, ಪೊನ್ನಂಪೇಟೆ | ಮುದ್ರಣ | 3 |
| 55. | 1962 | ಶಾಂತಾ ಪವರ್ ಪ್ರೆಸ್ | ಮುದ್ರಣ | 3 |
| 56. | 1962 | ಉದಯ ಪ್ರೆಸ್, ಸೋಮವಾರಪೇಟೆ | ಮುದ್ರಣ | 4 |
| 57. | 1962 | ಕೂರ್ಗ್ ಉಡ್ ಇಂಡಸ್ಟ್ರೀಸ್, ಕುಶಾಲನಗರ | ಮರ ಕೊರೆತ | 6 |
| 58. | 1963 | ಒರಿಯಂಟ್ ಅರೋಮ್ಯಾಟಿಕ್ಸ್, ಕುಶಾಲನಗರ | ಸುಗಂಧ ಎಣ್ಣೆ | 12 |
| 59. | 1963 | ಬೇಬಿ ಆಟೋಮೊಬಾಯಿಲ್ಸ್, ಸಿದ್ದಾಪುರ | ವಾಹನ ದುರಸ್ತಿ | 3 |
| 60. | 1963 | ಕಾಳಿಕಾಂಬಾ ಮೋಟಾರ್ ವರ್ಕ್ಸ್, ಮಡಿಕೇರಿ | ವಾಹನ ದುರಸ್ತಿ | 3 |
| 61. | 1963 | ಕೂರ್ಗ್ ಕೇನ್ ವರ್ಕ್ಸ್, ಗೋಣಿಕೊಪ್ಪಲು | ಪೀಠೋಪಕರಣ | 3 |
| 62. | 1964 | ಆರ್.ವಿ. ಪ್ರಭು ಇಂಡಸ್ಟ್ರೀಸ್ ಎಸ್ಟೇಟ್, ಮಡಿಕೇರಿ | ಫ್ರೆಂಚ್‌ಪಾಲಿಶ್ | 2 |
| 63. | 1964 | ನಿಕಾಲಸ್ ಮೋಟರ್ ವರ್ಕ್ಸ್, ಪೊಲ್ಲಿಬೆಟ್ಟ | ವಾಹನ ದುರಸ್ತಿ ಉಕ್ಕು ಎರಕ | 10 |
| 64. | 1964 | ಕಂಠಿ ಉಡ್ ಆ್ಯಂಡ್ ಮ್ಯಾಚ್‌ಸ್ಪ್ಲಿಂಟ್ಸ್ ಇಂಡಸ್ಟ್ರೀಸ್, ಶನಿವಾರಸಂತೆ | ಮರ ಕೊರೆತ | 6 |
| 65. | 1964 | ಶ್ರೀ ಸದಾನಂದ ಪೈ ಅಂಡ್ ಕಂಪನಿ, ಮಡಿಕೇರಿ | ಮರದ ವಸ್ತು | 5 |
| 66. | 1964 | ತಾಜಾಲಿಯಾತ್ ಮ್ಯಾಚ್‌ಸ್ಪ್ಲಿಂಟ್ಸ್ ಅಂಡ್ ವೆನೀರ್ಸ್ ಇಂಡಸ್ಟ್ರಿ, ಕೊಡ್ಲಿಪೇಟೆ | ಕಡ್ಡಿ ಪೆಟ್ಟಿಗೆ, ಸಲಾಕೆ ಮತ್ತು ಅಲಂಕಾರದ ಹಲಿಗೆ | 60 |
| 67. | 1965 | ಬಿ. ಎಂ. ಆರ್. ಇಂಡಸ್ಟ್ರೀಸ್ ಸೋಮವಾರಪೇಟೆ | ಕಾಫಿ ಸ್ಪ್ರೇಯರ್ಸ್ ಬಿಡಿ ಭಾಗ ತಯಾರಿಕೆ, ದುರಸ್ತಿ | 10 |
| 68. | 1965 | ಜಾನ್ ಇಂಜಿನೀಯರಿಂಗ್ ವರ್ಕ್ಸ್ ವೀರರಾಜಪೇಟೆ | ಕಾಫಿ ಸ್ಪ್ರೇಯರ್ಸ್ ಬಿಡಿ ಭಾಗ ತಯಾರಿಕೆ, ದುರಸ್ತಿ | 4 |
| 69. | 1965 | ಜೋಸೆಫ್ ಇಂಜಿನೀಯರಿಂಗ್ ವರ್ಕ್ಸ್ ವೀರರಾಜಪೇಟೆ | ಕಾಫಿ ಸ್ಪ್ರೇಯರ್ಸ್ ಬಿಡಿ ಭಾಗ ತಯಾರಿಕೆ, ದುರಸ್ತಿ | 4 |
| 70. | 1965 | ಸ್ವಾಮಿ ಇಂಜಿನೀಯರಿಂಗ್ ವರ್ಕ್ಸ್ | ಕಾಫಿ ಸ್ಪ್ರೇಯರ್ಸ್ ಬಿಡಿ ಭಾಗ ತಯಾರಿಕೆ, ದುರಸ್ತಿ | 4 |
| 71. | 1965 | ಲೈನ್ ಟೈಯರ್ ವರ್ಕ್ಸ್, ವೀರರಾಜಪೇಟೆ | ಟೈಯರ್ ರೀಟ್ರೇಡಿಂಗ್ | 5 |

| 1 | 2 | 3 | 4 | 5 |
|---|---|---|---|---|
| 72. | 1965 | ದಿನಕರ ಪ್ರಿಂಟಿಂಗ್ ಪ್ರೆಸ್, ವೀರರಾಜಪೇಟೆ | ಮುದ್ರಣ | 3 |
| 73. | 1965 | ಗಣೇಶ ಪವರ್ ಪ್ರೆಸ್, ವೀರರಾಜಪೇಟೆ | ಮುದ್ರಣ | 7 |
| 74. | 1965 | ಶಾರದಾ ಪ್ರೆಸ್, ವೀರರಾಜಪೇಟೆ | ಮುದ್ರಣ | 2 |
| 75. | 1966 | ಎಸ್ಟೇಟ್ ಇನ್‌ಸ್ಟುಮೆಂಟ್ ಮ್ಯಾನುಫ್ಯಾಕ್ಚರಿಂಗ್ ವರ್ಕ್ಸ್, ವೀರರಾಜಪೇಟೆ | ಕೃಷಿ ತೋಟದ ಸಾಮಗ್ರಿ | — |
| 76. | 1966 | ಅಶೋಕಾ ಆಟೋಮೊಬಯಿಲ್ಸ್, ಮಡಿಕೇರಿ | ವಾಹನ, ಪಂಪ್ ದುರಸ್ತಿ | 4 |
| 77. | 1966 | ಮೋಹನ್ ಇಂಜನಿಯರಿಂಗ್ ವರ್ಕ್ಸ್, ಪೊಲ್ಲಿಬೆಟ್ಟ | ವಾಹನ ದುರಸ್ತಿ | 3 |
| 78. | 1966 | ಸಾಯಿಬಾಬಾ ಕೇನ ಕ್ರಾಫ್ಟ್ಸ್, ಸೋಮವಾರಪೇಟೆ | ಪೀಠೋಪಕರಣ | 4 |
| 79. | 1966 | ಕೂರ್ಗ್ ಪ್ಲಾಸ್ಟಿಕ್ ಇಂಡಸ್ಟ್ರೀಸ್, ಮಡಿಕೇರಿ | ಪ್ಲಾಸ್ಟಿಕ್ ಚೀಲ | 5 |
| 80. | 1966 | ಶ್ರೀ ಷಣ್ಮುಖ ಕಾರಪೆಂಟರ | ಮರದ ಸಾಮಾನು | 3 |
| 81. | 1967 | ಕೂರ್ಗ್ ಕನ್ನಡಾ ಸೋಪ್ ವರ್ಕ್ಸ್, ಮಡಿಕೇರಿ | ವಾಶಿಂಗ್ ಸೋಪು | 4 |
| 82. | 1967 | ಕಾಸ್‌ಮಾಸ್ ಐಸ್‌ಕ್ರೀಂ ಫ್ಯಾಕ್ಟರಿ, ಮಡಿಕೇರಿ | ಐಸ್‌ಕ್ರೀಂ, ಐಸ್‌ಕ್ಯಾಂಡಿ ತಯಾರಿಕೆ | 5 |
| 83. | 1967 | ನಂದಾ ಇಂಡಸ್ಟ್ರೀಸ್, ಮಡಿಕೇರಿ | ಶಾವಿಗೆ ತಯಾರಿಕೆ | 3 |
| 84. | 1967 | ಕೂರ್ಗ್‌ಮೆಟಲ್ ವರ್ಕ್ಸ್ ವೀರರಾಜಪೇಟೆ | ಒಕ್ಕಲುತನ, ತೋಟಗಾರಿಕೆ ಸಲಕರಣೆಗಳ ತಯಾರಿಕೆ | 2 |
| 85. | 1967 | ಕಾಮನ್‌ವೆಲ್ತ್ ಟ್ರಸ್ಟ್ ಮೋಟರ್ಸ್, ಮಡಿಕೇರಿ | ವಾಹನ ದುರಸ್ತಿ | 4 |
| 86. | 1967 | ರಾಫೆಲ್ಸ್ ಆಟೋಲ್ಯಾಂಡ್, ಸಿದ್ದಾಪುರ | ವಾಹನ ದುರಸ್ತಿ | 4 |
| 87. | 1967 | ಶೀಲಾ ಶೀಟ್‌ಮೆಟಲ್ ವರ್ಕ್ಸ್, ವೀರರಾಜಪೇಟೆ | ಉಕ್ಕಿನ ಪೀಠೋಪಕರಣ | 5 |
| 88. | 1967 | ಟಾಯರ ಸರ್ವಿಸ್, ಮಡಿಕೇರಿ | ಟಾಯರ ರೀಟ್ರೆಡಿಂಗ್ | 5 |
| 89. | 1967 | ಶಾರದಾ ಪ್ರೆಸ್, ಕೊಡ್ಲಿಪೇಟೆ | ಮುದ್ರಣ | 3 |
| 90. | 1967 | ಕಾವೇರಿ ಫರ್ನಿಚರ್ ವರ್ಕ್ಸ್, ವೀರರಾಜಪೇಟೆ | ಪೀಠೋಪಕರಣ, ಕಟ್ಟಡ ಸಾಮಗ್ರಿ | 3 |
| 91. | 1967 | ಅಟ್ಲಾಸ್ ಪ್ಲಾಸ್ಟಿಕ್ ಇಂಡಸ್ಟ್ರೀಸ್, ಮಡಿಕೇರಿ | ಪ್ಲಾಸ್ಟಿಕ್ ಚೀಲ, ಸೂಟ್‌ಕೇಸ್ | 5 |

ಕೈಗಾರಿಕೆಗಳ ಬೆಳವಣಿಗೆಯ ಐತಿಹಾಸಿಕ ಹಿನ್ನೆಲೆ ನೀಡಲು ಈ ಪಟ್ಟಿಕೊಟ್ಟಿದೆ. 1970ರ ನಂತರ ಅಂಕಿ ಸಂಖ್ಯೆಗಳನ್ನಷ್ಟೇ ಕೊಡಬಹುದಾಗಿದೆ. 1990ರಲ್ಲಿ ಜಿಲ್ಲೆಯಲ್ಲಿ 967 ಘಟಕಗಳಿದ್ದ ಬಗ್ಗೆ ಹಿಂದೆಯೇ ಹೇಳಿದೆ.

ಕೊಡಗು ಜಿಲ್ಲೆಯಲ್ಲಿ ಆರ್ಥಿಕ ಚಟುವಟಿಕೆಗಳು, ಜಿಲ್ಲೆಯ ಗಾತ್ರವನ್ನು ಪರಿಶೀಲಿಸಿದಾಗ ಗಮನೀಯವಾಗಿವೆ. ಇಲ್ಲಿ ದೊಡ್ಡ ಅಕ್ಕಿ ಗಿರಣಿಗಳಾಗಲೀ ತ್ರಿತಾರಾ ಹೋಟೆಲು ಗಳಾಗಲೀ ಇಲ್ಲ. ಇತರ ಕೆಲವು ದೊರೆತ ವಿವರಗಳನ್ನು ಮಾತ್ರ ಇಲ್ಲಿ ಕೊಟ್ಟಿದೆ. ಮಡಿಕೇರಿ : ಹೋಟೆಲುಗಳು-47, ಬಾರ್ ಮತ್ತು ರೆಸ್ಟೋರೆಂಟ್-6, ಕ್ಲಬ್-2, ಅಕ್ಕಿ ಗಿರಣಿ-5, ಮಿಲ್ಲು-1; ವೀರರಾಜಪೇಟೆ : ಹೋಟೆಲು-24, ಔಷಧಿ ಅಂಗಡಿ-4, ಬಾರ್ ಮತ್ತು ರೆಸ್ಟೋರೆಂಟ್-4, ನರ್ಸಿಂಗ್

ಹೋಂ-4, ಮರಕುಯ್ಯುವ ಯಂತ್ರಗಳು-2, ಅಕ್ಕಿಗಿರಣಿ-4, ಇತರ ವರ್ಕ್‌ಶಾಪ್‌ಗಳು-22 ; ಸುಂಟಿಕೊಪ್ಪ : ಹೋಟೆಲು-30, ಔಷಧಿ ಅಂಗಡಿ-3, ಬಾರ್ ಮತ್ತು ರೆಸ್ಟೋರೆಂಟ್-8, ನರ್ಸಿಂಗ್ ಹೋಂ-4, ಅಕ್ಕಿಗಿರಣಿ-2, ವರ್ಕ್‌ಶಾಪ್-10 ; ಶನಿವಾರಸಂತೆ : ಹೋಟೆಲು-20, ಔಷಧಿ ಅಂಗಡಿಗಳು-2, ಬಾರ್ ಮತ್ತು ರೆಸ್ಟೋರೆಂಟ್-4, ಗಾಡಿಗಳು-125, ಅಕ್ಕಿ ಗಿರಣಿ-7, ಕ್ಲಿನಿಕ್‌ಗಳು-4, ಇತರ ವರ್ಕ್‌ಶಾಪ್-8 ; ಪೊನ್ನಂಪೇಟೆ : ಹೋಟೆಲು-15, ಬಾರ್ ಮತ್ತು ರೆಸ್ಟೋರೆಂಟ್-1, ನರ್ಸಿಂಗ್ ಹೋಂ-1, ಗಾಡಿಗಳು-6, ಅಕ್ಕಿಗಿರಣಿ-4, ವರ್ಕ್‌ಶಾಪ್-8 ; ಕುಶಾಲನಗರ : ಹೋಟೆಲುಗಳು-31, ಔಷಧಿ ಅಂಗಡಿ-7, ಬಾರ್ ಮತ್ತು ರೆಸ್ಟೋರೆಂಟ್-4, ನರ್ಸಿಂಗ್ ಹೋಂಗಳು-1, ಗಾಡಿಗಳು-10, ಮರಕೊಯ್ಯುವ ಯಂತ್ರ-2, ಅಕ್ಕಿ ಗಿರಣಿ-2, ಇತರೆ ವರ್ಕ್‌ಶಾಪ್‌ಗಳು-30.

**ಸರ್ಕಾರಿ ಕೇಂದ್ರ ಕಾರ್ಯಾಗಾರ, ಮಡಿಕೇರಿ**

ಸರ್ಕಾರಿ ಕೇಂದ್ರ ಕಾರ್ಯಾಗಾರವು (ಸೆಂಟ್ರಲ್ ವರ್ಕ್‌ಶಾಪ್) 1954ರಲ್ಲಿ ಅಂದಿನ ಕೊಡಗು ಸರಕಾರದಿಂದ, ಮಡಿಕೇರಿಯಲ್ಲಿ ಸ್ಥಾಪಿತವಾಯಿತು. ಸರ್ಕಾರದ ಮೋಟಾರು ವಾಹನಗಳು, ರೋಡ್ ರೋಲರ್‌ಗಳು, ಕಾಂಕ್ರೀಟ್ ಮಿಕ್ಸರ್ ಮೊದಲಾದವುಗಳನ್ನು ದುರಸ್ತಿ ಮಾಡುವುದು ಈ ಕಾರ್ಯಾಗಾರದ ಮುಖ್ಯ ಉದ್ದೇಶವಾಗಿತ್ತು. ರಾಜ್ಯ ಏಕೀಕರಣದ ನಂತರ ಕರ್ನಾಟಕ ಸರ್ಕಾರದ ಆಡಳಿತಕ್ಕೆ ಇದು ಒಳಪಟ್ಟಿತು. 1961–62ರಲ್ಲಿ ಒಂದು ಮರಗೆಲಸದ ಕಾರ್ಖಾನೆಯನ್ನು ಸ್ಥಾಪಿಸಿ ಈ ಕಾರ್ಯಾಗಾರಕ್ಕೆ ಸಹಾಯವಾಗುವಂತೆ, ಇಲ್ಲಿ ಮರದ ಸಾಮಾನುಗಳು (ಪೀಠೋಪಕರಣ), ಪ್ಯಾಕ್ ಮಾಡುವ ಪೆಟ್ಟಿಗೆಗಳು, ಮೊದಲಾದವುಗಳನ್ನು ಸರ್ಕಾರಿ ಕಛೇರಿ ಮತ್ತು ಸಾರ್ವಜನಿಕರಿಗೆ ಸರಬರಾಜು ಮಾಡಲು ಒಂದು ವಿಭಾಗವನ್ನೂ ತೆರೆಯಲಾಯಿತು. ಈ ಕಾರ್ಯಾಗಾರವು ಸುಮಾರು ಎರಡು ಎಕರೆ ವಿಸ್ತೀರ್ಣದ ನಿವೇಶನದಲ್ಲಿ ಇದೆ. 1956–57 ರಿಂದ 1960–61ರ ಸಾಲಿನಲ್ಲಿ ಈ ಕಾರ್ಯಾಗಾರದ ವಾರ್ಷಿಕ ಕಾರ್ಯ ನಿರ್ವಹಣೆಯ ವೆಚ್ಚವು ಹೀಗಿದ್ದಿತು. 1956–57 ರೂ. 0.61 ಲಕ್ಷ ; 1957–58, ರೂ. 0.77 ಲಕ್ಷ ; 1958–59 ರೂ. 1.27 ಲಕ್ಷ; 1959–60 ರೂ. 1.57 ಲಕ್ಷ; 1960–61–ರೂ. 1.52 ಲಕ್ಷ.

1960–61 ರಿಂದ 1962–63ರ ವರೆಗೆ ಈ ಕೇಂದ್ರ ಕಾರ್ಯಾಗಾರದ ಕಾರ್ಯದ ಬಗ್ಗೆ ಸಂಕ್ಷಿಪ್ತ ವರದಿಯನ್ನು ಈ ಕೆಳಗಿನ ಪಟ್ಟಿಯಲ್ಲಿ ಕೊಡಲಾಗಿದೆ.

| ವಿವರ | 1960–61 ರೂ. | 1961–62 ರೂ. | 1962–63 ರೂ. |
|---|---|---|---|
| 1. ಸರ್ಕಾರೀ ಬಂಡವಾಳ | 3,26,263 | 3,88,435 | 4,80,099 |
| 2. ವಹಿವಾಟು (ಆದಾಯ) | 1,52,498 | 1,40,607 | 1,50,204 |
| 3. ಒಟ್ಟು ಲಾಭ / ನಷ್ಟ | +38,799 | +39,772 | —8,146 |
| 4. ನಿವ್ವಳ ಲಾಭ / ನಷ್ಟ | — 1,032 | — 8,607 | —63,807 |
| 5. ನಿವ್ವಳ ಲಾಭ / ನಷ್ಟ (ಶೇಕಡಾ) | — 0.68 | — 6.12 | — 42.48 |

ಈ ಸಂಸ್ಥೆಯಲ್ಲಿ, ಕಮ್ಮಾರಿಕೆಯಲ್ಲಿ ಕೆಲವು ವಿದ್ಯಾರ್ಥಿಗಳಿಗೆ ತರಬೇತಿ ನೀಡಲಾಗಿತ್ತು. 1962–63ರ ಹೊತ್ತಿಗೆ, ತಾಂತ್ರಿಕ ಸಂಸ್ಥೆಗಳಲ್ಲಿ ಕಲಿತ ವಿದ್ಯಾರ್ಥಿಗಳಿಗೆ, ಇಲ್ಲಿ ಮತ್ತೆ ತರಬೇತಿಯನ್ನು ಕೊಟ್ಟನಂತರ, ಪದವಿಯನ್ನು ನೀಡಲಾಗುತ್ತಿತ್ತು.

ಇಲ್ಲಿ ಮರ ಕುಯ್ಯುವ ಯಂತ್ರವಿದ್ದು ಇದಕ್ಕೂ ಸಾಕಷ್ಟು ಕೆಲಸ ಇದ್ದಂತೆ ಇಲ್ಲ. ಇದನ್ನು ಕರ್ನಾಟಕ ಅರಣ್ಯ ಕೈಗಾರಿಕಾ ನಿಗಮಕ್ಕೆ ವರ್ಗಾಯಿಸಲು ವಿಚಾರ ಮಾಡಲಾಗುತ್ತಿದೆ. 1989-90ರಲ್ಲಿ ಈ ವಿಭಾಗಕ್ಕೆ ರೂ. 18.47 ವೆಚ್ಚವಾದರೆ ರೂ. 11.74 ಲಕ್ಷ ಆದಾಯವಾಗಿದೆ. ಈ ಘಟಕದಲ್ಲಿ 1990ನೇ ಸಾಲಿಗೆ-31 ಮಾಸಿಕ ವೇತನದ ನೌಕರರೂ 3 ದಿನಕೂಲಿ ನೌಕರರೂ ಇದ್ದರು. ಇದರ ಉಸ್ತುವಾರಿಯನ್ನು, ಮಡಿಕೇರಿಯಲ್ಲಿನ ನಿರ್ದೇಶಕರು ನೋಡಿಕೊಳ್ಳುತ್ತಿದ್ದು,

ಕೊಡಗು ಜಿಲ್ಲೆಯಲ್ಲಿ ಸಣ್ಣ ಮತ್ತು ಅತಿ ಸಣ್ಣ ಕೈಗಾರಿಕೆ (ನೋಂದಣಿಯಾದವುಗಳು) ಗಳ ವಿವರ 31-3-1990 ರಲ್ಲಿದ್ದಂತೆ :

| ಕ್ರ. ಸಂ. | ವಿಧ | ನೋಂದಣಿಯಾದ ಘಟಕಗಳು | ನಿರ್ದಿಷ್ಟ ಬಂಡವಾಳ (ಲಕ್ಷ ರೂ.) | ಉದ್ಯೋಗಿಗಳು | ಉತ್ಪಾದನಾ ಸಾಮರ್ಥ್ಯ (ಲಕ್ಷ ರೂ.) | ಮುಖ್ಯ ಅಂತಿಮ ಉತ್ಪಾದಿತ ವಸ್ತುಗಳು |
|---|---|---|---|---|---|---|
| 1. | ಮರ ಮತ್ತು ಮರ ಆಧಾರಿತ | 125 | 56.37 | 590 | 107.24 | ಮರದ ಮತ್ತು ಬೆತ್ತದ ಗೃಹೋಪಯೋಗಿ ವಸ್ತುಗಳು. |
| 2. | ಸಾಮಾನ್ಯ ಇಂಜಿನಿಯರಿಂಗ್ | 144 | 84.67 | 516 | 139.32 | ಗೋಬರ್‌ಗ್ಯಾಸ್ ಪ್ಲಾಂಟ್‌ಗಳು. |
| 3. | ಚರ್ಮ ಮತ್ತು ರಬ್ಬರ್ ಆಧಾರಿತ | 63 | 34.53 | 358 | 70.52 | ಟಯರ್ ಪುನರ್ ಹೊದಿಕೆ, ಪಾದರಕ್ಷೆ. |
| 4. | ದುರಸ್ತಿ ಮತ್ತು ಸೇವೆಗಳು | 152 | 32.92 | 593 | 75.01 | ಇಂಧನ ಚಾಲಿತ ವಾಹನ ದುರಸ್ತಿ, ಸೇವೆ ಇತ್ಯಾದಿ. |
| 5. | ಆಹಾರ ಆಧಾರಿತ | 120 | 91.42 | 864 | 188.43 | ಬೇಕರಿ ಘಟಕಗಳು, ತಂಪು ಪಾನೀಯ, ಜೇನು ಸಂಸ್ಕರಣೆ ಇತ್ಯಾದಿ. |
| 6. | ಹೊಸೈರಿ | 98 | 16.79 | 306 | 60.17 | ಉಣ್ಣೆ ಬಟ್ಟೆಗಳು, ಬಟ್ಟೆಗಳು. |
| 7. | ಮುದ್ರಣ | 59 | 44.11 | 356 | 47.46 | — |
| 8. | ಇತರೆ | 410 | 312.00 | 1,495 | 282.11 | ಹಿಟ್ಟಿನ ಗಿರಣಿ, ಅಕ್ಕಿಗಿರಣಿ, ಸ್ಟುಡಿಯೋ, ಕಾಫಿ ಬೀಜ ಹುರಿಯುವಿಕೆ ಇತ್ಯಾದಿ. |
| | ಮೊತ್ತ | 1,171 | 666.81 | 5,080 | 970.26 | |

ಆಧಾರ : ಜಿಲ್ಲಾ ಕೈಗಾರಿಕಾ ಕೇಂದ್ರ, ಮಡಿಕೇರಿ

ಕೊಡಗು ಜಿಲ್ಲೆಯಲ್ಲಿ 1983–84 ರಿಂದ 1989–90ರ ವರೆಗೆ ನೊಂದಾಯಿಸಿರುವ ಸಣ್ಣ ಮತ್ತು ಅತಿ ಸಣ್ಣ ಕೈಗಾರಿಕೆಗಳ ತಾಲೂಕುವಾರು ವಿವರ :

| ವರ್ಷ | ಮಡಿಕೇರಿ | | | ಸೋಮವಾರಪೇಟೆ | | | ವೀರರಾಜಪೇಟೆ | | | ಒಟ್ಟು | | |
|---|---|---|---|---|---|---|---|---|---|---|---|---|
| | ಘಟಕಗಳು | ಬಂಡವಾಳ (ಲಕ್ಷರೂ.) | ಉದ್ಯೋಗಿಗಳ ಸಂಖ್ಯೆ | ಘಟಕಗಳು | ಬಂಡವಾಳ (ಲಕ್ಷರೂ.) | ಉದ್ಯೋಗಿಗಳ ಸಂಖ್ಯೆ | ಘಟಕಗಳು | ಬಂಡವಾಳ (ಲಕ್ಷರೂ.) | ಉದ್ಯೋಗಿಗಳ ಸಂಖ್ಯೆ | ಘಟಕಗಳು | ಬಂಡವಾಳ (ಲಕ್ಷರೂ.) | ಉದ್ಯೋಗಿಗಳ ಸಂಖ್ಯೆ |
| 1983–84 | 30 | 5.64 | 115 | 32 | 13.61 | 117 | 20 | 3.32 | 57 | 82 | 10.27 | 289 |
| 1984–85 | 44 | 7.35 | 146 | 58 | 11.11 | 288 | 28 | 8.62 | 87 | 130 | 27.06 | 521 |
| 1985–86 | 34 | 10.21 | 77 | 45 | 12.82 | 182 | 38 | 21.61 | 120 | 116 | 49.63 | 379 |
| 1986–87 | 37 | 11.84 | 163 | 46 | 21.63 | 242 | 32 | 15.00 | 111 | 115 | 48.20 | 516 |
| 1987–88 | 43 | 13.07 | 80 | 35 | 20.31 | 106 | 25 | 8.85 | 66 | 103 | — | 252 |
| 1988–89 | 35 | 21.23 | 112 | 37 | 15.86 | 148 | 30 | 11.86 | 101 | 102 | — | 361 |
| 1989–90 | 37 | 14.05 | 138 | 30 | 13.76 | 125 | 33 | 7.80 | 113 | 100 | — | 376 |

ಆಧಾರ : ಜಿಲ್ಲಾ ಕೈಗಾರಿಕಾ ಕೇಂದ್ರ, ಮಡಿಕೇರಿ

ಕರ್ನಾಟಕ ಸರ್ಕಾರದ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯು ನಿರ್ದೇಶಕರ ನಿಯಂತ್ರಣದಲ್ಲಿದೆ.

**ಸರ್ಕಾರಿ ಮುದ್ರಣಾಲಯ**

ಹಿಂದಿನ ಕೊಡಗು ಸರ್ಕಾರದ ಪೂರ್ಣ ಪ್ರಮಾಣದ ಮುದ್ರಣಾಲಯ ಮಡಿಕೇರಿಯಲ್ಲಿತ್ತು. 1922ರಲ್ಲಿ ಈ ಸರ್ಕಾರಿ ಮುದ್ರಣಾಲಯವನ್ನು ಬೆಂಗಳೂರಿನ ರೆಸಿಡೆನ್ಸಿ ಮುದ್ರಣಾಲಯದೊಂದಿಗೆ ವಿಲೀನಗೊಳಿಸಲಾಯಿತು ಮತ್ತು ಎಲ್ಲಾ ಯಂತ್ರೋಪಕರಣಗಳನ್ನೂ, ಸಿಬ್ಬಂದಿಯನ್ನೂ ಬೆಂಗಳೂರಿಗೆ ವರ್ಗಾಯಿಸಲಾಯಿತು. ಅನಂತರ ಕೊಡಗು ರಾಜ್ಯಕ್ಕೆ ಸಂಬಂಧಪಟ್ಟ ಮುದ್ರಣ ಕಾರ್ಯವೆಲ್ಲವೂ ಬೆಂಗಳೂರಿನ ರೆಸಿಡೆನ್ಸಿ ಮುದ್ರಣಾಲಯದಲ್ಲಿ ನಡೆಯುತ್ತಿತ್ತು. 1948ರಲ್ಲಿ ಬೆಂಗಳೂರಿನ ಸಿವಿಲ್ ಮತ್ತು ಮಿಲಿಟರಿ ಸ್ಟೇಷನ್‌ಗಳು ಮೈಸೂರು ರಾಜ್ಯದ ಅಧೀನಕ್ಕೆ ಒಳಪಟ್ಟಾಗ, ಈ ರೆಸಿಡೆನ್ಸಿ ಮುದ್ರಣಾಲಯವು ಮೈಸೂರು ರಾಜ್ಯ ಮುದ್ರಣಾಲಯದ ಒಂದು ಅಂಗವಾಯಿತು. ಕೊಡಗಿಗೆ ಸಂಬಂಧಪಟ್ಟ ಮುದ್ರಣ ಕಾರ್ಯವು ಮೈಸೂರಿನ ಮುದ್ರಣಾಲಯದಲ್ಲಿ ನಡೆಯುತ್ತಿದ್ದು, ಸ್ವಲ್ಪ ಕಾಲದ ನಂತರ ಈ ವ್ಯವಸ್ಥೆಯು ಸಮರ್ಪಕವಾಗಿರಲಿಲ್ಲ. ಈ ಕಾರಣದಿಂದಾಗಿ 1952ರಲ್ಲಿ ಆಗಿನ ಭಾರತ ಸರ್ಕಾರದ ಪರವಾನಗಿಯಿಂದ ಆಗಿನ ಕೊಡಗು ಸರ್ಕಾರವು ಮಡಿಕೇರಿ ಮುದ್ರಣಾಲಯವನ್ನು ಅದೇ ಜಾಗದಲ್ಲಿ ಪುನರಾರಂಭ ಮಾಡಿತು. ಬೇಕಾದ ಯಂತ್ರೋಪಕರಣ, ಅಚ್ಚು ಮೊಳೆ ಮೊದಲಾದವನ್ನು ಖರೀದಿ ಮಾಡಲಾಯಿತು. 1954ನೇ ಮಾರ್ಚ್ ಒಂದರಿಂದ ಮಡಿಕೇರಿ ಮುದ್ರಣಾಲಯವು ಕಾರ್ಯ ಪ್ರಾರಂಭ ಮಾಡಿತು. ನಂತರ ಈ ಮುದ್ರಣಾಲಯವು ಪ್ರಗತಿ ಹೊಂದಿ, 1964ರ ಹೊತ್ತಿಗೆ 26 ಕೆಲಸಗಾರರಿರುವ ಸಂಸ್ಥೆಯಾಗಿದ್ದಿತು. ಪ್ರಸ್ತುತ ಈ ಮುದ್ರಣಾಲಯವು ರಾಜ್ಯ ಸರಕಾರೀ ಮುದ್ರಣಾಲಯ ನಿರ್ದೇಶಕರ ನಿಯಂತ್ರಣದಲ್ಲಿದೆ. ಇಲ್ಲಿ ಒಬ್ಬ ಸಹಾಯಕ ನಿರ್ದೇಶಕರು, 1 ಮೇಲ್ವಿಚಾರಕರು 67 ಇತರ ಸಿಬ್ಬಂದಿಯವರೂ ಇದ್ದಾರೆ. ಸರ್ಕಾರದ ಪಠ್ಯ ಪುಸ್ತಕಗಳೂ ಇಲ್ಲಿ ಮುದ್ರಿತವಾಗುತ್ತವೆ.

**ಇತರ ಕಸುಬುಗಳು**

1951ರ ಜನಗಣತಿ ಆಧರಿಸಿದಂತೆ ಕೊಡಗು ಜಿಲ್ಲೆಯಲ್ಲಿ ಕಂಡು ಬರುವ ಸುಮಾರು 150 ವಿವಿಧ ವ್ಯವಸಾಯೇತರ ವೃತ್ತಿಗಳು ಹಾಗೂ ಈ ವೃತ್ತಿಗಳಲ್ಲಿ ನಿರತರಾದವರ ಸಂಖ್ಯೆ ಹೀಗಿತ್ತು. ಚಹಾ ತೋಟಗಳ ಕೆಲಸಗಾರರು 219 ; ಕಾಫಿ ತೋಟ 20,357 ; ರಬ್ಬರ್ ತೋಟ 674 ; ಶ್ರೀಗಂಧ ಮರದ ಕೆಲಸಗಾರರು 76 ; ಮೆಣಸಿನ ತೋಟದ ಕೆಲಸಗಾರರು 153 ; ಕಿತ್ತಳೆ ತೋಟ 429 ; ಅಡಿಕೆ ತೋಟ 66 ; ಏಲಕ್ಕಿ ತೋಟ 204 ; ತರಕಾರಿ ಬೆಳೆಗಾರರು 100 ; ಅಕ್ಕಿ ಗಿರಣಿ ಕೆಲಸಗಾರರು 35 ; ಬೇಕರಿ ಕೆಲಸಗಾರರು 78 ; ತಾಮ್ರ ಲೋಹದ ಕೆಲಸಗಾರರು 23 ; ಟೈಯರ್ ಕೆಲಸಗಾರರು 10 ; ಮುದ್ರಣಗಾರರು 20 ; ಪ್ಲಾಸ್ಟರಿಂಗ್ 175 ; ಮಣ್ಣಿನ ಕೆಲಸ 721 ; ದಿನಸಿ ಅಂಗಡಿ 434 ; ಸರ್ಕಸ್ ಕಂಪನಿಗಳಲ್ಲಿ 110 ; ಹೋಟೆಲ್ ನೌಕರರು 1025 ; ಪಶುಪಾಲನೆ 86 ; ಆನೆಗಳ ಪಾಲನೆ 55 ; ಇದ್ದಿಲು ಸುಡುವವರು 6 ; ಮರ ಕಡಿಯುವವರು 638 ; ಹಾವು, ಮೊಸಳೆ ಹಿಡಿಯುವವರು 32 ; ಮೀನು ಹಿಡಿಯುವವರು 12 ; ಕಟುಕರು 27 ; ಸೇಂದಿ ಇಳಿಸುವವರು 313 ; ದರ್ಜಿ 335 ; ಸಮಗಾರ 1 ; ಕಮ್ಮಾರ 151 ; ನೇಕಾರರು 20 ; ಅಕ್ಕಸಾಲಿಗರು 283 ; ಕುಂಬಾರರು 28 ; ಬಡಗಿಗಳು 283 ; ಕಲ್ಲು ಕುಟಿಕರು 609 ; ಬಣ್ಣ ಬಳಿಯುವವರು 22 ; ಬಳೆ ಮಾರುವವರು (ಬಳೆಗಾರರು) 37 ; ಹರಿಕತೆದಾಸರು 2 ; ನೃತ್ಯಗಾರರು ಹಾಗೂ ನಟನೆ ಮಾಡುವವರು 14 ; ಸಂಗೀತ ಬೋಧಕರು 3 ; ಹಾವಾಡಿಗರು 2; ಪೂಜಾರಿಗಳು 157 ; ಪುರೋಹಿತರು 10 ; ಚರ್ಚ್ ಪಾದ್ರಿಗಳು 6 ; ಮಸೀದಿಯ ಮೌಲ್ವಿಗಳು 23 ; ಜೋತಿಷ್ಯ ಹೇಳುವವರು 38 ; ಆಯಾಗಳು 5 ; ಕ್ಷೌರಿಕರು 186 ; ಧೋಬಿಗಳು 330 ; ಮಾಲಿಗಳು 3 ; ಮನೆ ಕೆಲಸದ ಆಳುಗಳು 822 ; ಅಡಿಗೆ ಕೆಲಸ ಮಾಡುವವರು 504 ; ಖಾಸಗೀ ವಾಹನ ಚಾಲಕರು 41 ; ವರ್ಗೀಕರಣಗೊಳ್ಳದ ಕಾರಕೂನರು (ಸರ್ಕಾರೇತರ) 27 ; ಕ್ಲಬ್ ಹಾಗೂ ಸಾರ್ವಜನಿಕ ಬಂಗ್ಲೆ ನೌಕರರು 13 ; ಮೋಜಣಿದಾರರು 7 ; ವಕೀಲರು 17 ; ವಕೀಲರ ಸಹಾಯಕರು 7; ತಂತ್ರಜ್ಞರು 1 ; ಪುಸ್ತಕಗಳ ಸಂಪಾದಕರು (ಗ್ರಂಥಕರ್ತರು) 2 ; ಛಾಯಾಚಿತ್ರಗ್ರಾಹಕರು 7 ; ಮೂರ್ತಿ ತಯಾರಕರು 2; ಪ್ರದರ್ಶನಗಳನ್ನು ಏರ್ಪಡಿಸುವವರು 6 ; ಕಟ್ಟಡ ಕಾಂಟ್ರಾಕ್ಟರುಗಳು 249 ; ಹಾಲು ಉತ್ಪಾದಕರು 11 ; ಕೊಡೆ ದುರಸ್ತಿ 3 ; ಟೋಪಿ ಹೊಲಿಗೆ 3 ; ಟಾರ್ಚ್ ಮತ್ತು ಪೆಟ್ರೋಮ್ಯಾಕ್ಸ್ ದುರಸ್ತಿ ಮಾಡುವವರು 3 ; ಬಂದೂಕು ದುರಸ್ತಿ ಮಾಡುವವರು 3 ; ಸೈಕಲ್ ದುರಸ್ತಿ 23 ; ಮೋಟಾರ್ ವಾಹನ ದುರಸ್ತಿ 64 ; ಹೊಲಿಗೆ ಯಂತ್ರ ದುರಸ್ತಿ 1 ; ಕೈಗಡಿಯಾರ ದುರಸ್ತಿ 19 ; ಪೆನ್ ದುರಸ್ತಿ 2 ; ಸುಣ್ಣ ತಯಾರಕರು 8 ; ಬುಟ್ಟಿ ಹೆಣೆಯುವವರು 159 ; ಪೊರಕೆ ತಯಾರಿಸುವವರು 36 ; ಇಟ್ಟಿಗೆ ಹಾಗೂ ಹಂಚು ತಯಾರಕರು 128 ; ಕಂಚಿನ ಯಂತ್ರ ತಯಾರಕರು

7 ; ಸಿಹಿತಿಂಡಿ ತಯಾರಕರು 27 ; ಬೆಲ್ಲ ತಯಾರಕರು 3 ; ಹಪ್ಪಳ ತಯಾರಕರು 6 ; ಸೋಡಾ ತಯಾರಕರು 37 ; ನಶ್ಯ ತಯಾರಕರು 3 ; ರೇಷ್ಮೆ ತಯಾರಿಸುವವರು 11 ; ಪಾದರಕ್ಷೆ ಹೊಲಿಯುವವರು 51 ; ಕುದುರೆ ಹಾಗೂ ಎತ್ತುಗಳ ಲಾಳ ತಯಾರಕರು 19 ; ದಿನಪತ್ರಿಕೆ ಹಂಚುವವರು 16 ; ಯುನಾನಿ ಔಷಧಿ ತಯಾರಕರು 2 ; ಕಟ್ಟಡದ ಬಿದಿರಿನ ಸಾಮಗ್ರಿಗಳ ತಯಾರಕರು 14 ; ಗಾರೆ ಮತ್ತು ಇಟ್ಟಿಗೆ ತಯಾರಕರು 297 ; ಪುಸ್ತಕ ವ್ಯಾಪಾರಿಗಳು 16 ; ಔಷಧಿ ವ್ಯಾಪಾರಿ 312 ; ಚೂರಿ ಚಾಕು ಮಾರಾಟಗಾರರು 117 ; ಚಿಲ್ಲರೆ ಅಂಗಡಿಯವರು 990 ; ತಾಮ್ರದ ಪಾತ್ರೆ ವ್ಯಾಪಾರಿ 15 ; ಮಡಿಕೆ ವ್ಯಾಪಾರಿ 3 ; ಗಾಜಿನ ಸಾಮಗ್ರಿ ಮಾರಾಟಗಾರರು 7 ; ಮೋಟಾರ್ ಬಿಡಿಭಾಗಗಳ ಮಾರಾಟದವರು 13 ; ವಜ್ರ ವ್ಯಾಪಾರಿ 4 ; ಮದ್ದು ಗುಂಡು ವ್ಯಾಪಾರಿ 4; ಹಣ್ಣು ವ್ಯಾಪಾರಿ 99 ; ಸಿಹಿತಿಂಡಿ ವ್ಯಾಪಾರಿ 21 ; ಮೀನು ವ್ಯಾಪಾರಿ 39 ; ಅಡಿಕೆ ವ್ಯಾಪಾರಿ 3 ; ತರಕಾರಿ ವ್ಯಾಪಾರಿ 22 ; ಹಾಲು ಮಾರುವವರು 23 ; ಬೆಲ್ಲದ ವ್ಯಾಪಾರಿ 36 ; ಏಲಕ್ಕಿ ವ್ಯಾಪಾರಿ 2 ; ಮೆಣಸಿನ ವ್ಯಾಪಾರಿ 4 ; ತೆಂಗಿನ ಕಾಯಿ ವ್ಯಾಪಾರಿ 28 ; ಬೆಣ್ಣೆ ಹಾಗೂ ತುಪ್ಪ ಮಾರುವವರು 9 ; ಕೊಬ್ಬರಿ ಎಣ್ಣೆ ವ್ಯಾಪಾರಿ 4 ; ಮದ್ಯಸಾರ ವ್ಯಾಪಾರಿ 49 ; ಸೇಂದಿ ವ್ಯಾಪಾರಿ 10 ; ಸೋಡಾ ವ್ಯಾಪಾರಿ 11 ; ಹೊಗೆಸೊಪ್ಪು ವ್ಯಾಪಾರಿ 21 ; ವೀಳ್ಯದೆಲೆ ವ್ಯಾಪಾರಿ 37 ; ಪೆಟ್ರೋಲ್ ವ್ಯಾಪಾರಿ 11 ; ಪಾನ್‌ಬೀಡಾ ಮಾರುವವರು 43 ; ಸೀಮೆಎಣ್ಣೆ ಮಾರುವವರು 1 ; ಸೌದೆ ವ್ಯಾಪಾರಿ 1 ; ಬಟ್ಟೆ ವ್ಯಾಪಾರಿ 191 ; ಚರ್ಮ ವ್ಯಾಪಾರಿ 11 ; ಪಾದರಕ್ಷೆ ವ್ಯಾಪಾರಿ 12 ; ಬತ್ತದ ವ್ಯಾಪಾರಿ 18 ; ಕಾಫಿಯ ಸಗಟು ವ್ಯಾಪಾರಿ 17 ; ಸಗಟು ದಿನಸಿ ವ್ಯಾಪಾರಿ 13 ; ಸಗಟು ಮರದ ವ್ಯಾಪಾರಿ 124 ; ಗಿಲೀಟು ವಸ್ತುಗಳ ಸಗಟು ವ್ಯಾಪಾರಿ 4 ; ಬಟ್ಟೆ ಸಗಟು ವ್ಯಾಪಾರಿ 8 ; ಬೀಡಿ ಸಗಟು ವ್ಯಾಪಾರಿ 3 ; ಆಹಾರೇತರ ವಸ್ತುಗಳ ಸಗಟು ವ್ಯಾಪಾರಿಗಳು 8 ; ಎಸ್ಟೇಟ್ ದಳ್ಳಾಳಿಗಳು 1 ; ವಿಮಾ ಕಂಪನಿ ಕೆಲಸಗಾರರು 8 ; ಮೋಟಾರು ವಾಹನ ಚಾಲಕರು 254 ; ಎತ್ತಿನಗಾಡಿ ಕೆಲಸಗಾರರು 223 ; ಇತರ ಮೋಟಾರ್ ಕೆಲಸಗಾರರು 330 ; ಆನೆ ಮಾವುತರು 52 ; ಕುದುರೆಗಳ ಮೇಲೆ ಸಾಮಾನು ಸಾಗಿಸುವವರು 3 ; ಕತ್ತೆಗಳ ಮೇಲೆ ಸಾಮಾನು ಸಾಗಿಸುವವರು 1 ; ದೋಣಿ ನಾವಿಕರು 5 ; ಡಾಕ್ಟರುಗಳು (ಸ್ಥಳೀಯ ವೈದ್ಯರು ಸೇರಿ) 71 ; ದಂತ ವೈದ್ಯರು 2 ; ದಾದಿಗಳು 29 ; ಪಶುವೈದ್ಯ ಕೆಲಸಗಾರರು 7 ; ಕಾಂಪೌಂಡರುಗಳು 39 ; ಚಹಾ ಮಾರುವ ಏಂಜಟರುಗಳು 4.

ಕೊಡಗು ಜಿಲ್ಲೆಯಲ್ಲಿ 1990ರಲ್ಲಿ ಇದ್ದ ಕೆಲವು ಗ್ರಾಮೀಣ/ಗೃಹಕೈಗಾರಿಕೆಗಳ ವಿವರ :

| ಕೈಗಾರಿಕೆಗಳ ವಿವರ | ಮಡಿಕೇರಿ | ಸೋಮವಾರಪೇಟೆ | ವೀರರಾಜಪೇಟೆ | ಮೊತ್ತ |
|---|---|---|---|---|
| ಕೈಮಗ್ಗ | — | — | 80 | 80 |
| ಪಾದರಕ್ಷೆ ಮಾಡುವ ಘಟಕ | 15 | 05 | 10 | 30 |
| ಚರ್ಮಕಾರರು | 30 | 30 | 40 | 100 |
| ಬಡಗಿ ಕೆಲಸದ ಘಟಕ | 62 | 56 | 83 | 201 |
| ಕಮ್ಮಾರಿಕೆಯ ಘಟಕ | 53 | 62 | 67 | 172 |
| ಚಿನ್ನ, ಬೆಳ್ಳಿ ಕೆಲಸಗಾರರ ಘಟಕ | 87 | 63 | 102 | 252 |
| ಕಾಷ್ಟ ಶಿಲ್ಪಿಗಳು | — | 01 | 03 | 04 |
| ಬಿದಿರಿನ ಕೆಲಸಗಾರರರು | 75 | 15 | 25 | 115 |
| ಬೆಂಕಿಪೆಟ್ಟಿಗೆ ಮಾಡುವ ಘಟಕ | — | 01 | — | 01 |
| ಕುಂಬಾರಿಕೆ ಘಟಕ | 60 | 20 | — | 80 |
| ಬೊಂಬೆ ಮಾಡುವ ಘಟಕ | 01 | — | — | 01 |
| ಕುಶಲ ಕೆಲಸಗಾರರ ಘಟಕ | 05 | 02 | 02 | 09 |
| ಸುಣ್ಣ ತಯಾರಿಕೆ | 05 | 02 | 07 | 14 |
| ಹಾಸಿಗೆ ತಯಾರಕರು | 20 | 05 | 15 | 40 |
| ಮೊತ್ತ | 413 | 252 | 434 | 1109 |

ಆಧಾರ (ಆನ್ಯುಯಲ್ ಕ್ರೆಡಿಟ್ ಪ್ಲಾನ್)

1991ನೇ ಜನಗಣತಿಯ ಪ್ರಕಾರ ಕೊಡಗು ಜಿಲ್ಲೆಯಲ್ಲಿ ಮುಖ್ಯ ಕಸುಬುದಾರರ ವಿವರ ಹೀಗಿದೆ.

| ಮುಖ್ಯ ಕಸುಬುದಾರರು | | 1981 | | | 1991 | | |
|---|---|---|---|---|---|---|---|
| | | ಗಂಡಸರು | ಹೆಂಗಸರು | ಮೊತ್ತ (ಶೇಕಡಾವಾರು) | ಗಂಡಸರು | ಹೆಂಗಸರು | ಮೊತ್ತ |
| ಸಾಗುವಳಿದಾರರು | ಒಟ್ಟು | 25.59 | 18.61 | 23.31 | 21.96 | 16.52 | 20.07 |
| | ಗ್ರಾ. | 29.16 | 19.76 | 25.92 | 25.40 | 17.90 | 22.59 |
| | ಪ. | 4.99 | 3.69 | 4.74 | 3.33 | 1.66 | 2.96 |
| ಕೃಷಿ ಕಾರ್ಮಿಕರು | ಒಟ್ಟು | 13.74 | 20.12 | 15.82 | 18.75 | 13.22 | 15.18 |
| | ಗ್ರಾ. | 15.75 | 21.22 | 17.64 | 15.14 | 19.78 | 16.83 |
| | ಪ. | 2.16 | 5.99 | 2.89 | 2.77 | 6.71 | 3.63 |
| ಗೃಹ ಕೈಗಾರಿಕೆ ಕೆಲಸಗಾರರು | | 1.17 | 0.62 | 0.99 | 1.02 | 0.77 | 0.93 |
| | ಗ್ರಾ. | 1.06 | 0.56 | 0.89 | 0.98 | 0.72 | 0.88 |
| | ಪ. | 1.79 | 1.51 | 1.74 | 1.23 | 1.33 | 1.26 |
| ಇತರೆ ಕೆಲಸಗಾರರು | ಒಟ್ಟು | 59.50 | 60.65 | 59.88 | 63.88 | 63.86 | 63.82 |
| | ಗ್ರಾ. | 54.03 | 58.46 | 55.55 | 58.48 | 61.60 | 59.65 |
| | ಪ. | 91.06 | 88.81 | 91.63 | 92.67 | 90.30 | 92.15 |

ಗ್ರಾ. – ಗ್ರಾಮೀಣ, ಪ. – ಪಟ್ಟಣ

ಆಧಾರ : 1991ರ ಜನಗಣತಿ

## ಕೆಲವು ಕಿರು ಉದ್ಯಮಗಳು

**ಟೀ ಉದ್ಯಮ :** 1951 ರಲ್ಲಿ ಇಂಗ್ಲಿಷ್ ಕಂಪೆನಿಯಿಂದ ಪ್ರಾರಂಭಿಸಲ್ಪಟ್ಟ ಗ್ಲೆನಲಾರ್ನ್ ಎಸ್ಟೇಟನ್ನು 1943 ರಲ್ಲಿ ದಿ ಕೂರ್ಗ್ ಟೀ ಕಂಪೆನಿ ಎಂಬ ಹೆಸರಿನಲ್ಲಿ ಹೊಸ ವ್ಯವಸ್ಥೆಯೊಂದಿಗೆ ಪುನಃ ಪ್ರಾರಂಭಿಸಲಾಯಿತು. ಹುದಿಕೇರಿಯ ಬಳಿ 1,227 ಎಕರೆ ಪ್ರದೇಶದಲ್ಲಿ ಟೀ ಬೆಳೆಯುತ್ತಿದ್ದು, 1962 ರಲ್ಲಿ ವಾರ್ಷಿಕ 1,82,000 ಕೆ.ಜಿ. ಟೀ ಯನ್ನು ಉತ್ಪಾದಿಸುತ್ತಿತ್ತು. ಹಸನು ಮಾಡಿದ ಟೀ ಪುಡಿಯನ್ನು ಕೊಚ್ಚಿಗೆ ಮಾರಾಟಕ್ಕಾಗಿ ಕಳಿಸುತ್ತಿದ್ದರು. ಪ್ರಸ್ತುತ 370 ಹೆಕ್ಟೇರ್ ಪ್ರದೇಶದಲ್ಲಿ ಟೀಯನ್ನು ಬೆಳೆಯುತ್ತಿದ್ದು, ಟೀಯನ್ನು ಬೇರೆ ಟೀ ಕಾರ್ಖಾನೆಗಳಿಗೆ ಕಳುಹಿಸಲಾಗುತ್ತಿದೆ. ಗಣನೀಯ ಪ್ರಮಾಣದಲ್ಲಿ ಟೀ ಎಸ್ಟೇಟ್ ಇದ್ದರೂ, ಟೀ ಉತ್ಪಾದನೆಯ ಬೃಹತ್ ಅಥವಾ ಮಧ್ಯಮ ವರ್ಜೆಯ ಕಾರ್ಖಾನೆ ಈ ಜಿಲ್ಲೆಯಲ್ಲಿ ಇಲ್ಲ.

**ಕುಂಬಾರಿಕೆ :** ಕುಂಬಾರಿಕೆಯು ಮುಖ್ಯವಾಗಿ ಮಡಿಕೆ ದಾಟು, ತೊರೆನೂರು, ಹೆಬ್ಬಾಲೆ, ಶಿರಂಗಾಲ, ಶನಿವಾರಸಂತೆ, ಸಿದ್ದಾಪುರ ಮತ್ತು ನಾಪೋಕ್ಲು ಗಳಲ್ಲಿ ಪ್ರಚಲಿತವಾಗಿದೆ. ಮಡಿಕೆ ದಾಟು ಇವುಗಳಲ್ಲಿ ಪ್ರಮುಖವಾದುದು. 1960–70 ರಲ್ಲಿ ಸುಮಾರು 50–100 ಕುಟುಂಬಗಳು ಮಡಿಕೆ, ಆಟಿಕೆ ಮುಂತಾದ ಮಣ್ಣಿನ ವಸ್ತುಗಳನ್ನು ಮಾಡುತ್ತಿದ್ದು ಇತ್ತೀಚೆಗೆ ಈ ಸಂಖ್ಯೆ ಕಡಿಮೆಯಾಗುತ್ತಿದೆ. ಈ ವೃತ್ತಿ ಕೆಲವರಿಗೆ ಅನುವಂಶಿಕವಾಗಿ ಬಂದಿದೆ. ಇವರು ತಾವು ಮಾಡಿದ ಗೃಹ ಬಳಕೆ ವಸ್ತುಗಳನ್ನು ಬೇರೆ ಊರುಗಳಲ್ಲಿ ಮುಖ್ಯವಾಗಿ ಸಂತೆಗಳಲ್ಲಿ ಮಾರುತ್ತಾರೆ. ಹರಕೆಯ ನಾಯಿ, ಹುಲಿ ಮುಂತಾದ

ಪ್ರಾಣಿಗಳ ಪ್ರತಿಗಳನ್ನು ತಯಾರಿಸುತ್ತಾರೆ. ಒಂದು ಕುಂಬಾರ ಕುಟುಂಬಕ್ಕೆ ಬೇಕಾದ ಮುಖ್ಯವಾದ ವಸ್ತುಗಳೆಂದರೆ, ಒಂದು ದೊಡ್ಡ ಚಕ್ರ, ಜೇಡಿಮಣ್ಣು ಇತ್ಯಾದಿ. ಸಾಧಾರಣವಾಗಿ ಒಂದು ಕುಟುಂಬ ಮಾಸಿಕ 800 ರೂ. ಇಂದ 1000 ರೂ. ಗಳಿಸಬಹುದು. ಪ್ರಥಮ, ದ್ವಿತೀಯ ಮತ್ತು ತೃತೀಯ ಯೋಜನೆಗಳಲ್ಲಿ ಕುಂಬಾರಿಕೆಯನ್ನು ವೃದ್ಧಿಸಲೋಸುಗ ಕ್ರಮವಾಗಿ ರೂ. 18,000, ರೂ. 82,000 ಮತ್ತು ರೂ. 31,000 ಖರ್ಚು ಮಾಡಲಾಗಿತ್ತು. ನಂತರದ ವರ್ಷಗಳಲ್ಲಿ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖಾವತಿಯಿಂದಲೂ, ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ವತಿಯಿಂದಲೂ ಮತ್ತು ಇತರೆ ಆರ್ಥಿಕ ಸಂಸ್ಥೆಗಳು ಸಹಾಯ ಧನ, ಸಾಲಗಳನ್ನು ಒದಗಿಸುತ್ತಲಿದೆ. ಗೃಹೋಪಯೋಗಿ ವಸ್ತುಗಳಲ್ಲದೆ, ಹೂದಾನಿ, ಬೊಂಬೆಗಳು, ಜಾಡಿಗಳು, ಕಾಫಿ ಕೆಟಲ್‌ಗಳು, ಕಪ್ಪು ಸಾಸರುಗಳು ಮೊದಲಾದವನ್ನು ಮಾಡಲು ತರಬೇತಿ ಹಾಗೂ ಪ್ರೋತ್ಸಾಹವನ್ನು ನೀಡಲಾಗಿದೆ. 1990 ರಲ್ಲಿ ಗ್ರಾಮೀಣ ಕುಂಬಾರಿಕೆ ಘಟಕಗಳು ಮಡಿಕೇರಿ ತಾ॥ನಲ್ಲಿ 60, ವೀರರಾಜಪೇಟೆ ತಾ॥ 20 ಇದ್ದವು.

### ರಬ್ಬರ್‌ಉದ್ಯಮ

1962-63 ರಲ್ಲಿ ಈ ಜಿಲ್ಲೆಯಲ್ಲಿ ಏಳು ರಬ್ಬರ್ ಎಸ್ಟೇಟ್‌ಗಳಿದ್ದವು. ಅವುಗಳು 1) ಪೋರ್ಟ್‌ಲ್ಯಾಂಡ್ ರಬ್ಬರ್ ಎಸ್ಟೇಟ್ ಕಂ. ಮಾಕುಟ್ಟ, (1950-60ರವರೆಗೆ) ಸರಾಸರಿ ವಾರ್ಷಿಕ ಉತ್ಪಾದನೆ – 1,12,500 ಕೆ.ಜಿ.; 2) ಕಡಮಕಲ್ ರಬ್ಬರ್ ಎಸ್ಟೇಟ್ ಕಂ., ಕಡಮಕಲ್, – 90,000 ಕೆ. ಜಿ.; 3) ಕೊಚ್ಚಿನ್ ಮಲಬಾರ್ ಎಸ್ಟೇಟ್ ಕಂ. ಲಿ. ಸಂಪಾಜೆ, – 84,000 ಕೆ.ಜಿ.; 4) ದಿ ನಿಲಂಬೂರ ರಬ್ಬರ್ ಕಂ. ದೇವರಕೊಲ್ಲಿ 40,000 ಕೆ.ಜಿ., ಅಲ್ಲದೆ 5) ರಾಮಪುರ ಮತ್ತು ಚಿಕ್ಕನಹಳ್ಳಿ ಎಸ್ಟೇಟ್‌ಗಳು, ಕರಡಿಗೋಡು, 6) ಪಡಂಜರಕರ ಎಸ್ಟೇಟ್ ಕರಡಿಗೋಡು ಹಾಗೂ 7) ಕೆ. ಟಿ. ಕುಂಜಮ್ಮನ್ ಎಸ್ಟೇಟ್, ಎಚ್. ಕರಡಿಗೋಡು ಈ ಕಡೆಯ ಮೂರರಿಂದ ಸುಮಾರು 25,000 ಕೆ.ಜಿ. ಈ ಎಸ್ಟೇಟ್‌ಗಳಲ್ಲಿ ರಬ್ಬರಿನ ಹಾಳೆಗಳನ್ನು ತಯಾರಿಸಿ ಕೇರಳಕ್ಕೆ ಕಳುಹಿಸುತ್ತಿದ್ದರು. ಪ್ರಸ್ತುತ ಜಿಲ್ಲೆಯಲ್ಲಿ 1,920 ಹೆಕ್ಟೇರ್ ರಬ್ಬರ್ ತೋಟವಿದ್ದು, ರಬ್ಬರಿನ ಹಾಳೆಗಳನ್ನು ಕೇರಳಕ್ಕೆ ಕಳುಹಿಸುತ್ತಾರೆ. ಇಲ್ಲಿ ರಬ್ಬರಿನ ವಸ್ತುಗಳನ್ನು ತಯಾರಿಸುವ ಯಾವ ದೊಡ್ಡ ಕಾರ್ಖಾನೆಯೂ ಇಲ್ಲ.

### ಕೈಮಗ್ಗಗಳು

ಕೈಮಗ್ಗದ ಉದ್ಯಮವು ಈ ಜಿಲ್ಲೆಯಲ್ಲಿ ಹೆಚ್ಚು ಪ್ರಚಲಿತವಾಗಿರಲಿಲ್ಲ. ವೀರರಾಜಪೇಟೆಯು ಆರಂಭ ಆದಾಗ ಅಲ್ಲಿ ಕೆಲವು ನೇಕಾರರನ್ನು ನೆಲೆ ನಿಲ್ಲಿಸಲಾಗಿತ್ತು. ಅಲ್ಲದೆ ಸೋಮವಾರಪೇಟೆ ತಾ॥ನ ಹಲವು ಊರುಗಳಲ್ಲಿ ಪರಂಪರಾನುಗತವಾಗಿ ಕುರುಹಿನಶೆಟ್ಟಿ ಜಾತಿಯ ನೇಕಾರರು ಇದ್ದರು. 1957ರಲ್ಲಿ ಒಬ್ಬ ಬರಹಗಾರನು ಪರದಿ ಮಾಡಿದಂತೆ ಕೊಡಗಿನಲ್ಲಿ ಉಣ್ಣೆ ಕಂಬಳಿ ಉತ್ಪಾದಿಸುತ್ತಿದ್ದರು. ಹತ್ತಿ ಬಟ್ಟೆಯನ್ನು ಹೊರಗಿನಿಂದಲೇ ತರಿಸುತ್ತಾರೆ. 1952ರ ನಂತರ ಈ ಉದ್ಯಮಕ್ಕೆ ಉತ್ತೇಜನ ದೊರೆತಿದ್ದು, ಶನಿವಾರಸಂತೆ, ಮತ್ತು ಶಿರಂಗಾಲಗಳಲ್ಲಿ ನೇಯ್ಗೆ ಕೇಂದ್ರೀಕೃತವಾಗಿತ್ತು. ಇವೆರಡರಲ್ಲಿ ಶನಿವಾರಸಂತೆ ಪ್ರಾಮುಖ್ಯತೆಯನ್ನು ಪಡೆದಿತ್ತು. 1964ರಲ್ಲಿ, ಹತ್ತಿ ಬಟ್ಟೆಯ ಕೈಮಗ್ಗಗಳು 127 ಇದ್ದು, 200 ಕೆಲಸಗಾರರಿದ್ದರು. ಇಲ್ಲಿನ ನೇಕಾರರು, ಸಾಂಪ್ರದಾಯಿಕ ಪದ್ಧತಿಯಾದ 'ಪಿಟ್–ಲೂಮ್' ವಿಧಾನವನ್ನು ಅನುಸರಿಸುತ್ತಿದ್ದರು ಮತ್ತು ಉತ್ಪಾದನೆಯೂ ಹೆಚ್ಚಿರಲಿಲ್ಲ. ಬಂಡವಾಳ, ಕಚ್ಚಾ ಸಾಮಾನುಗಳಾದ ಉತ್ತಮ ಮಟ್ಟದ ನೂಲು ಹಾಗೂ ಬಣ್ಣಗಳು ಸ್ಥಳೀಯವಾಗಿ ಸಿಗದಿರುವುದು, ಇವೆಲ್ಲ ಇದಕ್ಕೆ ಕಾರಣ. ಮುಖ್ಯವಾಗಿ ಪಂಚೆಗಳು, ಲುಂಗಿ, ಕರವಸ್ತ್ರಗಳು, ಒರೆಸುವ ವಸ್ತ್ರಗಳನ್ನು ಇಲ್ಲಿ ಉತ್ಪಾದಿಸುತ್ತಿದ್ದರು. ಶಿರಂಗಾಲದಲ್ಲಿ ಪೋಲೀಸ್ ಮತ್ತು ಅರಣ್ಯ ಇಲಾಖೆಯ ನೌಕರರ ಪೇಟಾಗಳನ್ನು ಹಿಂದೆ ತಯಾರಿಸಲಾಗುತ್ತಿತ್ತು. 1989-90ರಲ್ಲಿ ಈ ಜಿಲ್ಲೆಯ ಸೋಮವಾರಪೇಟೆ ತಾಲೂಕಿನಲ್ಲಿ 80 ಕೈಮಗ್ಗಗಳಿದ್ದವು. ಉಳಿದ ತಾಲೂಕುಗಳಲ್ಲಿ ಈ ಉದ್ಯಮ ಹೆಚ್ಚಾಗಿ ಕಾಣಬರುವುದಿಲ್ಲ.

### ಮರ ಕುಯ್ಯುವ ಯಂತ್ರಾಗಾರ

ಕೊಡಗು ಜಿಲ್ಲೆಯಲ್ಲಿ ಹೇರಳವಾಗಿ ವನಸಿರಿಯಿದ್ದರೂ ಮರ ಕುಯ್ಯುವ ಕಾರ್ಖಾನೆಗಳು ಹಿಂದೆ ಕಡಿಮೆ ಇದ್ದವು. 1960ರ ಸುಮಾರಿಗೆ ಸುಮಾರು 450 ಮಂದಿ ಅರಣ್ಯ ಗುತ್ತಿಗೆದಾರರ ಬಳಿ ಕೆಲಸಗಾರರಾಗಿ ಮರ ಕೊಯ್ಯುತ್ತಿದ್ದರು. ಆದರೆ ಹೆಚ್ಚು ಭಾಗ ಹುಣಸೂರಿಗೆ ಮರದ ದಿಮ್ಮಿಗಳನ್ನು ಕತ್ತರಿಸಲು ಕಳುಹಿಸುತ್ತಿದ್ದರು. ಇಲ್ಲಿ ಈ ಉದ್ಯಮ ಹೆಚ್ಚು ಪ್ರಗತಿಯಾಗಿಲ್ಲ. ಅಪ್ಪಚ್ಚು ಯಂತ್ರಾಗಾರ ಎಂಬ ಒಂದು ಮರ ಕುಯ್ಯುವ ಯಂತ್ರಾಗಾರ ಮಡಿಕೇರಿಯಲ್ಲಿ ಇದ್ದಿತು. 1954ರಲ್ಲಿ ಕೊಡಗು ಸರ್ಕಾರವು ಮುರ್ಕಲ್‌ನಲ್ಲಿ ಸರ್ಕಾರೀ ಸ್ವಾಮ್ಯದ ಮರಕೊಯ್ಯುವ ಯಂತ್ರಾಗಾರವನ್ನು ಮೊದಲ ಪಂಚವಾರ್ಷಿಕ ಯೋಜನೆಯಡಿಯಲ್ಲಿ ಪ್ರಾರಂಭಿಸಿತು. ಮರ ಕೊಯ್ತದಿಂದ ಆಗುವ ನಷ್ಟವನ್ನು ಕಡಿಮೆ ಮಾಡಲೂ, ಹಾಗೂ ನಾಗರ ಹೊಳೆ, ಕಲ್ಲಹಳ್ಳಿ ಗ್ರಾಮಗಳ ಬಳಿ ಸುಮಾರು 680 ಎಕರೆ ಪ್ರದೇಶದಲ್ಲಿ ತೇಗದ ಸಸಿಗಳನ್ನು ನೆಡಲೋಸುಗ,

ಕಡಿದ ಅರಣ್ಯದ ಬೇರೆ ಮರಗಳನ್ನು ಕೂಯ್ಯಲೂ ಈ ಯಂತ್ರಾಗಾರವು ಉಪಯೋಗವಾಗುತ್ತಿತ್ತು.

ಇಲ್ಲಿ ಕೊಯ್ದ ಮರಗಳನ್ನು ಹುಣಸೂರಿನ ಸರ್ಕಾರಿ ಡಿಪೋಗೆ ಕಳುಹಿಸಲಾಗುತ್ತಿತ್ತು. ಈ ಯಂತ್ರಾಗಾರರಿಂದ, ಉಪಯೋಗಿಸದೆ ಹಾಳಾಗುತ್ತಿದ್ದ ಮರಗಳನ್ನು ಸಕಾಲದಲ್ಲಿ, ಬೇಕಾದ ಅಳತೆಗೆ ಕೊಯ್ದು ಉಪಯೋಗಿಸಲಾಗುತ್ತಿತ್ತು. ಇದರಿಂದ ಅರಣ್ಯದಿಂದ ಪಡೆಯಲಾಗುತ್ತಿದ್ದ ಮರಗಳನ್ನು ಲಾಭದಾಯಕವಾಗಿ ಉಪಯೋಗಿಸಿಕೊಳ್ಳುವುದರಲ್ಲಿ ಈ ಯಂತ್ರಾಗಾರ ಸಹಾಯಕವಾಗುತ್ತಿತ್ತು. ಈ ಯಂತ್ರಾಗಾರಕ್ಕೆ ಮರಗಳನ್ನು ಹದಮಾಡುವ ಘಟಕಗಳನ್ನು ಸೇರಿಸಲಾಯಿತು. ಇದರಿಂದ ಗೃಹೋಪಯೋಗಿ ವಸ್ತುಗಳನ್ನು ತಯಾರಿಸಲು ಮರವನ್ನು ಇಲ್ಲಿಂದಲೇ ಪಡೆಯಬಹುದಾಗಿತ್ತು. ಗೃಹ ಮಂಡಳಿ ಮನೆಗಳ ಕಿಟಕಿ, ಬಾಗಿಲುಗಳಿಗೆ ಮರವನ್ನು ಈ ಯಂತ್ರಾಗಾರವು ಒದಗಿಸುತ್ತಿತ್ತು ಹಾಗೂ ಸರ್ಕಾರಿ ಇಲಾಖೆಗಳಾದ ಲೋಕೋಪಯೋಗಿ ಇಲಾಖೆ, ಭಾರತೀಯ ರೈಲ್ವೆ, ಭಾರತೀಯ ವಿಮಾನ ಕಾರ್ಖಾನೆ, ದೂರವಾಣಿ ಕಾರ್ಖಾನೆ, ಮೊದಲಾದ ಕಾರ್ಖಾನೆ / ಇಲಾಖೆಗಳಿಗೆ ಕತ್ತರಿಸಿದ ಮರದ ಹಲಗೆಗಳನ್ನು ಸರಬರಾಜು ಮಾಡಲಾಗುತ್ತಿತ್ತು.

1954–55ರಲ್ಲಿ ಇಲ್ಲಿ ಕೊಯ್ದ ಮರದ ಮೌಲ್ಯ ಸುಮಾರು ರೂ. 35,900 ; 1961–62–ರೂ. 1,28,387 ; ಹಾಗೂ 1962-63-ರೂ. 2,46,857.

1955ರಲ್ಲಿ ಮರ್ಕರ್‌ನಲ್ಲಿ ಗೃಹೋಪಯೋಗಿ ವಸ್ತುಗಳನ್ನು ಮಾಡುವ ಒಂದು ಘಟಕವನ್ನು ಸ್ಥಾಪಿಸಲಾಯಿತು. ಈ ಘಟಕದಲ್ಲಿ ಮಾನವ ಶಕ್ತಿಯ ಉಪಯೋಗವನ್ನು ಕಡಿಮೆ ಮಾಡುವ ಅನೇಕ ಯಂತ್ರಾಗಾರಗಳನ್ನು ಸ್ಥಾಪಿಸಿದ್ದರಿಂದ ಮರದ ಸಣ್ಣ ಸಣ್ಣ ತುಂಡುಗಳನ್ನು ಲಾಭದಾಯಕವಾಗಿ ಉಪಯೋಗಿಸಲು ಸಾಧ್ಯವಾಯಿತು. ಶಾಲೆಗಳಿಂದಲೂ ಸರ್ಕಾರಿ ಕಛೇರಿಗಳಿಂದಲೂ, ಹೆಚ್ಚಿನ ಬೇಡಿಕೆಗಳು ಬಂದವು. ಕುರ್ಚಿ, ಮೇಜು, ಬೆಂಚು, ಕಪಾಟು, ನಕ್ಷೆಗಳನ್ನಿಡುವ ನಿಲುವು ಸ್ಟೂಲುಗಳು, ಜೇನು ಪೆಟ್ಟಿಗೆಗಳು ಮೊದಲಾದುವುಗಳಿಗೆ ಹೆಚ್ಚಿನ ಬೇಡಿಕೆಗಳು ಬಂದವು. 1959ರಲ್ಲಿ ಸುಮಾರು 1.26 ಲಕ್ಷ ರೂ. ವೆಚ್ಚದಲ್ಲಿ ಮರ ಹಸನು ಮಾಡುವ ಘಟಕವನ್ನು ಸ್ಥಾಪಿಸಲಾಯಿತು.

### ಅಕ್ಕಿ ಗಿರಣಿಗಳು

ಈ ಜಿಲ್ಲೆಯು ಹಿಂದಿನಿಂದಲೂ ಬತ್ತ ಬೆಳೆಯುವ ಪ್ರದೇಶವಾಗಿತ್ತು. 1962–63 ರಲ್ಲಿ ಸುಮಾರು 1,12,541 ಎಕರೆ ಪ್ರದೇಶದಲ್ಲಿ ಬತ್ತದ ಬೆಳೆಯಾಗಿತ್ತು ಮತ್ತು ಪಡೆದ ಅಕ್ಕಿಯ ಪರಿಮಾಣ 40,000 ಟನ್‌ಗಳಾಗಿತ್ತು. 1988–89 ರಲ್ಲಿ 44,298 ಹೆಕ್ಟೇರ್ ಪ್ರದೇಶದಲ್ಲಿ ಬತ್ತ ಬೆಳೆಯಲಾಗಿದ್ದು, ಉತ್ಪನ್ನ 73,489 ಟನ್‌ಗಳಷ್ಟಾಗಿತ್ತು. ಈ ಕಾರಣದಿಂದ ಈ ಜಿಲ್ಲೆಯಲ್ಲಿ ಅಕ್ಕಿಗಿರಣಿಗಳು ಗಮನೀಯವಾಗಿ ವೃದ್ಧಿಸಿವೆ ಎಂದು ಹೇಳಬಹುದು. 1956 ರಲ್ಲಿ 13 ಸಣ್ಣ ಪ್ರಮಾಣದ ಗಿರಣಿಗಳು, 6 ದೊಡ್ಡ ಪ್ರಮಾಣದ (ಹಲ್ಲರ್) ಗಿರಣಿಗಳೂ ಇದ್ದವು. 1964 ರ ಹೊತ್ತಿಗೆ, ಒಟ್ಟು 71 ಗಿರಣಿಗಳು ಆದವು. ಈ ಗಿರಣಿಗಳ ಸಂಖ್ಯೆ ತಾಲೂಕುವಾರು ಹೀಗಿದೆ : ಮಡಿಕೇರಿ – ಶೆಲ್ಲರ್ 3, ಹಲ್ಲರ್ 3, ಶೆಲ್ಲರ್ ಹಾಗೂ ಹಲ್ಲರ್ 6, ಒಟ್ಟು 12 ; ಸೋಮವಾರಪೇಟೆ : ಶೆಲ್ಲರ್ 6, ಹಲ್ಲರ್ 15, ಶೆಲ್ಲರ್ ಹಾಗೂ ಹಲ್ಲರ್ 4, ಒಟ್ಟು 25; ವೀರರಾಜಪೇಟೆ : ಶೆಲ್ಲರ್ 7, ಹಲ್ಲರ್ 24, ಶೆಲ್ಲರ್ ಹಾಗೂ ಹಲ್ಲರ್ 3, ಒಟ್ಟು 34. ಇವು ಹೆಚ್ಚಾಗಿ, ಗೋಣಿಕೊಪ್ಪಲು, ಪೊನ್ನಂಪೇಟೆ, ವೀರರಾಜಪೇಟೆ, ಮಡಿಕೇರಿ, ಅಮ್ಮತ್ತಿ ಮತ್ತು ಕಾತೂರುಗಳಲ್ಲಿದ್ದವು. 1964 ರಲ್ಲಿ ಈ ಎಲ್ಲಾ ಗಿರಣಿಗಳ ಉತ್ಪಾದನಾ ಬಂಡವಾಳದ ಮೊತ್ತ ಸುಮಾರು 20 ಲಕ್ಷ ರೂ.ಗಳಾಗಿದ್ದವು. ಇದರಲ್ಲಿ, ಗಿರಣಿಗೆ ಬೇಕಾದ, ಭೂಮಿ, ಯಂತ್ರಗಳು, ತೈಲ, ವಿದ್ಯುತ್ ಉತ್ಪಾದನ ಯಂತ್ರ, ಹಬೆಯ ವಿದ್ಯುತ್ ಉತ್ಪಾದನ ಯಂತ್ರಗಳೂ ಸೇರಿದ್ದವು. ಈ ಗಿರಣಿಗಳಲ್ಲಿ ನೌಕರಿಯಲ್ಲಿದ್ದವರ ಸಂಖ್ಯೆ ಸುಮಾರು 300–400 ಇದ್ದು, ಕಟಾವಿನ ಸಮಯದಲ್ಲಿ 600 ರ ವರೆಗೂ ಇದ್ದಿತು. ಈ ಗಿರಣಿಗಳಲ್ಲಿ ಮಾಲೀಕರು ತಮ್ಮ ಮತ್ತು ಬೇರೆಯವರ ಬತ್ತವನ್ನು ಸಂಸ್ಕರಿಸುತ್ತಿದ್ದರು. ಆ ಸಾಲಿನಲ್ಲಿ 80,000 ಟನ್ ಬತ್ತವನ್ನು ಗಿರಣಿಗೆ ಹಾಕಿ 40,000 ಟನ್‌ನಷ್ಟು ಅಕ್ಕಿಯನ್ನು ಉತ್ಪಾದಿಸಿದ್ದರು. ಕುಸುಬಲಕ್ಕಿಯನ್ನು ಕೆಲವು ಗಿರಣಿಗಳಲ್ಲಿ ಉತ್ಪಾದಿರುತ್ತಿದ್ದರು. ಕುಸುಬಲಕ್ಕಿಗೆ ಮಲಬಾರ್ ಪ್ರದೇಶದಲ್ಲಿ ಹೆಚ್ಚಿನ ಬೇಡಿಕೆ ಇತ್ತು. ಅಗಿನ ಭಾರತ ಸರ್ಕಾರವು ಕೊಟ್ಟಣದ ಅಕ್ಕಿಗೆ ಹೆಚ್ಚಿನ ಮಹತ್ವ ಕೊಡಬೇಕೆಂದೂ ಆದೇಶ ನೀಡಿದ್ದಿತು. ಈ ಸಂಬಂಧ ನಿಯಮಿಸಿದ ಕರ್ವೇ ಸಮಿತಿಯು, ಸಣ್ಣ ಕೈಗಾರಿಕೆಗಳನ್ನು ವೃದ್ಧಿಸಲೋಸುಗ, ಗಿರಣಿ ಅಕ್ಕಿಯ ಮೇಲೆ ಮೇಲೆ, ಹೆಚ್ಚಿನ ಅಬಕಾರಿ ಸುಂಕವನ್ನು ಹಾಕಲು ಸೂಚಿಸಿತು. ಈ ಸೂಚನೆಗಳನ್ನು ಸರ್ಕಾರ ಒಪ್ಪಿದ್ದರೂ ಕೂಡ, ಈ ಜಿಲ್ಲೆಯಲ್ಲಿ ಅಕ್ಕಿ ಗಿರಣಿ ಉದ್ಯಮವು ವೃದ್ಧಿಯಾಗಿದ್ದು ಗಮನಾರ್ಹ.

ಆಗಿನ ಭಾರತ ಸರ್ಕಾರದ ನೀತಿಯಂತೆ ಆಗಿನ ಕೊಡಗು ಸರ್ಕಾರವು, ಏಕೀಕರಣಕ್ಕೆ ಪೂರ್ವದಲ್ಲಿ, ಕೊಟ್ಟಣದ ಅಕ್ಕಿ

ಯನ್ನು ವೃದ್ಧಿಪಡಿಸಲು ಕಾರ್ಯಕ್ರಮವನ್ನು ನಿಯೋಜಿಸಿತು. ಎರಡನೇಯ ಪಂಚವಾರ್ಷಿಕ ಯೋಜನೆಯಲ್ಲಿ ಸುಮಾರು 25,000 ರೂ.ಗಳನ್ನು, 3ನೇಯ ಪಂಚವಾರ್ಷಿಕ ಯೋಜನೆಯಲ್ಲಿ ರೂ. 4.10 ಲಕ್ಷಗಳನ್ನು, ಸಣ್ಣ ಪ್ರಮಾಣ ಕೈಗಾರಿಕೆಗಾಗಿ (ಕೊಟ್ಟಣದ ಅಕ್ಕಿಗಾಗಿ) ಇಡಲಾಗಿತ್ತು. ಆದರೆ ಜಿಲ್ಲೆಯಲ್ಲಿ ಈಗ ಬತ್ತದ ಸಂಸ್ಕರಣ ಘಟಕಗಳು ಎಷ್ಟಿವೆಯೆಂಬ ಸ್ಪಷ್ಟ ವಿವರಣೆ ತಿಳಿಯುತ್ತಿಲ್ಲ.

ಈ ಜಿಲ್ಲೆಯಲ್ಲಿ ಭಾರಿ ಕೈಗಾರಿಕೆಗಳು ಇಲ್ಲ. ಮಧ್ಯಮ ಕೈಗಾರಿಕೆಗಳು ಎರಡು ಮಾತ್ರ ಇವೆ. 1) ಕುಶಾಲನಗರ ವರ್ಕ್ಸ್ (11) ಕೊಡಿಗೆ–ಸೋಮವಾರಪೇಟೆ ತಾಲೂಕು 2) ಕೊಡಗು ಕಾಫಿ ಬೆಳೆಗಾರರ ಸಹಕಾರ ಸಂಘ ಹೆಬ್ಬಾಲೆ–ಸೋಮವಾರಪೇಟೆ ತಾಲೂಕು. ಸರ್ಕಾರದಿಂದ ಒಂದು ಘಟಕಕ್ಕೆ ಮಾತ್ರ ರೂ. 1.30 ಲಕ್ಷ ಬಂಡವಾಳ ಮತ್ತು ದೀರ್ಘಾವಧಿ ಸಾಲವಾಗಿ ಕೊಟ್ಟಿದೆ. 31-3-90ರ ಹೊತ್ತಿಗೆ, 607 ಲಕ್ಷ ರೂ.ಗಳ ಬಂಡವಾಳ ಹೂಡಿಕೆಯನ್ನು, 1,171 ಸಣ್ಣಪ್ರಮಾಣದ ಕೈಗಾರಿಕಾ ಘಟಕಗಳಲ್ಲಿ ತೊಡಗಿಸಿ 5,080 ಜನರಿಗೆ ಉದ್ಯೋಗ ನೀಡಿ 970 ಲಕ್ಷ ರೂ. ಬೆಲೆಯಷ್ಟು ಉತ್ಪಾದನೆ ಮಾಡಲಾಗಿದೆ.

ಕೊಡಗು ಜಿಲ್ಲೆಯಲ್ಲಿ 1982–83ರಲ್ಲಿ ಇದ್ದ ಹಾಗೂ ಮುಂದೆ 1989–90ರವರೆಗೆ, ಪ್ರತೀವರ್ಷ ಪ್ರಾರಂಭಿಸಲಾದ ಸಣ್ಣ ಕೈಗಾರಿಕಾ ಘಟಕಗಳ ವಿವರ ಹೀಗಿದೆ :

| ವರ್ಷ | ಕೈಗಾರಿಕಾ ಘಟಕಗಳು | ಬಂಡವಾಳ (ಲಕ್ಷ ರೂ.) | ಉದ್ಯೋಗ |
|---|---|---|---|
| 1982–83ರಲ್ಲಿ ಇದ್ದಂತೆ | 417 | 191 | 207 |
| 83–84 | 82 | 28.19 | 310 |
| 84–85 | 130 | 27.20 | 529 |
| 85–86 | 117 | 42.54 | 438 |
| 86–87 | 115 | 48.89 | 508 |
| 87–88 | 103 | 42.20 | 252 |
| 88–89 | 102 | 48.95 | 361 |
| 89–90 | 100 | 35.38 | 376 |
| ಮೊತ್ತ | 1,166 | 464.32 | 4,981 |

### ಸ್ವಯಂ ಉದ್ಯೋಗ ಕಾರ್ಯಕ್ರಮ

ಇದು ಕೇಂದ್ರ ಸರ್ಕಾರದ ಯೋಜನೆಯಾಗಿದ್ದು ರಾಜ್ಯ ಸರ್ಕಾರ ಮತ್ತು ಜಿಲ್ಲಾ ಕೈಗಾರಿಕಾ ಕೇಂದ್ರಗಳು ಮೇಲ್ವಿಚಾರಣೆ ನಡೆಸುವ ಪ್ರತಿನಿಧಿಗಳಾಗಿವೆ. "ಟಾಸ್ಕ್ ಫೋರ್ಸ್ ಕಮಿಟಿ" ಎಂಬ ಒಂದು ಸಮಿತಿಯನ್ನು ರಚಿಸಲಾಗಿದ್ದು ಇದಕ್ಕೆ ಜಿಲ್ಲಾ ಕೈಗಾರಿಕಾ ಕೇಂದ್ರದ ಜನರಲ್ ಮ್ಯಾನೇಜರ್‌ರವರು ಅಧ್ಯಕ್ಷರಾಗಿರುತ್ತಾರೆ. ಜಿಲ್ಲಾ ಕೈಗಾರಿಕಾ ಕೇಂದ್ರ, ಫಂಕ್ಷನಲ್ ಮ್ಯಾನೇಜರ್, ಕೇಂದ್ರ ಸರ್ಕಾರದ ಸಣ್ಣ ಕೈಗಾರಿಕಾ ಸೇವಾ ಕೇಂದ್ರ, ಬೆಂಗಳೂರು ಇವರ ಪ್ರತಿನಿಧಿ, ಉದ್ಯೋಗ ವಿನಿಮಯ ಕಛೇರಿ ಅಧಿಕಾರಿ, ವಿಜಯ ಬ್ಯಾಂಕಿನ ಅಧಿಕಾರಿ, ಮಡಿಕೇರಿ ಕೆನರಾ ಬ್ಯಾಂಕಿನ ಶಾಖಾಧಿಕಾರಿ ಮೊದಲಾದವರು ಸದಸ್ಯರಾಗಿರುತ್ತಾರೆ. ಫಲಾನುಭವಿಗಳನ್ನು ಆಯ್ಕೆ ಮಾಡುವಾಗ ಕೆಳಕಂಡ ವಿವರಗಳನ್ನು ಗಮನಿಸಲಾಗುತ್ತದೆ: ವಯಸ್ಸು 18 ರಿಂದ 35ರೊಳಗಿರಬೇಕು. ಹತ್ತನೆ ಇಯತ್ತೆಯಲ್ಲಿ ಉತ್ತೀರ್ಣರಾಗಿರಬೇಕು. ಕುಟುಂಬದ ಆದಾಯ ರೂ. 10,000 ಕಡಿಮೆ ಇರಬೇಕು. ಫಲಾನುಭವಿಗಳಲ್ಲಿ ಶೇ. 30 ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದವರಾಗಿರಬೇಕೆಂಬ ನಿಯಮವಿದೆ. ಈ ಯೋಜನೆಯಲ್ಲಿ ಮೂರು ವಿಧವಾದ ಸೌಲಭ್ಯವಿದೆ. 1) ಕೈಗಾರಿಕೆಗಾಗಿ 2) ಸೇವೆಗಳಿಗಾಗಿ 3) ವ್ಯಾಪಾರಕ್ಕಾಗಿ; ಇವುಗಳಿಗೆ ಕ್ರಮವಾಗಿ ರೂ. 35,000, ರೂ. 25,000, ಮತ್ತು ರೂ. 15,000 ಗಳನ್ನು ಕೊಡಲಾಗುವುದು.

ಕೊಡಗು ಜಿಲ್ಲೆಯಲ್ಲಿ 1983-84 ರಿಂದ 1989-90ರವರೆಗೆ ಸ್ವಯಂ ಉದ್ಯೋಗ ಕಾರ್ಯಕ್ರಮದಲ್ಲಿನ ಪ್ರಗತಿಯ ವಿವರ ಹೀಗಿದೆ :

| ವರ್ಷ | ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗಗಳವರು | ಸ್ತ್ರೀಯರು | ಇತರರು | ಮೊತ್ತ | ವಿತರಿಸಿದ ಸಾಲ (ಲಕ್ಷ ರೂ.ಗಳಲ್ಲಿ) |
|---|---|---|---|---|---|
| 1983-84 | — | 32 | 146 | 178 | 53.84 |
| 84-85 | — | 44 | 203 | 247 | 53.49 |
| 85-86 | 2 | 47 | 199 | 248 | 35.12 |
| 86-87 | 2 | 42 | 148 | 192 | 23.97 |
| 87-88 | 3 | 18 | 99 | 120 | 25.67 |
| 88-89 | 1 | 15 | 130 | 146 | 30.05 |
| 89-90 | 1 | 12 | 81 | 94 | 16.01 |
| ಮೊತ್ತ | 9 | 210 | 1,006 | 1,225 | 238.15 |

ಕೊಡಿಗೆ ಡೈರಿಯು ರಾಜ್ಯದಲ್ಲೇ ಪ್ರಥಮ ಹಾಲು ಸಂಸ್ಕರಣಾ ಘಟಕವಾಗಿದ್ದು, ರೈತರಿಗೆ ಉಪವರಮಾನ ಸೌಲಭ್ಯ ಒದಗಿಸಲು ಮತ್ತು ಮಡಿಕೇರಿ, ವೀರರಾಜಪೇಟೆ, ಸೋಮವಾರ ಪೇಟೆ, ಶನಿವಾರಸಂತೆ, ಕೊಡ್ಲಿಪೇಟೆ, ಪೊನ್ನಂಪೇಟೆ, ಗೋಣಿಕೊಪ್ಪಲು, ಕುಶಾಲನಗರ ಮೊದಲಾದ ಸ್ಥಳಗಳ ನಾಗರಿಕರಿಗೆ ಹಾಲಿನ ಸರಬರಾಜು ವ್ಯವಸ್ಥೆ ಮಾಡಲು 1956ರಲ್ಲಿ ಪ್ರಾರಂಭವಾಯಿತು. 1975ರಲ್ಲಿ ಈ ಘಟಕವನ್ನು ಕರ್ನಾಟಕ ಹೈನುಗಾರಿಕಾ ಅಭಿವೃದ್ಧಿ ನಿಗಮದ ಅಧೀನಕ್ಕೆ ಒಳಪಡಿಸಲಾಗಿತ್ತು. ನಂತರ 1984ರಲ್ಲಿ ಕರ್ನಾಟಕ ಹಾಲು ಉತ್ಪಾದಕರ ಮಹಾಮಂಡಳಿಯ ಆಡಳಿತದಲ್ಲಿ ವಿಲೀನಗೊಂಡಿದ್ದು, 1987ರಲ್ಲಿ ಹಾಸನ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟಕ್ಕೆ ಒಪ್ಪಿಸಲಾಯಿತು. 1975-76 ರಲ್ಲಿ 6.08 ಲಕ್ಷ ಲೀಟರ್ ಹಾಲು, ವಾರ್ಷಿಕ ಸಂಗ್ರಹವಾಗಿದ್ದು 1989-90ರಲ್ಲಿ 32.06 ಲಕ್ಷ ಲೀಟರ್‌ಗಳಿಗೆ ಸಂಗ್ರಹಣೆಯನ್ನು ವಿಸ್ತರಿಸಿದೆ. 15 ವರ್ಷಗಳಲ್ಲಿ ಶೇ. 527ರಷ್ಟು ಹೆಚ್ಚಳವಾಗಿದೆ. 1989-90ರಲ್ಲಿ ಒಟ್ಟು ವಹಿವಾಟು ಈ ರೀತಿ ಇದೆ. ಸರಾಸರಿ ತಿಂಗಳಿಗೆ ರೂ. 5.68 ಕೋಟಿ. ಈ ಡೇರಿಯಲ್ಲಿ ಹಾಲು, ತುಪ್ಪ, ಪೇಡಾ, ಜಿಡ್ಡು ಇರುವ ಹಾಲು ಪುಡಿ, ಜಿಡ್ಡಿಲ್ಲದ ಹಾಲುಪುಡಿ, ಸುವಾಸಿತ ಹಾಲು, ಮೊಸರು, ಚಾಕೋಲೇಟ್ ಹಾಲು, ಘನೀಕರಿಸಿದ ಹಾಲು ಮೊದಲಾದವುಗಳನ್ನು ಉತ್ಪಾದಿಸುತ್ತಾರೆ. (ಹೆಚ್ಚಿನ ವಿವರಗಳನ್ನು ಅಧ್ಯಾಯ 4ರಲ್ಲಿ ಕೊಡಲಾಗಿದೆ).

## ಜೇನು ಉತ್ಪಾದನೆ

ಜೇನುತುಪ್ಪವು ಒಂದು ಉತ್ತಮವಾದ, ಪೌಷ್ಟಿಕಾಂಶವುಳ್ಳ ಪದಾರ್ಥವಾಗಿದ್ದು, ಈ ಜಿಲ್ಲೆಯಲ್ಲಿ ಇದರ ಸಂಗ್ರಹಣೆ ಅನಾದಿ ಕಾಲದಿಂದಲೂ ಪ್ರಚಲಿತವಾಗಿದೆ. ಕ್ರಮಬದ್ಧವಾದ ಜೇನು ಸಾಕಣೆ ಕೇರಳ, ಕರ್ನಾಟಕ, ತಮಿಳುನಾಡು, ಮಹಾರಾಷ್ಟ್ರ, ಮಧ್ಯಪ್ರದೇಶ, ಉತ್ತರ ಪ್ರದೇಶ, ಕಾಶ್ಮೀರ ಹಾಗೂ ಪಶ್ಚಿಮಬಂಗಾಳ ರಾಜ್ಯಗಳಲ್ಲಿ ಕಂಡುಬರುತ್ತದೆ. ಕೊಡಗು ಜಿಲ್ಲೆಯ ಸಮೃದ್ಧವಾದ ನಿಸರ್ಗದ ಕೊಡುಗೆ ಜೇನುಕೃಷಿ (ಕೈಗಾರಿಕೆ)ಯನ್ನು ಒಂದು ಮುಖ್ಯವಾದ ಗುಡಿ ಕೈಗಾರಿಕೆಯನ್ನಾಗಿಸಿದೆ. ಅನೇಕ ರೈತರು ಇದನ್ನು ಹೈನುಗಾರಿಕೆಯಂತೆ ಆಂಶಿಕ ಉದ್ಯೋಗವಾಗಿ ಹೊಂದಿದ್ದಾರೆ. ಜೇನು ಸಾಕಣೆಗೆ ಬೇಕಾದ ವಿವಿಧ ರೀತಿಯ ಪುಷ್ಪ ಹಾಗೂ ಸಸ್ಯ ಸಂಪತ್ತು ಈ ಜಿಲ್ಲೆಯಲ್ಲಿದೆ (ಪ್ರತ್ಯೇಕ ಪಟ್ಟಿ ನೋಡಿ). ಇಲ್ಲಿ ಎಲ್ಲ ವಿಧದ ಜೇನು ಹುಳುಗಳ ಪ್ರಭೇದಗಳು ಇದ್ದು, 'ಅಪಿಸ್ ಇಂಡಿಕಾ' ಎಂಬ ಜೇನು ಹುಳುಗಳು ಮನೆಯಲ್ಲಿ ಸಾಕುವ ಸನ್ನಿವೇಶಕ್ಕೆ ಹೊಂದಿಕೊಳ್ಳುವ ವಿಧದ್ದಾಗಿವೆ. ಹಿಂದಿನ ಕಾಲದಲ್ಲಿ ಮಣ್ಣಿನ ಮಡಿಕೆಗಳು ಹಾಗೂ ಮರದ ಪೊಟರೆಗಳು ಜೇನು ಹುಳುಗಳು ಗೂಡು ಇಡುವ ಸ್ಥಾನಗಳಾಗಿದ್ದವು. ಆದರೆ ಈ ವಿಧಾನದಲ್ಲಿ ಹಲವಾರು ತೊಂದರೆಗಳು ಇದ್ದವು. ಉದಾಹರಣೆಗೆ ಜೇನು ಹುಟ್ಟಿನಿಂದ ತುಪ್ಪವನ್ನು ತೆಗೆದಾಗ, ರಾಣಿ ನೊಣ ಹಾಗೂ ಇತರ ಬಹಳ ಸಂಖ್ಯೆ ನೊಣಗಳು ಸಾಯುತ್ತಿದ್ದವು. ಇತ್ತೀಚಿನ ಆಧುನಿಕ ವಿಧಾನದಿಂದ, ಜೇನುನೊಣಗಳಿಗಾಗಲೀ ಹುಟ್ಟಿಗಾಗಲೀ ಯಾವ ಬಾಧಕವೂ ಇರುವುದಿಲ್ಲ ಮತ್ತು ಪಡೆದ ತುಪ್ಪವು ಶುದ್ಧವಾಗಿರುವುದು. ಜಿಲ್ಲೆಯಲ್ಲಿ 1990-91ರಲ್ಲಿ 3.62 ಲಕ್ಷ ಕೆ.ಜಿ. ಜೇನು ಉತ್ಪಾದನೆ ಆಗಿದೆ.

ಈ ಜಿಲ್ಲೆಯಲ್ಲಿ ಜೇನು ಕೃಷಿ ಹೆಚ್ಚು ಅಭಿವೃದ್ಧಿಯಾಗಲು ಕಾರಣವೇನೆಂದರೆ, ಇಲ್ಲಿ ಸಮೃದ್ಧ ವನಸಿರಿ, ವರ್ಷದ ಎಲ್ಲಾ ಕಾಲದಲ್ಲಿಯೂ ಇರುತ್ತದೆ. ಸರ್ಕಾರವು 1962ರಲ್ಲಿ, ಜೇನನ್ನು ಹೆಚ್ಚಾಗಿ ಕೊಡುವ ಸಸ್ಯಗಳನ್ನು ಗುರುತಿಸಲು

ಕೊಡಗು ಜಿಲ್ಲೆಯಲ್ಲಿ ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿಯಿಂದ ಸಂಘ ಸಂಸ್ಥೆಗಳಿಗೆ ಹಾಗೂ ವೈಯಕ್ತಿಕ ಕಸಬುದಾರರಿಗೆ
**31.3.90** ರ ವರೆಗೆ ನೀಡಿರುವ ಆರ್ಥಿಕ ನೆರವಿನ ವಿವರ.

| ಕ್ರ. ಸಂ. | ಕೈಗಾರಿಕೆ | ಹಣ ಮಂಜೂರಾದ ವರ್ಷ | ಘಟಕಗಳು | | | ಮೊಬಲಗು | | |
|---|---|---|---|---|---|---|---|---|
| | | | ಸ. ಸಂಘ | ಸಂಸ್ಥೆ | ವೈಯಕ್ತಿಕ | ಸಾಲ | ಸಹಾಯ ಧನ (ರೂ) | ಒಟ್ಟು (ರೂ) |
| 1. | ಜೇನುಕೃಷಿ | 1961–1990 | 2 | — | 361 | 32,11,200 | 13,36,375 | 45,47,575 |
| 2. | ಗ್ರಾಮೋದ್ಯೋಗ ಮಳಿಗೆ | 1987–1989 | 2 | — | — | 50,000 | 5,000 | 55,000 |
| 3. | ಬಡಗಿ ಮತ್ತು ಕಮ್ಮಾರಿಕೆ | 1982–1990 | 1 | — | — | 50,000 | 5,000 | 55,000 |
| 4. | ಸಾಬೂನು | 1959–1966 | 2 | 3 | 20 | 7,63,650 | 74,460 | 8,38,110 |
| 5. | ಚರ್ಮೋದ್ಯೋಗ | 1980–1982 | 2 | — | — | 1,60,250 | 9,150 | 1,69,400 |
| 6. | ಗ್ರಾಮೀಣ ಕುಂಬಾರಿಕೆ | 1972–1990 | 4 | — | 31 | 1,96,445 | 77,245 | 2,73,690 |
| 7. | ಪಿ.ಸಿ.ಪಿ.ಇ. | 1960–1990 | 3 | — | 29 | 1,85,000 | 10,360 | 1,95,360 |
| 8. | ಸುಣ್ಣ ಉತ್ಪಾದನೆ | 1987–1988 | — | — | 1 | 46,000 | 1,000 | 47,000 |
| 9. | ಅಗರಬತ್ತಿ | 1988–1989 | — | — | 1 | 7,640 | 360 | 8,000 |
| 10. | ಬೆತ್ತ - ಬಿದಿರು ಕೆಲಸ | 1988–1990 | 1 | — | 6 | 39,375 | 6,135 | 45,510 |
| 11. | ಟೈಲರಿಂಗ್ | 1988–1990 | — | — | 4 | 35,600 | — | 35,600 |
| 12. | ಸೇವಾ ಘಟಕ | 1988–1990 | — | — | 11 | 91,275 | — | 91,275 |
| | | ಒಟ್ಟು | 17 | 3 | 464 | 48,36,435 | 15,25,085 | 63,61,250 |

ಆಧಾರ : ಜಿಲ್ಲಾ ಕೈಗಾರಿಕಾ ಕೇಂದ್ರ, ಮಡಿಕೇರಿ.

ಒಂದು ವ್ಯವಸ್ಥಿತ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು. ಮಡಿಕೇರಿ ಸರ್ಕಾರಿ ಕಾಲೇಜಿನ ಸಸ್ಯಶಾಸ್ತ್ರ ವಿಭಾಗವು, ಕೃಷಿ ಇಲಾಖೆಯ ಸಹಯೋಗದೊಂದಿಗೆ, ಈ ಕಾರ್ಯದಲ್ಲಿ ಸಕ್ರಿಯ ವಾಗಿ ಭಾಗಿಯಾಗಿತ್ತು. ಸಹಕಾರ ರಂಗವೂ ಈ ಕ್ಷೇತ್ರದಲ್ಲಿ ಕಾರ್ಯಗತವಾಗಿದೆ. ಖಾದಿ ಗ್ರಾಮೋದ್ಯೋಗ ಮಂಡಳಿಯು ಈ ಉದ್ಯಮಕ್ಕೆ ನೀಡಿದ ನೆರವಿನ ವಿಚಾರ ಪ್ರತ್ಯೇಕ ಕೋಷ್ಟಕ (ಪುಟ 322ರಲ್ಲಿ) ಇದೆ.

ಜೇನು ಕೊಡುವ ನೊಣಗಳ ವಿವರಗಳು ಈ ರೀತಿ ಇವೆ. 1) ಅಪಿಸ್ ಇಂಡಿಕಾ – ಸಾಮಾನ್ಯವಾಗಿ ಸಿಗುವ ಡಬ್ಬ ಅಥವಾ ಗಡಿಗೆಗಳಲ್ಲಿ ಕೃಷಿ ಮಾಡುವ ಜೇನ್ನೊಣ 2) ಅಪಿಸ್ ಡೊರ್ಸ್ಸಾಟಾ ಮತ್ತು 3) ಅಪಿಸ್ ಫ್ಲೋರಿಯಾ–ಪೊದೆಗಳಲ್ಲಿ ದೊರೆಯುವಂತವು. ಈ ಜೇನು ಕೃಷಿಯು ಅಮೆರಿಕಾ, ರಷ್ಯಾ, ಆಸ್ಟ್ರೇಲಿಯಾ, ಮತ್ತು ಯುರೋಪ್ ದೇಶಗಳಲ್ಲಿ ಒಂದು ಪೂರ್ಣ ಪ್ರಮಾಣದ ಉದ್ಯೋಗವಾಗಿದೆ. ನಮ್ಮ ರಾಜ್ಯದ ಮಲೆನಾಡು ಮತ್ತು ಕೊಡಗು ಜಿಲ್ಲೆಗಳಲ್ಲಿ ಇತ್ತೀಚಿನ ವರ್ಷಗಳಲ್ಲಿ, ಪ್ರಮುಖ ಉದ್ಯೋಗವಾಗುತ್ತಿದೆ. ಜೇನು ಕೃಷಿಯು ಒಂದು ಗೃಹೋದ್ಯಮವಾಗಿದ್ದು, ಯಾರಾದರೂ ಮಾಡಬಹುದಾಗಿದೆ. ಈ ಉದ್ಯಮವು ಹೆಚ್ಚಿನ ಶ್ರಮವಿಲ್ಲದ, ಹೆಚ್ಚು ಸ್ಥಳ ಬೇಕಾಗದ, ಕಡಿಮೆ ಬಂಡವಾಳದ, ಸರ್ಕಾರದ ಅನುದಾನ ದೊರೆಯುವ ಒಂದು ಉದ್ಯಮ. ಈ ಉದ್ಯಮಕ್ಕೆ ಬೇಕಾದ ಸಾಧನಗಳೆಂದರೆ, ಒಂದು ಜೇನು ತೆಗೆಯುವ ಉಪಕರಣ ಮತ್ತು ಕೆಲವು ಇತರೆ ಉಪಕರಣಗಳು. ಜೇನು ತೆಗೆಯುವ ಉಪಕರಣವನ್ನು 8–10 ಜನರು ಸೇರಿ ಹೊಂದಿರಬಹುದು ಅಥವಾ ಸಹಕಾರ ಸಂಘಗಳ ಮೂಲಕವೂ ಹೊಂದಿರಬಹುದು. ಈ ಉದ್ಯಮವನ್ನು ಕಲಿಯಲು ಹೆಚ್ಚು ಪರಿಶ್ರಮಬೇಡ. ಜೇನು ಹುಳುಗಳು ಜೇನನ್ನು ಚಳಿಗಾಲಕ್ಕಾಗಿ ಶೇಖರಿಸಿಡುತ್ತವೆ. ಚಳಿಗಾಲದಲ್ಲಿ ಹೆಚ್ಚು ಗಿಡಗಳು ಹೂ ಬಿಡುವುದಿಲ್ಲ. ಅಕ್ಟೋಬರ್‌ನಿಂದ ಜೂನ್‌ವರೆಗೆ, ಜೇನು ಹುಳುಗಳು ಜೇನನ್ನು ಶೇಖರಿಸುತ್ತಲೇ ಇರುತ್ತವೆ. ಒಮ್ಮೆ ಗೂಡಿನಲ್ಲಿ ಜೇನು ಖಾಲಿಯಾದರೆ ಪುನಃ ಶೇಖರಿಸುತ್ತವೆ. ಈ ಕೃಷಿಯಿಂದ, ಬಂಡವಾಳ ಸ್ವಲ್ಪವಾದರೂ ಲಾಭಾಂಶ ಹೆಚ್ಚಿದೆ. ಅನುಕೂಲ ಪರಿಸ್ಥಿತಿಯಲ್ಲಿ ಒಂದು ಗೂಡಿನಿಂದ, ವಾರ್ಷಿಕ ಸುಮಾರು 40–45 ಕೆ.ಜಿ. ಜೇನನ್ನು ಪಡೆಯಬಹುದು. (ಪ್ರಸಕ್ತ ಒಂದು ಕೆ.ಜಿ. ಜೇನಿಗೆ ರೂ. 30 ರಿಂದ 40 ಬೆಲೆ ಇದೆ). 1930 ರಲ್ಲಿ ಈ ಜಿಲ್ಲೆಯಲ್ಲಿ ನವೀನ ಮಾದರಿಯ ಜೇನು ಕೃಷಿಯನ್ನು ಬಳಕೆಗೆ ತರಲಾಯಿತು. ಕೊಡಗು ಸರ್ಕಾರವು 1936 ರಿಂದ, ಜೇನುಕೃಷಿಯಲ್ಲಿ ಆಸಕ್ತಿಯನ್ನು ತೋರಿಸಲು ಪ್ರಾರಂಭಿಸಿತು. 1936 ರಲ್ಲಿ ವೀರರಾಜಪೇಟೆಯಲ್ಲಿ ಉದ್ಯಮವನ್ನು ವೃದ್ಧಿಪಡಿಸಲೋಸುಗ, ದಿ ಕೂರ್ಗ್ ಹನೀ ಅಂಡ್ ವ್ಯಾಕ್ಸ್ ಪ್ರೊಡ್ಯೂಸರ್ಸ್ ಕೋ-ಅಪರೇಟಿವ್ ಸೊಸೈಟಿ ಲಿ., ಎಂಬ ಸಂಸ್ಥೆಯನ್ನು ಸ್ಥಾಪಿಸಲಾಯಿತು. 1948ರಲ್ಲಿ, ಮಹಾಯುದ್ಧೋತ್ತರ ಪುನರುಜ್ಜೀವನ ಕಾರ್ಯಕ್ರಮದಡಿಯಲ್ಲಿ, "ಕೇಂದ್ರ ಜೇನುಕೃಷಿ ಕಾರ್ಯಕ್ರಮ" ಎಂಬ ಯೋಜನೆಯನ್ನು ಭಾಗಮಂಡಲದಲ್ಲಿ ಸ್ಥಾಪಿಸಲಾಯಿತು. ಆದರೆ ಈ ಎಲ್ಲ ಕಾರ್ಯಕ್ರಮಗಳೂ 1952ರ ವರೆಗೆ ಸ್ತಬ್ಧಗೊಂಡಿದ್ದವು. 1952 ರಲ್ಲಿ ಅಸ್ತಿತ್ವಕ್ಕೆ ಬಂದ ಹೊಸ ಸರ್ಕಾರ ಈ ಕೇಂದ್ರ ಜೇನು ಕೃಷಿ ಕಾರ್ಯಕ್ರಮವನ್ನು ಅಭಿವೃದ್ಧಿಗೊಳಿಸಲು ಯೋಜನೆಯನ್ನು ಹಮ್ಮಿಕೊಂಡಿತು. ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ ಇದಕ್ಕಾಗಿ ಒಂದು ಲಕ್ಷ ರೂಪಾಯಿಗಳನ್ನು ಇಡಲಾಗಿತ್ತು. ಈ ಯೋಜನೆಯಂತೆ, ಕೇಂದ್ರ ಜೇನುಕೃಷಿಯಿಂದ, ಜೇನು ಸಾಕುವವರಿಗೆ ಜೇನು ಹಿಡಿಯುವ ಡಬ್ಬಗಳನ್ನು ಕೊಡುವುದು, ಮತ್ತು ಜಿಲ್ಲೆಯ ಇತರ ಸ್ಥಳಗಳಲ್ಲಿ ಜೇನು ಕೇಂದ್ರಗಳನ್ನು ಸ್ಥಾಪಿಸುವುದು ಮೊದಲಾದ ಕಾರ್ಯಕ್ರಮಗಳನ್ನು ನಡೆಸಿತು. 1956 ರ ಫೆಬ್ರುವರಿವರೆಗೆ ರೂ. 98,900 ಗಳನ್ನು ಖರ್ಚು ಮಾಡಲಾಗಿತ್ತು.

ದ್ವಿತೀಯ ಪಂಚವಾರ್ಷಿಕ ಯೋಜನೆಯನ್ವಯ ಗ್ರಾಮೀಣ ಮತ್ತು ಸಣ್ಣ ಪ್ರಮಾಣದ ಉದ್ಯಮಗಳಿಗಾಗಿ ಮೀಸಲಿಟ್ಟಿದ್ದ ರೂ. 18.95 ಲಕ್ಷದಲ್ಲಿ ಸುಮಾರು ಶೇ. 50 ಎಂದರೆ ರೂ. 9.11 ಲಕ್ಷವನ್ನು ಈ ಜೇನು ಉದ್ಯಮಕ್ಕಾಗಿಯೇ ನಿಗದಿಪಡಿಸಲಾಗಿತ್ತು. ವಾರ್ಷಿಕ 5,000 ಡಬ್ಬಿಗಳಂತೆ, ಹಳೆಯ ಮಡಿಕೆ ಗೂಡುಗಳನ್ನು ಡಬ್ಬಿಗಳಾಗಿ ಮಾರ್ಪಡಿಸಲಾಯಿತು. ಭಾಗಮಂಡಲದ ಕೇಂದ್ರ ಸರ್ಕಾರದ ಜೇನು ಕೇಂದ್ರದಲ್ಲಿನ ಜೇನುಕೃಷಿ ಸಂಗ್ರಹಾಲಯ ಮತ್ತು ಜೇನುಪುಸ್ತಕ ಭಂಡಾರಗಳನ್ನು ವೃದ್ಧಿಪಡಿಸಲಾಯಿತು. ಮೂರನೇಯ ಪಂಚವಾರ್ಷಿಕ ಯೋಜನೆಯನ್ವಯ 10 ಲಕ್ಷ ರೂ.ಗಳನ್ನು ಜೇನು ಕೃಷಿ ಈ ಜಿಲ್ಲೆಯಲ್ಲಿ ವಿಸ್ತರಿಸಲು ತೊಡಗಿಸಲಾಗಿತ್ತು. ಜೇನು ಸಹಕಾರಿ ಸಂಘಗಳಿಗೆ ಅನುದಾನವನ್ನೂ, ಮತ್ತು ಉದ್ಯೋಗಿಗಳಿಗೆ ತರಬೇತಿಯನ್ನೂ ಕೊಡಲಾಯಿತು. ಅಖಿಲ ಭಾರತ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯೂ ಸಹ ಜೇನುಕೃಷಿಗೆ ಸಹಾಯ ಒದಗಿಸಿತ್ತು.

ಈ ಜಿಲ್ಲೆಯಲ್ಲಿನ ಎರಡು ಬೃಹತ್ ಜೇನು ಸಹಕಾರ ಸಂಘಗಳಾದ ದಿ ಕೂರ್ಗ್ ಪ್ರೊಗ್ರೆಸೀವ್ ಬೀ ಕೀಪರ್ಸ್ ಕೋ ಆಪರೇಟಿವ್ ಸೊಸೈಟಿ, ಭಾಗಮಂಡಲ ಮತ್ತು ದಿ ಕೂರ್ಗ್ ಹನಿ ಅಂಡ್ ವ್ಯಾಕ್ಸ್ ಪ್ರೊಡ್ಯೂಸರ್ಸ್ ಕೋ ಆಪರೇಟಿವ್ ಮಾರ್ಕೆಟಿಂಗ್ ಸೊಸೈಟಿ ಲಿಮಿಟೆಡ್, ವೀರರಾಜಪೇಟೆ, ಖಾದಿ ಮತ್ತು ಗ್ರಾಮೋದ್ಯೋಗ ಕಮಿಷನ್‌ನ

ಸಹಾಯದಿಂದ ಜೇನು ಅಭಿವೃದ್ಧಿ ಯೋಜನೆಗಳಿಗೆ ಸಹಾಯ ಮಾಡುತ್ತವೆ. (ವಿವರಗಳನ್ನು ಅಧ್ಯಾಯ 8 ರಲ್ಲಿ ಕೊಡಲಾಗಿದೆ). 1960ರಲ್ಲಿ ಜಿಲ್ಲೆಯ ಜೇನು ಉತ್ಪಾದನೆ ಒಂದು ಲಕ್ಷ ಕೆ.ಜಿ.ಗಳಿದ್ದು, 1970ರಲ್ಲಿ 1.50, 1980ರಲ್ಲಿ 2.00 86–87ರಲ್ಲಿ 2.75, 1987–88ರಲ್ಲಿ 3.00, 1988-89ರಲ್ಲಿ 3.50, ಮತ್ತು 1989–90ರಲ್ಲಿ 3.60 ಲಕ್ಷ ಕೆ.ಜಿ.ಗಳಾಗಿತ್ತು. (ಇವಲ್ಲದೆ ಖಾಸಗೀ ಕ್ಷೇತ್ರದಲ್ಲಿಯೂ ಜೇನು ಉತ್ಪಾದನೆ ಇದೆ. ಇದು ಒಂದು ಲಕ್ಷ ಕೆ.ಜಿ.ಗೂ ಮೀರಿತ್ತೆಂದು 1960ರ ಸುಮಾರಿಗೆ ಲೆಕ್ಕ ಹಾಕಲಾಗಿತ್ತು).

ಜೇನುತುಪ್ಪವು ಒಂದು ವಿಶಿಷ್ಟವಾದ ದ್ರಾವಕ ವಸ್ತು. ಹೆಚ್ಚು ಪುಷ್ಪರಸ ಸಿಗುವ ಸಮಯದಲ್ಲಿ ಎರಡು ಮೂರು ಜೇನು ಕೋಣೆಗಳಿರುವ ಕುಟುಂಬವು 8–10 ದಿನಗಳಲ್ಲಿ ಸುಮಾರು 4–5 ಕಿಲೋ ಸಂಗ್ರಹಿಸಬಹುದು. ಜೇನುತುಪ್ಪದಲ್ಲಿ ಸಾಮಾನ್ಯವಾಗಿ ಈ ಕೆಳಗೆ ಸೂಚಿಸಿದ ದ್ರವ್ಯಗಳಿರುತ್ತವೆಂದು ಪರಿಶೋಧನೆಯಿಂದ ತಿಳಿದು ಬರುತ್ತದೆ : ನೀರು ಶೇ. 17, ಡೆಕ್ಸಟ್ರೋಸ ಸಕ್ಕರೆ–ಶೇ. 40–50, ಲೆವ್ಯುರೋಸ್ ಸಕ್ಕರೆ-ಶೇ. 34, ಸುಕ್ರೋಸ ಸಕ್ಕರೆ–ಶೇ. 1, ಬೂದಿ ಪದಾರ್ಥಗಳು–ಶೇ. 3.18 ಅಂಟು ಪದಾರ್ಥಗಳು–ಶೇ. 0.15, ಆಮ್ಲ–ಶೇ. 0.08, ಸಾರಜನಕ ಪದಾರ್ಥಗಳು–ಶೇ 0.04. ಜೇನು ಮೇಣವನ್ನು ಜೇನು ಕೃಷಿಯಲ್ಲಿ ಕೃತಕ ಎರಿ ತಳಹದಿ ತಯಾರಿಸಲು ಉಪಯೋಗಿಸುತ್ತಾರೆ. ಇದನ್ನು ಮೇಣದ ಬತ್ತಿ ತಯಾರಿಕೆ, ಚರ್ಮ ಮತ್ತು ಮರ ಗೆಲಸಗಳಲ್ಲಿ ಸಿಮೆಂಟ್ ನೆಲಕ್ಕೆ ಪಾಲಿಶ್ ಮಾಡಲು, ಕೆಲವು ಸೌಂದರ್ಯ ದ್ರವ್ಯಗಳ ತಯಾರಿಕೆ, ಬೂಟುಪಾಲಿಶ್ ತಯಾರಿಕೆ, ಗ್ರಾಮೊಫೋನ್ ರೆಕಾರ್ಡ್ ತಯಾರಿಕೆ, ದಂತ ಚಿಕಿತ್ಸೆ, ವಿದ್ಯುಚ್ಛಕ್ತಿ ಮತ್ತು ಗಾಜು ಉದ್ಯಮ ಹಾಗೂ ಮುದ್ರಣಾಲಯ ಇವುಗಳಲ್ಲಿ ಉಪಯೋಗಿಸುತ್ತಾರೆ.

ಜೇನುತುಪ್ಪಕ್ಕೆ ಈ ಕೆಳಗಿನ ರೋಗಗಳನ್ನು ಉಪಶಮನಗೊಳಿಸುವ ಶಕ್ತಿ ಇದೆಯೆಂದು ತಿಳಿಯಲಾಗಿದೆ. ಸಿಹಿ ಮೂತ್ರ ರೋಗ, ರಕ್ತದ ಒತ್ತಡ, ನ್ಯೂಮೋನಿಯಾ, ಶೀತ ಮತ್ತು ಕೆಮ್ಮು, ಟೈಫಾಯಿಡ್, ಕ್ಷಯ, ವಿಷಮಶೀತಜ್ವರ, ಗಂಟಲು ಬೇನೆ, ಸಿಡುಬು ಶೀತಾಳ, ಮೂತ್ರ ಪಿಂಡದ ರೋಗ, ಮಲ ಬದ್ಧತೆ, ಸುಟ್ಟಗಾಯ ಮತ್ತು ಜಜ್ಜಿದ ಗಾಯ.

ಮಡಿಕೇರಿಯಲ್ಲಿ ಜೇನು ಕೃಷಿ ಅಭಿವೃದ್ಧಿ ಅಧಿಕಾರಿಗಳು ಇದ್ದು, ಜೇನುಕೃಷಿಯ ಉಸ್ತುವಾರಿ ನೋಡಿಕೊಳ್ಳುವರು. ಇದು ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆಯ ಒಂದು ಅಂಗ ಕಛೇರಿ ಆಗಿದೆ.

1980-81 ರಿಂದ 1990-91ರವರೆಗಿನ ಜೇನು ಕೃಷಿಯ ವಿವರವನ್ನು ಇಲ್ಲಿ ಕೊಡಲಾಗಿದೆ.

| ವರ್ಷ | ಜೇನು ಕುಟುಂಬಗಳು (ಸಂಖ್ಯೆ) | ಜೇನುಗೂಡುಗಳ ವಿತರಣೆ (ಸಂಖ್ಯೆ) | ವ್ಯಾಪ್ತಿಯಲ್ಲಿರುವ ಹಳ್ಳಿಗಳು | ಜೇನು ಉತ್ಪಾದನೆ (ಕೆ.ಜಿ.) | ಜೇನು ಕೃಷಿಕರ (ಸಂಖ್ಯೆ) |
|---|---|---|---|---|---|
| 1980–81 | 40,224 | 1,085 | 220 | 1,96,042 | 10,055 |
| 1981–82 | 42,236 | 990 | 226 | 2,11,180 | 10,620 |
| 1982–83 | 44,506 | 835 | 231 | 2,20,530 | 10,940 |
| 1983–84 | 49,104 | 2,405 | 238 | 2,47,020 | 11,660 |
| 1984–85 | 51,009 | 1,592 | 247 | 2,55,045 | 11,920 |
| 1985–86 | 53,202 | 1,858 | 259 | 2,66,010 | 12,320 |
| 1986–87 | 55,108 | 1,088 | 265 | 2,75,540 | 12,864 |
| 1987–88 | 57,202 | 225 | 272 | 3,06,010 | 13,020 |
| 1988–89 | 58,304 | 220 | 277 | 3,01,520 | 13,206 |
| 1989–90 | 59,202 | 400 | 281 | 3,55,212 | 13,478 |
| 1990–91 | 60,432 | 750 | 285 | 3,62,592 | 13,702 |

ಆಧಾರ : ಜೇನು ಕೃಷಿ ಅಭಿವೃದ್ಧಿ ಅಧಿಕಾರಿ, ಕೊಡಗು

## ಜೇನು ಕೃಷಿ ರೋಗಗಳು

ಕರ್ನಾಟಕ ರಾಜ್ಯದಲ್ಲಿ ಜೇನು ಕುಟುಂಬಗಳಿಗೆ ಇತ್ತೀಚಿನ ವರ್ಷಗಳವರೆಗೆ ಯಾವುದೇ ರೋಗ ತಗುಲಿದ ನಿದರ್ಶನವಿರಲಿಲ್ಲ. ಆದರೆ 1992ರಲ್ಲಿ ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಗಡಿಪ್ರದೇಶದಲ್ಲಿನ ಗ್ರಾಮಗಳಲ್ಲಿ ಪೆಟ್ಟಿಗೆಗಳಲ್ಲಿ ಸಾಕುವ ತುಡುವೆ ಜಾತಿಯ ಜೇನು ಕುಟುಂಬಗಳ ಮರಿಗಳಿಗೆ ಥಾಯಿಶ್ಯಾಕ ಬ್ರೂಡ ಎಂಬ ರೋಗಬಂದುದು ಕಂಡುಬಂದಿದೆ. ಇಲ್ಲಿನ ಜೇನು ಕೃಷಿಕರ ಅಭಿಪ್ರಾಯದಂತೆ ಈ ರೋಗವು 1991 ಅಕ್ಟೋಬರ್–ನವೆಂಬರ್ ತಿಂಗಳುಗಳಲ್ಲಿ ಪ್ರಾರಂಭವಾಗಿರಬಹುದೆಂದು ಶಂಕಿಸಲಾಗಿದೆ. ಉತ್ತರಭಾರತದಲ್ಲಿ ಪೆಟ್ಟಿಗೆಯಲ್ಲಿ ಸಾಕುವ ತುಡುವೆ ಜಾತಿಯ ಜೇನು ಕುಟುಂಬದ ಹುಳುಮರಿಗಳಿಗೆ ಯುರೋಪಿಯನ್ ಫೌಲ್‌ಬ್ರೂಡ ಮತ್ತು ಥಾಯಿಶ್ಯಾಕ ಬ್ರೂಡ್ ಎಂಬ ಕಾಯಿಲೆಗಳು ಕಳೆದ ಕೆಲವು ವರ್ಷಗಳಿಂದ ಬರುತ್ತಿವೆ. ಯುರೋಪಿಯನ್ ಫಾಲ್ ಬ್ರೂಡ್ ಕಾಯಿಲೆಯೂ ಬ್ಯಾಕ್ಟೀರಿಯಾ ರೋಗಾಣುಗಳ ಮೂಲಕ ಹಾಗೂ ಥಾಯಿಶ್ಯಾಕ ಬ್ರೂಡ್ ಕಾಯಿಲೆಯು ವೈರಸ್ ರೋಗಾಣುಗಳ ಮೂಲಕ ಬರುವುದೆಂದು ಗುರುತಿಸಲಾಗಿದೆ. ಈಗ ಕರ್ನಾಟಕದಲ್ಲಿ ಕಂಡುಬಂದಿರುವ ಕಾಯಿಲೆಯೂ ಥಾಯಿಶ್ಯಾಕ ಬ್ರೂಡ್ ಎಂದು ತಿಳಿದುಬಂದಿದೆ. ಕಾಯಿಲೆ ಹರಡದಂತೆ ತಡೆಗಟ್ಟಲು, ಈ ಕೆಳಗಿನ ಮುಂಜಾಗ್ರತಾ ಕ್ರಮಗಳನ್ನು ಜೇನು ಕೃಷಿ ಅಭಿವೃದ್ಧಿ ಇಲಾಖೆ ಸೂಚಿಸಿದೆ.

ಅ) ರೋಗ ಪೀಡಿತ ಜೇನು ಕುಟುಂಬದ ಎರಿಗಳನ್ನು ಮತ್ತು ನೊಣಗಳನ್ನು ಸುಟ್ಟು ನಾಶ ಮಾಡುವುದು. ಮೇಣ ಪಡೆಯುವಾಗ, ಎರಿಗಳನ್ನು ಕುದಿಯುವ ನೀರಿನಲ್ಲಿ ಮುಳುಗಿಸಿ ಮೇಣ ಪಡೆಯುವುದು. ರೋಗ ಬಂದ ಪೆಟ್ಟಿಗೆಯ ಎಲ್ಲಾ ಭಾಗಗಳನ್ನು ಕುದಿಯುವ ನೀರಿನಲ್ಲಿ 10 ರಿಂದ 15 ನಿಮಿಷ ಮುಳುಗಿಸಿಟ್ಟು, ಒಣಗಿದ ನಂತರ ಹೊಸಕುಟುಂಬಕ್ಕೆ ಸೇರಿಸುವುದು. ಆ) ಕಾಯಿಲೆ ಇರುವ ಪೆಟ್ಟಿಗೆಯನ್ನು ಪರೀಕ್ಷಿಸಲು ಉಪಯೋಗಿಸಿದ ಎಲ್ಲಾ ಉಪಕರಣಗಳನ್ನು ಕುದಿಯುವ ನೀರಿನಲ್ಲಿ ಮುಳುಗಿಸಿ ನಂತರ ಉಪಯೋಗಿಸುವುದು. ಕಾಯಿಲೆ ಬಂದಿರುವ ಜೇನು ಎರಿಗಳಿಂದ, ಜೇನನ್ನು ಯಂತ್ರದ ಸಹಾಯದಿಂದ ತೆಗೆಯಬಾರದು, ಬಟ್ಟೆಯನ್ನು ಕುದಿಯುವ ನೀರಿನಲ್ಲಿ ಮುಳುಗಿಸಬೇಕು. ಇ) ಜೇನು ಕೃಷಿಕರು ರೋಗ ಪೀಡಿತ ಕುಟುಂಬಗಳನ್ನು ಪರೀಕ್ಷಿಸಿದ ನಂತರ ತಮ್ಮ ಕೈಕಾಲುಗಳನ್ನು ಶುಚಿ ಮಾಡಿಕೊಳ್ಳಬೇಕು.

ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ವತಿಯಿಂದ ನಡೆಯುವ ಕೆಲವು ಜೇನುಕೃಷಿ ಕೇಂದ್ರಗಳು : ನಾಪೋಕ್ಲು, ನೆಲಜಿ, ಪಾರಾಣೆ, ಬಾಡಗರಕೇರಿ, ಬಿಟ್ಟಂಗಾಲ, ಗೋಣಿಕೊಪ್ಪಲು, ನೆಮ್ಮಾಲೆ, ಕಡಂಗ, ಹೈಸೊಡಲೂರು, ಬಡಗೊಂಕೇರಿ, ಪೇರೂರು, ಅರ್ಜಿ, ಪೊಲ್ಲಿಕೋಟೆ, ನರಿಯಂದಡ, ಅಮ್ಮತ್ತಿ, ಕಿಬ್ಬೆಟ್ಟು, ಬೆಟ್ಟದಕೊಪ್ಪ, ಬಚ್ಚಳ್ಳಿ, ನಂಜರಾಜಪಟ್ಟಣ, ಹೆಬ್ಬಟಗೇರಿ, ಬೆಟ್ಟಗೇರಿ, ಬಿಳಿಗಿರಿ, ಬೇಗೂರು, ಕುತ್ತಿ, ಮಾದಾಪುರ ಹಟ್ಟಿ, ಕಂದಚೇರಿ, ಸುಂಟಿಕೊಪ್ಪ, ಗೆಜ್ಜನಕೋಡು, ಗರವಾಲೆ, ಬೆಟ್ಟಗೇರಿ, ಮೂರ್ನಾಡು ಮತ್ತು ಭಾಗಮಂಡಲ. ಇವಲ್ಲದೆ ಸಾಗರಹೊಳೆ, ಬೇಗೂರು, ಶ್ರೀಮಂಗಲ, ತಿತಿಮತಿ, ಪೊನ್ನಂಪೇಟೆ, ಬಿರುನಾಣಿ, ಬಿ. ಶೆಟ್ಟಿಗೇರಿ, ಪೊಲ್ಲಿಬೆಟ್ಟ, ವೀರರಾಜಪೇಟೆ, ಕಕ್ಕಬ್ಬೆ, ಭಾಗಮಂಡಲ, ಮಡಿಕೇರಿ, ಗಾಳೀಬೀಡು, ಚೆಟ್ಟಳ್ಳಿ, ಮಾದಾಪುರ, ಸೋಮವಾರಪೇಟೆ, ಶನಿವಾರಸಂತೆ, ಶಾಂತಳ್ಳಿ, ಜಕ್ಕನಳ್ಳಿ, ಕೊಡಿಗೆಗಳಲ್ಲಿ ಸರ್ಕಾರದ ಕೇಂದ್ರಗಳೂ ಇವೆ. ಕೆಲವು ಶಾಲೆ, ಕಾಲೇಜುಗಳಲ್ಲಿ ಜೇನುಕೃಷಿ ಕ್ಲಬ್‌ಗಳ, ಕೆಲವು ವಾಣಿಜ್ಯ ಜೇನುಕೃಷಿ ಕೇಂದ್ರಗಳೂ, ಕಾಫಿ ಏಲಕ್ಕಿ ತೋಟದಲ್ಲಿನ ಜೇನುಕೃಷಿ ಕೇಂದ್ರಗಳೂ ಇವೆ.

ಖಾಸಗೀ ಜೇನುಕೃಷಿಕರ ಸಂಖ್ಯೆ 1963-64ರಲ್ಲಿ 16,000, ಹಳೆಯ ವಿಧಾನವನ್ನು ಅನುಸರಿಸುತ್ತಿದ್ದು, ಪ್ರಸ್ತುತ (1991) ಕೃಷಿಕರ ಸಂಖ್ಯೆ ಹೆಚ್ಚಿಲ್ಲದಿದ್ದರೂ (ಸುಮಾರು 20,000), ಹೊಸವಿಧಾನದಿಂದ ಹೆಚ್ಚು ಜೇನನ್ನು ಪಡೆಯಲಾಗುತ್ತಿದೆ. 1963ರಲ್ಲಿ ಪ್ರಾದೇಶಿಕ ಜೇನು ಸಂಶೋಧನೆ ತರಬೇತಿ ಕೇಂದ್ರವನ್ನು ಮಡಿಕೇರಿಯಲ್ಲಿ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ನೇತೃತ್ವದಲ್ಲಿ ಸ್ಥಾಪಿಸಲಾಯಿತು. ದೇಶದ ಒಟ್ಟು ಜೇನು ಉತ್ಪಾದನೆಯ ಶೇ. 60ರಷ್ಟು ಕರ್ನಾಟಕದಲ್ಲಿ ಉತ್ಪಾದನೆ ಆಗುತ್ತಿದೆ. ಕೊಡಗಿನಲ್ಲಿ ಈ ಪೈಕಿ ಶೇ. 66 ರಷ್ಟನ್ನು ಉತ್ಪಾದಿಸಲಾಗುತ್ತಿದೆ. ಆದ್ದರಿಂದ ಈ ಕೇಂದ್ರವು ಜೇನುಕೃಷಿಯಲ್ಲಿ ಸಂಶೋಧನೆ ಹಾಗೂ ಜೇನು ನೊಣಗಳ ಬಗ್ಗೆ ಅಧ್ಯಯನ ಮಾಡುವಲ್ಲಿ ಮುನ್ನಡೆ ಸಾಧಿಸಿದೆ. ಈ ದಿಸೆಯಲ್ಲಿ ಕರ್ನಾಟಕ ಸರಕಾರದ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯಿಂದ, ಒಬ್ಬ ಜೇನುಕೃಷಿ ಅಭಿವೃದ್ಧಿ ಅಧಿಕಾರಿಯನ್ನು ಮಡಿಕೇರಿಯಲ್ಲಿ ನೇಮಿಸಲಾಗಿದೆ.

ಕೊಡಗು ಜಿಲ್ಲೆಯಲ್ಲಿ ಜೇನು ನೊಣಗಳಿಗೆ ಪುಷ್ಪ ಅಥವಾ ಪರಾಗವನ್ನು ಒದಗಿಸುವ ಕೆಲವು ಅತೀ ಮುಖ್ಯ ಸಸ್ಯಗಳ ವಿವರಗಳನ್ನು ಕೊಡಲಾಗಿದೆ.

**ಜನವರಿಯಲ್ಲಿ :** ನಿಂಬೆಗಿಡ, ನೊಗಮೊರ, ತುಂಬೆಗಿಡ, ಮಾವಿನ ಮರ, ಅಂಬಟೆಮರ, ಬುರುಗುಮರ, ಕಾಡುತುಂಬೆ ಗಿಡ, ಮುನಿಮುಳ್ಳು ಮತ್ತು ನೆಕ್ಕಿ.

**ಫೆಬ್ರವರಿ :** ನೊಗಮರ, ನೇರಳೇಮರ, ತೆಂಗಿನಮರ, ಸೀಗೆ ಬಳ್ಳಿ, ಕಾಡುಗೇರು, ಅಂಬಟೆಮರ, ಗೇರುಮರ, ಬಾಗೇಮರ, ಹಾಲಿವಾಣ (ಹಾರಿವಾಣ), ಕಾಡು ಹಾಲಿವಾಣ, ಅಡಿಕೆ ಹೂ, ಕಾಫಿ ಹೂ, ತುಂಬೆಗಿಡ.

**ಮಾರ್ಚ್ :** ನಂದಿಮರ, ಬಾಗೇಮರ, ನಾಯಿತುಳಸಿ, ಕಾಡು ಕಾಫಿ, ಕರಿಕಾಯಿಮರ, ಕಿತ್ತಳೆ ಗಿಡ, ಸೀಗೆಬಳ್ಳಿ, ಬಾಳೆಮರ, ನೆಲ್ಲಿ, ನೇರಳೇಮರ, ಬಿಳಿಧೂಪ, ಹೊಂಗೇಮರ.

**ಏಪ್ರಿಲ್ :** ಕರಂಬೇಲು (ಬಿಳೇಸೂಲಿ ಗಿಡ), ಪೊಂಜಿನೊಗ (ದೊಡ್ಡಗ್ಗಿಲ್ಲಮರ), ಕರ್ಮಂಜಿ, ನಾಯಿತುಳಸಿ, ಬೆಣ್ಣೆ ಕರ್ತಿ, ನಂದಿಮರ, ಸೌತೆಬಳ್ಳಿ, ಸಾಸಿವೆಗಿಡ, ಬಾಗೇಮರ, ಕಾಡು ಮಲ್ಲಿಗೆ, ನೇರಳೇಮರ, ಬಿಲ್ವಾರದ ಮರ, ಬಿಳಿ ಉಮ್ಮತ್ತಿ.

**ಮೇ :** ನಂದಿಮರ, ಬಿಳಿ ಉಮ್ಮತ್ತಿ, ತಡಸಲಮರ, ಉಡುತಲೆ, ಬೆಣ್ಣೆಕರ್ತಿ, ರೆಂಜೆಮರ, ಹುಣಸೆಮರ, ಅಡಿಕೆ ಮರ, ಕಿತ್ತಳೆ, ತುಂಬೆಗಿಡ, ದೊಡ್ಡ ಬಂದಣಿಕೆ, ಜಂಬು ನೇರಳೆ, ಸಂಪಿಗೆ, ಹೊನ್ನೆ, ಗಂಧದಮರ, ದಾಳಿಂಬೆ, ಕಾಡು ತುಂಬೆ.

**ಜೂನ್ :** ಕರಂಬೇಲು, ಬೂತಾಳೆ, ತೇಗ.

**ಜುಲೈ :** ಮೂದಮರ, ಚೇಪೇಮರ, ಕೆಂಪುದಾಸವಾಳ, ನಾಯಿತುಳಿಸಿ, ಮುನಿಮುಳ್ಳು, ಕಾಡುಕುಂಬಳಬಳ್ಳಿ, ತುಂಬೆ ಗಿಡ, ಬಿಳಿ ಉಮ್ಮತ್ತಿ, ಗಿನಿಗ್ರಾಸ್, ಚಿನ್ನದ ಕಡ್ಡಿ.

**ಆಗಸ್ಟ್ :** ತುಂಬೆಗಿಡ, ಬಿಳಿ ಉಮ್ಮತ್ತಿ, ಕೆಂಪು ದಾಸವಾಳ, ಶೇವಂತಿಗೆ, ಹೊನ್ನೆಮರ, ಚಿನ್ನದಕಡ್ಡಿ ಕಾಡುಕುಂಬಳಿ ಬಳ್ಳಿ.

**ಸೆಪ್ಟೆಂಬರ್ :** ತುಂಬೆಗಿಡ, ಬಿಳಿತುಂಬೆ, ಕೆಂಪು ದಾಸವಾಳ, ಬಿಳಿದಾಸವಾಳ, ಚೇಪೇಮರ, ಸೀಗೆಬಳ್ಳಿ, ಕಾಡುಕುಂಬಳಬಳ್ಳಿ, ಉಡುತಲೆ.

**ಅಕ್ಟೋಬರ್ :** ಸೀಗೆ ಬಳ್ಳಿ, ಬೈನೆ ಮರ.

**ನವೆಂಬರ್ :** ಜಂಬುನೇರಳೆ, ನೆಲ್ಲಿಮರ, ನೆಕ್ಕಿ, ಚಿನ್ನದ ಕಡ್ಡಿ, ನಾಯಿ ತುಳಸಿ, ತುಂಬೆಗಿಡ, ಬಿಳಿ ಉಮ್ಮತ್ತಿ, ಸೂರ್ಯಕಾಂತಿ ಹೊನ್ನೆಮರ, ಸುರಗಿಮರ.

**ಡಿಸೆಂಬರ್ :** ಬಿಳಿತುಂಬೆ, ಸುರಗಿ ಮರ, ಮಾವಿನ ಮರ, ಅವರೆಗಿಡ, ನೊಗೆಮೊರ, ಬಿಳಿಮತ್ತಿ, ಕಾಡುಬಾದಾಮಿ.

### ಜೇನುಕೃಷಿ ಉನ್ನತಿಗೆ ಬೇಕಾದ ಸೌಕರ್ಯಗಳು

ನಮ್ಮ ರಾಜ್ಯದಲ್ಲಿ ಜೇನುಕೃಷಿ ಕ್ರಮವು ಪಾಶ್ಚಿಮಾತ್ಯ ದೇಶಗಳ ಜೇನುಕೃಷಿಗೆ ಹೋಲಿಸಿದಾಗ ವಿಭಿನ್ನವಾಗಿದೆ. ಅಲ್ಲಿ ಕೃಷಿಯನ್ನು ಅತ್ಯಾಧುನಿಕ ರೀತಿಯಲ್ಲಿ ಮಾಡುವರು. ಇಲ್ಲಿ ಪ್ರಗತಿಯನ್ನು ಸಾಧಿಸಲು, ಜೇನುಕೃಷಿಕರ ಮನೋಭಾವವು ಅಗತ್ಯ. ಈ ಜಿಲ್ಲೆಯಲ್ಲಿ ಜೇನು ಕೃಷಿಕರು ನೈಸರ್ಗಿಕವಾಗಿ ದೊರಕುವ ಜೇನೊಕ್ಕಲುಗಳನ್ನು ತಮ್ಮ ಜೇನು ಪೆಟ್ಟಿಗೆಯಲ್ಲಿ ಸಾಕುವಲ್ಲಿಯವರೆಗೆ ಮಾತ್ರ ಶಾಸ್ತ್ರೀಯವಾಗಿ ಮುನ್ನಡೆದಿದ್ದಾರೆ. ಆದರೆ ಅಲ್ಲಿ, ಕೃಷಿಕರು ಯಾವಾಗಲೂ ತಮ್ಮ ಜೇನು ಕುಟುಂಬಗಳಲ್ಲಿ ಉತ್ತಮ ತಳಿಯ ಯೌವನದ ರಾಣಿಯು ಇರುವಂತೆ ನಿಗಾವಹಿಸುತ್ತಾರೆ. ಅವರು ತಮ್ಮಲ್ಲಿರುವ ಜೇನು ಕುಟುಂಬಗಳಲ್ಲಿ ಅತಿ ಉತ್ತಮ ಕುಟುಂಬವನ್ನು ಆಯ್ಕೆಮಾಡಿ ಅದರಿಂದ ರಾಣಿಗಳನ್ನು ಬೆಳೆಸಿ, ಎಲ್ಲಾ ಇತರ ಕುಟುಂಬಗಳ ರಾಣಿಗಳನ್ನು ತೆಗೆದು ಅವುಗಳ ಬದಲಿಗೆ ಅವರೇ ಈ ರೀತಿ ಬೆಳೆಸಿದ, ಹೊಸ ರಾಣಿಗಳನ್ನು ಗೂಡಿಗೆ ಸೇರಿಸುತ್ತಿರುತ್ತಾರೆ. ಹೀಗೆ ಒಂದು ಅಥವಾ ಎರಡು ವರ್ಷಕ್ಕೊಮ್ಮೆ ರಾಣಿನೊಣಗಳನ್ನು ಅದಲು-ಬದಲು ಮಾಡುತ್ತಿರುತ್ತಾರೆ. ಒಂದು ರಾಣಿಗೆ ಸುಮಾರು 30 ರಿಂದ 50ರೂ. ಕೊಟ್ಟು ತರುತ್ತಾರೆ. ಇದಲ್ಲದೆ ಪಾಶ್ಚಿಮಾತ್ಯ ದೇಶದಲ್ಲಿ, ಈ ಕೃಷಿಯನ್ನು ಒಂದು ಬೃಹತ್ ಪ್ರಮಾಣದ ಉದ್ಯಮವಾಗಿ ನಡೆಸುತ್ತಾರೆ. ಬೃಹತ್ ಪ್ರಮಾಣದ ಜೇನು ಕೃಷಿಕರು ತಮ್ಮ ಹಿಡುವಳಿಗಳಲ್ಲಿ 5,000 ದಿಂದ 10,000ದ ವರೆವಿಗೂ ಜೇನು ಕುಟುಂಬಗಳನ್ನು ಪೋಷಿಸುತ್ತಾರೆ. ಮಧ್ಯಮ ವರ್ಗದವರು 1,000 ದಿಂದ 5,000ದವರೆಗೆ ಜೇನು ಕುಟುಂಬಗಳನ್ನು ಸಾಕುತ್ತಾರೆ. ಸಣ್ಣ ಪ್ರಮಾಣದವರು 100 ರಿಂದ 1000ದ ವರೆಗೆ ಜೇನು ಕುಟುಂಬಗಳನ್ನು ಸಾಕುತ್ತಾರೆ. ಒಂದುಗೂಡಿನಿಂದ ಸುಮಾರು 20 ಕೆ.ಜಿ. ಜೇನುತುಪ್ಪ ದೊರಕುತ್ತದೆ. ಇದು ನಮ್ಮಲ್ಲಿ ಸಿಗುವ ಜೇನುತುಪ್ಪದ ಮೂರು ಪಟ್ಟನಷ್ಟಿದೆ. ಖಾಸಗೀ ವಲಯದಲ್ಲಿ ಜೇನು ಕೃಷಿಯಿಂದ ಹೆಚ್ಚು ಲಾಭ ಬರದ ಕಾರಣ ಹೆಚ್ಚು ಜನರು ಈ ಬಗ್ಗೆ ಆಕರ್ಷಿತರಾಗಿಲ್ಲ. ಸಹಕಾರ ಸಂಘಗಳ ಸಹಾಯದಿಂದ ಈ ಕೃಷಿ ಹೆಚ್ಚು ಅಭಿವೃದ್ಧಿ ಹೊಂದಬಹುದು.

## ರೇಷ್ಮೆ ಉದ್ಯಮ

ಜಿಲ್ಲೆಯಲ್ಲಿ ರೇಷ್ಮೆ ಉದ್ಯಮವು ಇತ್ತೀಚೆಗೆ ಅಂದರೆ ಪ್ರಥಮ ಪಂಚವಾರ್ಷಿಕ ಯೋಜನೆ, ಅಂತ್ಯದಲ್ಲಿ ಪ್ರಾರಂಭವಾಯಿತು. ಸೋಮವಾರಪೇಟೆ ತಾಲೂಕಿನ ಕೆಲವು ಭಾಗಗಳ

ಕೃಷಿಕರಿಗೆ, ನೀರಾವರಿಯ ಸೌಲಭ್ಯ ಹೆಚ್ಚು ಇಲ್ಲದಿದ್ದುದರಿಂದಲೂ ರಾಗಿ ಅಥವಾ ದ್ವಿದಳ ಧಾನ್ಯಗಳ ಬೆಳೆಗಳನ್ನೇ ಅವಲಂಬಿಸಬೇಕಾಗಿದ್ದುದರಿಂದಲೂ, ಆರ್ಥಿಕ ಬೆಳೆಗಳಾದ ತಂಬಾಕು ಅಥವಾ ಹತ್ತಿ ಬೆಳೆ ಇಲ್ಲದಿದ್ದರಿಂದಲೂ ರೇಷ್ಮೆ ಕೈಗಾರಿಕೆಯನ್ನು ಗೃಹಕೈಗಾರಿಕೆಯನ್ನಾಗಿ ಸ್ಥಾಪಿಸಲು ಯೋಜಿಸಲಾಗಿತ್ತು. 1942ರಲ್ಲಿನ ಒಂದು ಸಮೀಕ್ಷೆಯಲ್ಲೇ ಜಿಲ್ಲೆಯಲ್ಲಿ ರೇಷ್ಮೆ ಉದ್ಯಮವನ್ನು ಪ್ರಾರಂಭಿಸಬಹುದೆಂದು ಶಿಫಾರಸು ಮಾಡಲಾಗಿದೆ. 1955ರಲ್ಲಿ ಕೊಡಿಗೆಯಲ್ಲಿ ಐದು ಎಕರೆ (2 ಹೆಕ್ಟೇರ್) ಪ್ರದೇಶದಲ್ಲಿ ಹಿಪ್ಪುನೇರಳೆಯನ್ನು ಪ್ರಾಯೋಗಿಕವಾಗಿ ಬೆಳೆಯಲಾಯಿತು. ಇದರಿಂದ ಉತ್ತೇಜಕಾರಿ ಫಲಿತಾಂಶ ದೊರೆತಿದ್ದರಿಂದ, ಕುಶಾಲನಗರ ಹೋಬಳಿಯಲ್ಲಿ ಹೆಚ್ಚು ಪ್ರದೇಶವನ್ನು ರೇಷ್ಮೆ ಕೃಷಿಗೆ ಆರಿಸಲಾಯಿತು. ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ, ಕೊಡಿಗೆ ಫಾರ್ಮನ್ನು ಇನ್ನಷ್ಟು ವಿಸ್ತರಿಸಿ ಹಿಪ್ಪುನೇರಳೆ ಹಾಗೂ ರೇಷ್ಮೆ ಹುಳು ಸಾಕಣೆಯಲ್ಲಿ, ಕೃಷಿಕರಿಗೆ, ತರಬೇತಿ ನೀಡಲಾಯಿತು. ಈ ಯೋಜನೆಯಡಿ ಕೊಡಿಗೆಯಲ್ಲಿ ಒಂದು ಸಂಯೋಜಿತ ರೇಷ್ಮೆ ಕೇಂದ್ರವನ್ನು ಮಾಡಿ, ಹಿಪ್ಪುನೇರಳೆ ಬೆಳೆಗಾರರಿಗೆ, ಸರ್ಕಾರದಿಂದ ಅನುದಾನ ಹಾಗೂ ಸಾಲವನ್ನು ಕೊಡಲಾಯಿತು. ಸುಮಾರು 2.30 ಲಕ್ಷ ರೂ.ಗಳನ್ನು ಈ ಯೋಜನೆಯಲ್ಲಿ ರೇಷ್ಮೆ ಕೃಷಿಗಾಗಿ ಖರ್ಚು ಮಾಡಲಾಗಿತ್ತು. 1960-61 ರಲ್ಲಿ ಪ್ರತೀ ಹೆಕ್ಟೇರ್‌ಗೆ 100 ರೂ.ನಂತೆ 6 ಹೆಕ್ಟೇರ್ ಪ್ರದೇಶಕ್ಕೆ, 80 ರೈತರಿಗೆ ಸಾಲ ವಿತರಣೆ ಮಾಡಲಾಯಿತು. ಇದರಿಂದ ಕೃಷಿಕರಿಗೆ ಉತ್ತೇಜನ ದೊರಕಿದಂತಾಗಿ, 1961-62ರಲ್ಲಿ, 4,330 ಕೆ.ಜಿ. ರೇಷ್ಮೆಗೂಡುಗಳನ್ನು ಮತ್ತು 10.89 ಲಕ್ಷ ವಿದೇಶಿ ತಳಿ ಬೀಜಗಳನ್ನು ಉತ್ಪಾದಿಸಲಾಗಿತ್ತು. ಇದರಿಂದ ಪ್ರತೀ ಕುಟುಂಬಕ್ಕೆ ಮಾಸಿಕ ರೂ. 300 ಆದಾಯ ಹೆಚ್ಚಾಯಿತೆಂದು ಅಂದಾಜು ಮಾಡಲಾಗಿತ್ತು. ಕೊಡಗು ಮೂಲದ ಕೆ. ಟಿ. ಅಚ್ಚಯ್ಯ ಎಂಬ ಮದರಾಸು ಪ್ರಾಂತ್ಯದ ಉನ್ನತ ಮಟ್ಟದ ರೇಷ್ಮೆ ಕೃಷಿ ಅಧಿಕಾರಿಯು ದಕ್ಷಿಣದಲ್ಲಿ ರೇಷ್ಮೆ ಉದ್ಯಮಕ್ಕೆ ಉತ್ತೇಜನ ನೀಡಿ ಕೊಳ್ಳೆಗಾಲ ಮೊದಲಾದವುಗಳ ಕಡೆ ಈ ಕೃಷಿಯನ್ನು ಅಭಿವೃದ್ಧಿಪಡಿಸಿದರೆಂಬುದು ಇಲ್ಲಿ ಉಲ್ಲೇಖನೀಯ.

ನಂತರದಲ್ಲಿ ಅಂದರೆ 1980–81 ರಲ್ಲಿ 73 ಹೆಕ್ಟೇರುಗಳಲ್ಲಿ ಹಿಪ್ಪುನೇರಳೆ ಕೃಷಿ ಮಾಡಲ್ಪಟ್ಟು 9 ಮೆಟ್ರಿಕ್ ಟನ್ ರೇಷ್ಮೆಗೂಡು ಹಾಗೂ 0.5 ಟನ್ ರೇಷ್ಮೆ ಉತ್ಪಾದಿಸಲಾಗಿತ್ತು. ಈ ಅಂಕಿ ಅಂಶಗಳು ಅನುಕ್ರಮವಾಗಿ 1983–84 ರಲ್ಲಿ 77, 1 ಮತ್ತು 0.1 ಇದ್ದು, 1985–86 ರಲ್ಲಿ 77, 14 ಮತ್ತು 1 ಆಗಿದ್ದವು. ನಂತರ 1988-89 ನೇ ಸಾಲಿನಲ್ಲಿ 303 ಹೆಕ್ಟೇರು ಹಿಪ್ಪುನೇರಳೆ ಬೆಳೆಸಿದ ಕ್ಷೇತ್ರವಾಗಿದ್ದು, 838 ಜನರು ರೇಷ್ಮೆ ಕೃಷಿಕರಾಗಿದ್ದರು. 1989-90 ರಲ್ಲಿ ಸುಮಾರು 485 ಹೆಕ್ಟೇರು ಜಾಗದಲ್ಲಿ ರೇಷ್ಮೆ ವ್ಯವಸಾಯವನ್ನು 1,400 ಕೃಷಿಕರು ಕೈಗೊಂಡಿದ್ದು 80 ಟನ್ ಗೂಡುಗಳನ್ನು ಬೆಳೆಯಲಾಗಿತ್ತು. ಬೈವೋಲ್ಟಿನ್ ರೇಷ್ಮೆ ಕೃಷಿಯಿಂದ ಹೆಕ್ಟೇರ್‌ಗೆ ನಿವ್ವಳ 70,000 ರೂ. ವರೆಗೆ ಆದಾಯ ಪಡೆಯಬಹುದೆಂದು ಅಂದಾಜು ಮಾಡಲಾಗಿದೆ. ಈ ಜಿಲ್ಲೆಯ ಮಣ್ಣು ಕಪ್ಪು ಮಿಶ್ರಿತ ಕೆಂಪು ಬಣ್ಣ ಹೊಂದಿದ್ದು, ವಾತಾವರಣ ಬೈವೋಲ್ಟಿನ್ ರೇಷ್ಮೆ ಬೆಳೆಯಲು ಉತ್ತಮವಾಗಿದೆ. 1989-90 ರಲ್ಲಿ 5,242 ಮಿಶ್ರತಳಿ ಗೂಡು ಹಾಗೂ 49,503 ಟನ್ ಬೈವೋಲ್ಟಿನ್ ಗೂಡುಗಳನ್ನು ಬೆಳೆಯಲಾಗಿತ್ತು.

ರೇಷ್ಮೆ ಕೃಷಿ ವಿಸ್ತರಣೆಗೆ 1988-89 ಮತ್ತು 89-90 ರಲ್ಲಿ ಕೈಗೊಂಡ ಕೆಲವು ಯೋಜನೆಗಳು ಹೀಗಿವೆ: 1) ಪರಿಶಿಷ್ಟ ವರ್ಗಗಳ ಉಪಯೋಜನೆ: ಈ ಯೋಜನೆಯಲ್ಲಿ 3 ಲಕ್ಷ ರೂ.ಗಳನ್ನು ಸೋಮವಾರಪೇಟೆಯ ಎರಡು ಕಾಲನಿಗಳಲ್ಲಿ ಪ್ರಾರಂಭಿಸಲಾಗಿದೆ. (ಅ) ಸೀಗೆ ಹೊಸೂರು ಪರಿಶಿಷ್ಟ ವರ್ಗ ಸಮುದಾಯ ಹಿಪ್ಪುನೇರಳೆ ಕಾಲನಿಯಲ್ಲಿ 4 ಹೆಕ್ಟೇರ್‌ನಲ್ಲಿ ಹಿಪ್ಪುನೇರಳೆ ವ್ಯವಸಾಯವನ್ನು 8 ಪರಿಶಿಷ್ಟ ವರ್ಗದ ಫಲಾನುಭವಿಗಳು ಮಾಡುತ್ತಿದ್ದಾರೆ. (ಆ) ಯಲಕ್ಕನೂರು ಹೊನ್ನಳ್ಳಿ ಪರಿಶಿಷ್ಟ ವರ್ಗ ಸಮುದಾಯ ಹಿಪ್ಪುನೇರಳೆ ಬೇಸಾಯ ಯೋಜನೆಯಂತೆ 16 ಹೆಕ್ಟೇರ್ ಪ್ರದೇಶದಲ್ಲಿ ರೇಷ್ಮೆ ಕೃಷಿ ವಿಸ್ತರಿಸಲು 8 ಪರಿಶಿಷ್ಟ ವರ್ಗದವರಿಗೆ ಸಹಾಯ ಮಾಡಲಾಗಿದೆ. ವೀರರಾಜಪೇಟೆ ತಾಲೂಕಿನ ಸುಳುಗೋಡು ಗಿರಿಜನ ಸಮುದಾಯ ಕಾಲನಿಯಲ್ಲಿ 2.4 ಹೆಕ್ಟೇರ್ ಜಮೀನಿನಲ್ಲಿ ರೇಷ್ಮೆ ಕೃಷಿ ವಿಸ್ತರಿಸಿ, 16 ಪರಿಶಿಷ್ಟ ವರ್ಗದ ಫಲಾನುಭವಿಗಳಿಗೆ ಉಚಿತವಾಗಿ ರೇಷ್ಮೆ ಹುಳು ಸಾಕುವ ಸಲಕರಣೆ, ಗೊಬ್ಬರ ಮೊದಲಾದವುಗಳನ್ನು ಹಂಚಲಾಗಿದೆ. ವೀರರಾಜಪೇಟೆಯಲ್ಲಿ ಪರಿಶಿಷ್ಟ ವರ್ಗದವರಿಗಾಗಿ ವಿಸ್ತರಣಾ ಕೇಂದ್ರವು 1987-88 ರಲ್ಲಿ ಮಂಜೂರಾಗಿ, ಒಬ್ಬ ರೇಷ್ಮೆ ವಿಸ್ತರಣಾಧಿಕಾರಿ, ಒಬ್ಬ ನಿರೀಕ್ಷಕರು ಹಾಗೂ ಒಬ್ಬ ಪ್ರದರ್ಶಕರು ಅದರಲ್ಲಿ ಇದ್ದಾರೆ. 2) ವಿಶೇಷ ಘಟಕ ಯೋಜನೆಯಂತೆ 23,600 ರೂ.ಗಳನ್ನು 17 ಫಲಾನುಭವಿಗಳಿಗೆ, ಹಿಪ್ಪುನೇರಳೆ ವ್ಯವಸಾಯ ಮಾಡಲು ಪ್ರೋತ್ಸಾಹ ಧನ, ಹುಳು ಸಾಕುವ ಸಲಕರಣೆ ಹಾಗೂ ಹುಳು ಸಾಕುವ ಮನೆಗೆ ಸಹಾಯ ಧನ ರೂಪದಲ್ಲಿ ಕೊಡಲಾಗಿದೆ. 3) ಕಾಡು ವಿಶೇಷ ಘಟಕ ಯೋಜನೆಯಂತೆ 9,800 ರೂ.ಗಳನ್ನು 14 ಫಲಾನುಭವಿ

ಗಳಿಗೆ ವಿತರಿಸಲಾಗಿದೆ. 4) ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆಯ ಅನ್ವಯ, ಉಚಿತವಾಗಿ ಎಂ. 5 ಕಡ್ಡಿಗಳನ್ನು ಸಣ್ಣ ಮತ್ತು ಅತೀ ಸಣ್ಣ ರೈತರಿಗೆ ವಿತರಣೆ, ರೇಷ್ಮೆ ಹುಳು ಸಾಕಲು ಸಲಕರಣೆಗಳನ್ನು ಕೊಳ್ಳಲು ಶೇ. 25 ಸಹಾಯ ಧನ, ಬೈವೋಲ್ಟಿನ್ ರೇಷ್ಮೆ ಬೆಳೆಗಾರರಿಗೆ, ಉಪಕರಣ ಸರಬರಾಜು, ಮಲೆಮಹದೇಶ್ವರ ರೇಷ್ಮೆ ಪ್ರಾತ್ಯಕ್ಷಿಕೆಗೆ ಸಹಾಯ ಧನ, ಈ ಎಲ್ಲ ವಿಧಗಳಲ್ಲಿ ಒಂದು ಲಕ್ಷ ರೂ. ಸಹಾಯ ಒದಗಿಸಲಾಗಿದೆ. 5) ರೇಷ್ಮೆ ಬೆಳೆಯ ಪ್ರಾತ್ಯಕ್ಷಿಕೆಯನ್ನು ಸ್ಥಾಪಿಸಿ 45,000 ರೂ. ಗಳನ್ನು ಮಡಿಕೇರಿ, ವೀರರಾಜಪೇಟೆ ತಾಲೂಕಿನಲ್ಲಿ ಖರ್ಚು ಮಾಡಲಾಗಿದೆ. 6) ಹೊಸ ರೇಷ್ಮೆ ಬೆಳೆಗಾರರಿಗೆ ರೇಷ್ಮೆ ಬೇಸಾಯದ ಬಗ್ಗೆ ತರಬೇತಿ ನೀಡಲು ಕೊಡಿಗೆಯ ಸರ್ಕಾರಿ ರೇಷ್ಮೆ ಕ್ಷೇತ್ರದಲ್ಲಿ 44 ಜನರಿಗೆ ತರಬೇತಿ ನೀಡಲಾಗಿದೆ. 7) ಪ್ಯಾಕೇಜ್ ಪ್ರೋಗ್ರ್ಯಾಂ ಬೆನಿಫಿಟ್ ಯೋಜನೆ ಅನ್ವಯ, ಹೊಸದಾಗಿ ಹಿಪ್ಪುನೇರಳೆ ವ್ಯವಸಾಯ ಮಾಡಿದ ಪರಿಶಿಷ್ಟ ವರ್ಗದ ಫಲಾನುಭವಿಗಳಿಗೆ ಉಚಿತವಾಗಿ ಹುಳು ಸಾಕುವ ಸಲಕರಣೆಗಳನ್ನು ಹೊಂದಲು ಪ್ರತೀ ಕೃಷಿಕನಿಗೆ 2,500 ರೂ.ನಂತೆ 40 ಜನರಿಗೆ ಸಹಾಯ ಧನ ಒದಗಿಸಲಾಗಿದೆ.

ಈ ಜಿಲ್ಲೆಯಲ್ಲಿ ರೇಷ್ಮೆ ಸಹಾಯಕ ನಿರ್ದೇಶಕರ ಕಚೇರಿ ಇದ್ದು, ಈ ಕಚೇರಿಯ ಹಾಗೂ ಅಧೀನದಲ್ಲಿನ ಇತರ ಕಚೇರಿಗಳ ಒಟ್ಟು ವೆಚ್ಚ 1988-89 ರಲ್ಲಿ 3.50 ಲಕ್ಷ ರೂ. ಗಳಿದ್ದು, 1989-90 ರಲ್ಲಿ 6.33 ಲಕ್ಷ ರೂ.ಗಳಾಗಿದ್ದಿತು.

1992-95 ರೇಷ್ಮೆ ಇಲಾಖೆಯ ಯೋಜಿತ ಅಂದಾಜಿನಂತೆ ಜಿಲ್ಲೆಯಲ್ಲಿ ಗೂಡುಗಳು ಹಾಗೂ ಹಿಪ್ಪುನೇರಳೆ ಬೆಳೆಯುವ ಪ್ರದೇಶದ ವಿಸ್ತರಣೆ ಈ ಕೆಳಕಂಡಂತೆ ಆಗಲಿದೆ. ಹಿಪ್ಪುನೇರಳೆ ಬೆಳೆಯುವ ಪ್ರದೇಶಗಳ ಹೆಚ್ಚುವರಿ (ಹೆಕ್ಟೇರುಗಳಲ್ಲಿ)1992-93 ಸೋಮವಾರಪೇಟೆ ತಾ|| 1000 ಮಡಿಕೇರಿ ತಾ|| 160, ವೀರರಾಜಪೇಟೆ ತಾ|| 160, ಮೊತ್ತ 1,320, 1993-94 ಸೋಮವಾರಪೇಟೆ ತಾ|| 1,215, ಮಡಿಕೇರಿ ತಾ|| 240, ವೀರರಾಜಪೇಟೆ ತಾ|| 240, ಮೊತ್ತ 1,695, 1994-95 ಸೋಮವಾರಪೇಟೆ ತಾ|| 1,400, ಮಡಿಕೇರಿ ತಾ|| 320, ವೀರರಾಜಪೇಟೆ ತಾ|| 320, ಮೊತ್ತ 2,040. ಗಳು. ಗೂಡುಗಳ ಉತ್ಪಾದನೆ : 1992-93 ಸೋಮವಾರಪೇಟೆ ತಾ|| 150 ಟನ್, ಮಡಿಕೇರಿ ತಾ|| 40, ವೀರರಾಜಪೇಟೆ ತಾ|| 40, ಮೊತ್ತ 230 ; 1993-94 ಸೋಮವಾರಪೇಟೆ ತಾ|| 200, ಮಡಿಕೇರಿ ತಾ|| 60, ವೀರರಾಜಪೇಟೆ ತಾ|| 60, ಮೊತ್ತ 320 ; 1994-95 ಸೋಮವಾರಪೇಟೆ ತಾ|| 250, ಮಡಿಕೇರಿ ತಾ|| 80, ವೀರರಾಜಪೇಟೆ ತಾ|| 80, ಮೊತ್ತ 410 ಟನ್.

1990-91 ರಲ್ಲಿ ರೇಷ್ಮೆ ಕೃಷಿ ಉದ್ಯಮದ ತ್ವರಿತ ಪ್ರಗತಿಗಾಗಿ ಈ ಕೆಳಕಂಡ ಗ್ರಾಮಗಳನ್ನು ಗುರುತಿಸಲಾಗಿತ್ತು. ಮಡಿಕೇರಿ ತಾಲೂಕು : ಮಾದ್ರೆ, ಕಾಟಕೇರಿ, ಮೂರ್ನಾಡು ಮುತ್ತಾರುಮುಡಿ, ಕಿಗ್ಗಾಲು, ಭಾಗಮಂಡಲ ಹಾಗೂ ಹೊದ್ದೂರು; ವೀರರಾಜಪೇಟೆ ತಾಲೂಕು : ಅಮ್ಮತ್ತಿ, ಬಾಳೆಲೆ, ಪೊನ್ನಂಪೇಟೆ ಹಾಗೂ ಸಿದ್ದಾಪುರ ; ಸೋಮವಾರಪೇಟೆ ತಾಲೂಕು : ಕೊಡ್ಲಿಪೇಟೆ, ಕೊಡ್ಲೂರು, ಬೇಡಗುಟ್ಟೆ ಕಾಜೂರು, ಮುಳ್ಳೂರು, ಅಂಕನಹಳ್ಳಿ, ನಂದಿಗುಂಡ, ಗೌಡಳ್ಳಿ ಗಣಗೂರು, ಗೋಣಿಮರೂರು, ಯಲಕನೂರು, ಮಣಜೂರು ಶಿರಂಗಾಲ, ತೊರೆನೂರು, ಹೆಬ್ಬಾಲೆ, ಹುಲಸೆ, ಕೊಡಿಗೆ, ಕೂಡುಮಂಗಳೂರು, ಮುಳ್ಳುಸೋಗೆ, ಐಗೂರು, ನಾಕೂರು, ಕುಶಾಲನಗರ, ಅಂದಗೋವೆ, ಕಿರಗಂದೂರು ಮತ್ತು ನಿಡ್ತ.

ಇಲ್ಲಿನ ಅರಣ್ಯ ಪ್ರದೇಶವು ಟಸ್ಸಾರ್ ರೇಷ್ಮೆಯ ಉತ್ಪಾದನೆಗೆ ಅತ್ಯಂತ ಸೂಕ್ತವೆಂದು ಭಾವಿಸಲಾದರೂ ಆ ಬಗ್ಗೆ ಇಲ್ಲಿ ವಿಶೇಷ ಪ್ರಗತಿ ಆಗಿಲ್ಲ.

## ಕೈಗಾರಿಕಾ ಸಾಧ್ಯತೆಗಳು

ಕೊಡಗು ಜಿಲ್ಲೆಯಲ್ಲಿ ಇರುವ, ಅನುಕೂಲತೆಗಳನ್ನು, ಬೇಡಿಕೆಗಳನ್ನು ಗಮನದಲ್ಲಿಟ್ಟುಕೊಂಡು ಈ ಕೆಳಕಂಡ ಕೆಲವು ವಸ್ತುಗಳನ್ನು ತಯಾರಿಸುವ ಉದ್ದಿಮೆಗಳನ್ನು ಸ್ಥಾಪಿಸಲು ಹಿತಕರ ವಾತಾವರಣ ಇದೆಯೆಂದು ತಿಳಿಯಲಾಗಿದೆ.

1) ಹವಾಯಿ ಚಪ್ಪಲಿಗಳು, 2) ಪಿ.ವಿ.ಸಿ. ಕೊಳವೆಗಳು ಹಾಗೂ ಚಪ್ಪಲಿಗಳು, 3) ಪ್ಲಾಸ್ಟಿಕ್ ವಸ್ತುಗಳು (ಇಂಜೆಕ್ಷನ್ ಮೌಲ್ಡೆಡ್), 4) ಲೋಹ ಲೇಪಿತ (ಇಲೆಕ್ಟ್ರೊಪ್ಲೇಟೆಡ್) ವಸ್ತುಗಳು, 5) ಬೇಕರಿ ಪದಾರ್ಥಗಳು, 6) ಪೈಂಟ್ ಮತ್ತು ವಾರ್ನಿಷ್, 7) ಲಾಂಡ್ರಿ ಸಾಬೂನು ಮತ್ತು ಜೆಲ್ಲಿ, 8) ಬಾಲ್‌ಪಾಯಿಂಟ್ ಪೆನ್ನು ಮತ್ತು ರೀಫಿಲ್‌ಗಳು, 9) ಟಯರ್ ಪುನರ್ ಹೊದಿಕೆ (ರೀಟ್ರೆಡಿಂಗ್), 10) ಪಾಲಿಥಿನ್ ಬ್ಯಾಗುಗಳು, 11) ಥರ್ಮೋಪ್ಲಾಸ್ಟಿಕ್ ವಸ್ತುಗಳು, 12) ಸಾಂಬಾರ ಪದಾರ್ಥದ ಪುಡಿಗಳು- (ಸಾರಿನ ಪುಡಿ, ಚಟ್ನಿಪುಡಿ, ಇತ್ಯಾದಿ ಕೂಡ), 13) ಒಗೆಯುವ ಸೋಪು ಹಾಗೂ ಸೋಪಿನ ಪುಡಿ, 14) ಬಿಳಿ ಫಿನೈಲ್, 15) ಪ್ಲಾಸ್ಟಿಕ್ ಗುಂಡಿಗಳು, 16) ಪ್ಲಾಸ್ಟಿಕ್‌ನ

ಅಚ್ಚುಹೊಯ್ದ ಪಾತ್ರೆಗಳು, 17) ಮೇಣದ ಬತ್ತಿ, 18) ಡಿಸ್ಟೆಂಪರ್, 19) ಹೆಚ್.ಡಿ.ಪಿ.ಇ. ಚೀಲಗಳು, 20) ಅಲ್ಯೂಮಿನಿಯಂ ಪಾತ್ರೆಗಳು, 21) ಕಬ್ಬಿಣ ಮತ್ತು ಕಬ್ಬಿಣೇತರ ಲೋಹದ ವಸ್ತುಗಳು, 22) ಕಾಫಿ ತೋಟಕ್ಕೆ ಬೇಕಾದ ಯಂತ್ರ ಭಾಗಗಳು, 23) ಗಡಿಯಾರ ದುರಸ್ತಿ, 24) ಛತ್ರಿ ಮಾಡುವುದು, 25) ಕೋಳಿ ಗೂಡುಗಳು, 26) ಬಾಟಲುಗಳ ಮುಚ್ಚಳ, 27) ಬಯೋ ಗ್ಯಾಸ್ ಪ್ಲಾಂಟ್‌ಗಳು, 28) ಸುಣ್ಣ ತಯಾರಿಕೆ, 29) ಸ್ಕ್ರೀನ್ ಮುದ್ರಣ, 30) ಬಣ್ಣಗಳ ಉತ್ಪಾದನೆ, 31) ಕಾಫಿ ಚರಟದಿಂದ ದಪ್ಪ ಹಾಳೆ, 32) ಕೃಷಿಯ ಕಸದಿಂದ ಇಂಧನ, 33) ಸಾಂಬಾರ ಪದಾರ್ಥದ ಎಣ್ಣೆಗಳು, 34) ಹಲಸಿನ ಹಪ್ಪಳ, 35) ಜೇನನ್ನು ಒಳಗೊಂಡ ಮಾದಕ ಪಾನೀಯ, 36) ಹಣ್ಣು ಸಂಸ್ಕರಣೆ ಹಾಗೂ ರಸ ತಯಾರಿಕೆ, 37) ಅಂಟವಾಳದ ಕಾಯಿಯಿಂದ ಶಾಂಪೂ, 38) ಸೀಗೆಕಾಯಿ ಸಾಬೂನು, 39) ನೆಲ್ಲಿ ಅಥವಾ ಗೂಸ್‌ಬೆರ್ರಿ ಹಣ್ಣಿನಿಂದ ಉಪ್ಪಿನಕಾಯಿ, ಮುರಬ್ಬ, 40) ಬೆತ್ತದ ಪೀಠೋಪಕರಣ, 41) ಹಲಗೆಯ ಬಾಗಿಲುಗಳು, 42) ಹೆಂಚು ಮತ್ತು ಇಟ್ಟಿಗೆ, 43) ಕುಂಭಕಲೆಯ ಉತ್ಪನ್ನಗಳು, 44) ಮರದ ಆಟದ ಸಾಮಾನು ಹಾಗೂ ದಿಢೀರ್ ಕಾಫಿ, ಇತ್ಯಾದಿ.